ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

43

ಆಗಸ್ಟ್ 2 ಮಂಗಳವಾರ 2022

₹4

ಸಂಪುಟ: 43 | ಸಂಚಿಕೆ: 108 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528. ಜಾಹೀರಾತು: 2496522, 2496523
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com ಜಾಹೀರಾತು: ad@mysurumithra.com



ನನ್ನ ಮಾತು



ರಾಜಕಾರಣ ಎನ್ನುವುದು ಅಧಿಕಾರ ಎಂದು ನಾನೆಂದೂ ತಿಳಿದುಕೊಂಡವನಲ್ಲ, ಅಧಿಕಾರ ನನ್ನ ಪಾಲಿಗೆ ಜನರ ಸೇವೆ ಮಾಡಲು ಒದಗಿ ಬಂದ ಅವಕಾಶ. ಶಾಸಕ, ಸಚಿವ, ಉಪ ಮುಖ್ಯಮಂತ್ರಿ ,ಮುಖ್ಯಮಂತ್ರಿಯಾಗಿ ಕಳೆದ ನಾಲ್ಕು ದಶಕಗಳಲ್ಲಿ ನನಗೆ ಸಿಕ್ಕ ಅವಕಾಶವನ್ನು ಇದೇ ಉದ್ದೇಶದಿಂದ ಜನರ ಸೇವೆ ಮಾಡಲು ಬಳಸಿಕೊಂಡಿದ್ದೆ. ಅದರಲ್ಲಿ ಯಶಸ್ವಿಯೂ ಆಗಿದ್ದೇನೆ ಎಂಬ ವಿಶ್ವಾಸ ನನಗಿದೆ. ಚುನಾವಣಾ ಕಾಲದ ರಾಜಕೀಯ ವಾಗ್ವಾದಗಳೇನೇ ಇರಲಿ, ಬಹುಮತದಿಂದ ರಚನೆಯಾದ ಸರ್ಕಾರ ರಾಜ್ಯದ ಸಮಸ್ತ ಪ್ರಜೆಗಳಿಗೆ ಉತ್ತರದಾಯಿ ಆಗಿರಬೇಕಾಗುತ್ತದೆ. ಸರ್ಕಾರ ಎನ್ನುವುದು ಪಕ್ಷ, ಪ್ರದೇಶ, ಜಾತಿ, ಧರ್ಮಗಳನ್ನೆಲ್ಲ ಮೀರಿ ಎಲ್ಲರನ್ನೂ ಒಳಗೊಳ್ಳಬೇಕು ಎನ್ನುವ ಅಭಿಪ್ರಾಯ ನನ್ನದು.

ಜನರ ಬೆವರ ಗಳಿಕೆಯ ತೆರಿಗೆ ಹಣವನ್ನು ಬಳಸಿಕೊಂಡು ಚುನಾಯಿತ ಸರ್ಕಾರ ರೂಪಿಸುವ ಯೋಜನೆಗಳು ನಾಡಿನ ಪ್ರತಿಯೊಬ್ಬರಿಗೂ ತಲುಪಿ ಅವರ ಬದುಕು ಹಸನಾಗಬೇಕು. ನಾಡಿನ ಪ್ರತಿಮನೆಯಲ್ಲಿಯೂ ಸರ್ಕಾರದ ಯೋಜನೆಗಳ ಫಲಾನುಭವಿ ಇರಬೇಕು. ಜನತೆಯ ಕಷ್ಟ– ಕೋಟಲೆಗಳಿಗೆ ಪರಿಹಾರದ ರೂಪದಲ್ಲಿ ಯೋಜನೆಗಳು ರೂಪುಗೊಳ್ಳಬೇಕು. ಮುಖ್ಯಮಂತ್ರಿಯಾಗಿ ಮಂಡಿಸಿದ್ದ ಆರು ಬಜೆಟ್ ಸೇರಿದಂತೆ ನಾನು ಮಂಡಿಸಿದ್ದ ಒಟ್ಟು ಹದಿಮೂರು ಬಜೆಟ್‌ಗಳನ್ನು ನಾನು ರೂಪಿಸಿದ್ದು ಕೇವಲ ಆರ್ಥಿಕ ತಜ್ಞನಾಗಿ ಅಲ್ಲ. ಅದು ನನ್ನ ಸಾಮಾಜಿಕ ಮತ್ತು ರಾಜಕೀಯ ಅನುಭವದ ಮೂಸೆಯಿಂದ ಹೊರಬಂದದ್ದು. ನಮ್ಮ ಸರ್ಕಾರದ ಯೋಜನೆಗಳನ್ನು ಗಮನಿಸಿದರೆ ಅದರ ಕೇಂದ್ರದಲ್ಲಿ ಜಾತಿ, ಧರ್ಮ, ಪ್ರದೇಶವನ್ನು ಮೀರಿದ ಹಿತಚಿಂತನೆಯೇ ಪ್ರಧಾನವಾಗಿ ಇರುವುದನ್ನು ಕಾಣಬಹುದು.

ಸಾಮಾನ್ಯ ಮನುಷ್ಯನ
ನಮ್ಮ ಸರ್ಕಾರದ ಐದು
ಯೋಜನೆಯ ಲಾಭ
ನಮ್ಮದು ಸರ್ವರನ್ನೂ
ಸಮಬಾಳು ನೀಡುವುದನ್ನೇ
ಇದನ್ನೇ ನಾನು
ನಮ್ಮ

ವರ್ಷಗಳ ಆಡಳಿತದಲ್ಲಿ ರಾಜ್ಯದ ಆರು ಕೋಟಿ ಜನರು ಒಂದಲ್ಲ ಒಂದು ಪಡೆದಿದ್ದರು ಎನ್ನುವುದನ್ನು ಆತ್ಮತೃಪ್ತಿ ಮತ್ತು ಹೆಮ್ಮೆಯಿಂದ ಹೇಳಿಕೊಳ್ಳಬಲ್ಲೆ. ಒಳಗೊಂಡಿರುವ ಸರ್ವರನ್ನೂ ಬೆಸೆಯುವ ಮತ್ತು ಸರ್ವರಿಗೂ ಸಮಪಾಲು, ಗುರಿಯಾಗಿಟ್ಟುಕೊಂಡ ಸರ್ವೋದಯ ಅಭಿವೃದ್ಧಿ ಮಾದರಿಯಾಗಿತ್ತು. 'ಕರ್ನಾಟಕ ಅಭಿವೃದ್ಧಿ ಮಾದರಿ' ಎಂದು ಹೆಮ್ಮೆಯಿಂದ ಹೇಳಿಕೊಂಡಿದ್ದೆ. ಕರ್ನಾಟಕ ಅಭಿವೃದ್ಧಿ ಮಾದರಿ ಉಳಿದೆಲ್ಲ ಮಾದರಿಗಳಿಗಿಂತ ಭಿನ್ನವಾದುದು. ಇದು ಬಹುಧರ್ಮ, ಬಹುಸಂಸ್ಕೃತಿ ಮತ್ತು ಬಹುಭಾಷೆ ಯನ್ನೊಳಗೊಂಡ ಬಹುತ್ವವನ್ನು ಗೌರವಿಸುವ ಅಭಿವೃದ್ಧಿ ಮಾದರಿಯಾಗಿತ್ತು. ನಮ್ಮ ಅಭಿವೃದ್ಧಿ ಮಾದರಿಗೆ ಕಾಯಕದ ಮಹತ್ವವನ್ನು ವಿಶ್ವಕ್ಕೆ ಸಾರಿದ ಬಸವಣ್ಣ, ಗ್ರಾಮಸ್ವರಾಜ್ಯದ ಹರಿಕಾರ ಮಹಾತ್ಮ ಗಾಂಧೀಜಿ ಮತ್ತು ರಾಜಕೀಯ ಪ್ರಭುತ್ವದ ಜೊತೆ ಆರ್ಥಿಕ ಮತ್ತು ಸಾಮಾಜಿಕ ಪ್ರಜಾಪ್ರಭುತ್ವದ ಅವಶ್ಯಕತೆಯ ಬಗ್ಗೆ ಎಚ್ಚರಿಸಿದ್ದ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಚಿಂತನೆಗಳು ಪ್ರೇರಣೆ ನೀಡಿವೆ. ನಾಡಿನ ಅನೇಕ ಚಿಂತಕರು, ಸಾಹಿತಿಗಳು ಮತ್ತು ಹೋರಾಟ ಗಾರರ ಒಡನಾಟ ಮತ್ತು ನನ್ನ ಸಾರ್ವಜನಿಕ ಜೀವನದ ಅನುಭವ ಗಳು ಈ ಅಭಿವೃದ್ಧಿ ಮಾದರಿಯನ್ನು ರೂಪಿಸಲು ನನಗೆ ನೆರವಾಗಿದೆ.

ರಾಜಕಾರಣಿಗಳ ಬಗ್ಗೆ ಇರುವ ಸಾಮಾನ್ಯ ಆರೋಪ ವಚನ ಭ್ರಷ್ಟತೆ. ಚುನಾವಣೆಗಳ ಕಾಲದಲ್ಲಿ ನೀಡಿದ್ದ ಆಶ್ವಾಸನೆಗಳನ್ನು ಗೆದ್ದ ನಂತರ ಮರೆತುಬಿಡುತ್ತಾರೆ ಎನ್ನುವ ಅಭಿಪ್ರಾಯ ಜನರಲ್ಲಿದೆ. ನಾನು ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ ದಿನವೇ ನನ್ನೊಳಗೆ ನಾನೊಂದು ಪ್ರಮಾಣ ಮಾಡಿದ್ದೆ. ಅದು ನುಡಿದಂತೆ ನಡೆಯಬೇಕೆನ್ನುವ ಪ್ರಮಾಣ. ನನ್ನ ಐದು ವರ್ಷಗಳ ಆಡಳಿತಾವಧಿ ಯಲ್ಲಿ ಈ ಪ್ರತಿಜ್ಞೆಯನ್ನು ಉಳಿಸಿಕೊಂಡಿದ್ದೆ ಎಂದು ವಿಶ್ವಾಸಪೂರ್ವಕವಾಗಿ ಹೇಳಬಲ್ಲೆ. 2013ರ ಚುನಾವಣೆಯನ್ನು 165 ಭರವಸೆಗಳ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯನ್ನು ಮುಂದಿಟ್ಟು ಎದುರಿಸಿದ್ದೆವು. ಅಧಿಕಾರಕ್ಕೆ ಬಂದ ನಂತರ ಆ ಭರವಸೆಗಳನ್ನು ಈಡೇರಿಸುವ ಹೊಣೆಗಾರಿಕೆ ನಮ್ಮ ಸರ್ಕಾರದ ಮೇಲಿತ್ತು. ಆ 165 ಭರವಸೆಗಳ ಪೈಕಿ 158 ಭರವಸೆಗಳಿಗೆ ಕಾರ್ಯ ಕ್ರಮಗಳನ್ನು ರೂಪಿಸಿ ಚಾಲನೆ ನೀಡುವುದರ ಜೊತೆಗೆ ಹೆಚ್ಚುವರಿ ಯಾಗಿ ಇಂದಿರಾ ಕ್ಯಾಂಟೀನ್, ಮಾತೃಪೂರ್ಣ, ವಿದ್ಯಾರ್ಥಿಗಳಿಗೆ ಶೂ ಮತ್ತು ಸಾಕ್ಸ್ ಭಾಗ್ಯ, ಪಶುಭಾಗ್ಯ, ಮೈತ್ರಿ, ಕೃಷಿ ಇ ಮಾರುಕಟ್ಟೆ, ಕೃಷಿ ಯಂತ್ರಧಾರೆ, ರೈತ ಬೆಳಕು, ಸರ್ಕಾರಿ ಟೆಂಡರ್ ಗುತ್ತಿಗೆ ಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಮೀಸಲಾತಿ ಹರೀಶ್ ಸಾಂತ್ವನ ಯೋಜನೆಗಳನ್ನು ಸೇರಿದಂತೆ 33 ಹೊಸ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದೆವು.

ಕರ್ನಾಟಕದ ಸಮಗ್ರ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡೇ ನಮ್ಮ ಎಲ್ಲ ಯೋಜನೆಗಳನ್ನು ರೂಪಿಸಲಾಗಿತ್ತು. ಒಂದೆಡೆ ಜನರ ಮೂಲಭೂತ ಅಗತ್ಯಗಳಾದ ಆಹಾರ, ವಸತಿ, ಆರೋಗ್ಯ, ಶಿಕ್ಷಣದಂಥ ಕ್ಷೇತ್ರಗಳಲ್ಲಿ ವ್ಯಾಪಕ ಸುಧಾರಣೆ ಗಳನ್ನು ತಂದಿದ್ದೆವು. ಆ ಮೂಲಕ ಇಲ್ಲಿನ ಜನಜೀವನದಲ್ಲಿ ಧನಾತ್ಮಕ ಬದಲಾವಣೆಗೆ ಕಾರಣವಾಗಿದ್ದೆವು. ಮತ್ತೊಂದೆಡೆ ಬಂಡವಾಳ ಹೂಡಿಕೆಯೂ ಸೇರಿದಂತೆ ಆರ್ಥಿಕ, ಔದ್ಯಮಿಕ ಹಾಗೂ ಔದ್ಯೋಗಿಕ ಕ್ಷೇತ್ರಗಳಲ್ಲಿ ಸಕಾರಾತ್ಮಕ ವಾತಾವರಣ ವನ್ನು ರೂಪಿಸಿದ್ದೆವು. ಉದ್ಯಮಸ್ನೇಹಿ ನಾಡು, ಕುಶಲ ಮಾನವ ಸಂಪನ್ಮೂಲದ ಬೀಡಾಗಿ ಕರ್ನಾಟಕವನ್ನು ಕಟ್ಟಲು ಭದ್ರ ತಳಪಾಯ ಹಾಕಿಕೊಟ್ಟಿದ್ದೆವು. ಕೃಷಿ ಸಹಜವಾಗಿಯೇ ನಮ್ಮ ಆದ್ಯತೆಯ ಕ್ಷೇತ್ರವಾಗಿತ್ತು. ನಾನು ರೈತನ ಮಗ, ರೈತರ ಮನೆಯ ಕಷ್ಟಗಳ ಅನುಭವ ನನಗಿದೆ. ನನ್ನ ಎಲ್ಲ ಬಜೆಟ್‌ಗಳಲ್ಲಿ ರೈತರ ಬದುಕನ್ನು ಸಮಗ್ರ ರೂಪದಲ್ಲಿ ಸಬಲೀಕರಣಗೊಳಿಸುವ ಪ್ರಯತ್ನ ಮಾಡುತ್ತಾ ಬಂದಿದ್ದೆ. ಕೊನೆಯ ಬಜೆಟ್‌ಗಳಲ್ಲಿ 40 ಸಾವಿರ ಕೋಟಿ ರೂ.ಗಳಿಗೂ ಹೆಚ್ಚು ಹಣವನ್ನು ಕೃಷಿ ಮತ್ತು ಸಂಬಂಧಿತ ಕ್ಷೇತ್ರಗಳಿಗೆ ನೀಡಿದ್ದೆವು. ಕೃಷಿಭಾಗ್ಯ ಯೋಜನೆಯಡಿ ರೈತರಿಗೆ 1.89 ಲಕ್ಷ ಕೃಷಿ ಹೊಂಡಗಳನ್ನು ನಿರ್ಮಿಸಿಕೊಟ್ಟು, ಬರ ಮೆಟ್ಟಿ ನಿಲ್ಲುವ ಚೈತನ್ಯ ನೀಡಿದ್ದೆವು. ಕೃಷಿ ಯಾಂತ್ರೀಕರಣಕ್ಕೆ ಒತ್ತು ನೀಡಿದ್ದೆವು. ನಮ್ಮ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ ಇಡೀ ದೇಶದಲ್ಲೇ ಅತ್ಯಧಿಕ ಪ್ರಮಾಣದಲ್ಲಿ ಸಾಲ ನೀಡಿದ್ದೆವು. 2016–2017ರ ವರೆಗೆ ಬಾಕಿ ಇದ್ದ ಅಲ್ಪಾವಧಿ ಕೃಷಿ ಸಾಲದಲ್ಲಿ 50,000 ರೂಪಾಯಿ ವರೆಗಿನ 22.27 ಲಕ್ಷ ರೈತರ ಒಟ್ಟು 8165 ಕೋಟಿ ರೂ. ಸಾಲ ಮನ್ನಾ ಮಾಡಿದ್ದೆವು. ಮಧ್ಯವರ್ತಿಗಳ ಹಾವಳಿ ತಪ್ಪಿಸಿ ರೈತರ ಬೆಳೆಗೆ ನ್ಯಾಯಯುತ ಬೆಲೆ ದೊರೆಯಬೇಕೆಂಬ ಸದಾಶಯದಿಂದ ಆನ್ ಲೈನ್ ಮಾರುಕಟ್ಟೆ ಸ್ಥಾಪನೆ ಮಾಡಿದ ದೇಶದ ಮೊದಲ ರಾಜ್ಯ ಕರ್ನಾಟಕ. ರಾಜ್ಯದ 157 ಕೃಷಿ ಮಾರುಕಟ್ಟೆಗಳಲ್ಲಿ ಈ ವ್ಯವಸ್ಥೆ ಜಾರಿಗೊಳಿಸಲಾಗಿತ್ತು. ಇದರಿಂದಾಗಿ ರೈತರ ಆದಾಯ ಶೇಕಡಾ 38ರಷ್ಟು ಹೆಚ್ಚಿದೆ ಎಂದು ನೀತಿ ಆಯೋಗವೇ ಶಹಬಾಸ್ ಗಿರಿ ಕೊಟ್ಟಿತ್ತು. ಈ ಯೋಜನೆಯನ್ನು ಮೆಚ್ಚಿಕೊಂಡ ಕೇಂದ್ರ ಕೃಷಿ ಸಚಿವರು ರಾಜ್ಯಗಳ ಕೃಷಿ ಸಚಿವರನ್ನು ಕರ್ನಾಟಕಕ್ಕೆ ಕರೆತಂದು ಈ ಯೋಜನೆಯನ್ನು ಪರಿಚಯಿಸಿದ್ದರು.

ಬೆಳೆ ನಷ್ಟ ಪರಿಹಾರ ಮತ್ತು ಬೆಳೆ ವಿಮೆ ಪಾವತಿಯನ್ನು ಆಧಾರ್ ಜೋಡಣೆಯ ಬ್ಯಾಂಕ್ ಖಾತೆಗಳಿಗೆ ನೇರವಾಗಿ ಜಮೆಗೊಳಿಸುವ ವ್ಯವಸ್ಥೆ ಯನ್ನು ಜಾರಿಗೆ ತಂದ ದೇಶದ ಮೊದಲ ರಾಜ್ಯ ಕೂಡಾ ನಮ್ಮ ಕರ್ನಾಟಕ ಆಗಿತ್ತು. ದೇಶದಲ್ಲಿಯೇ ಮೊದಲ ಬಾರಿ ಭೂ ದಾಖಲೆಗಳನ್ನು ಮಾಹಿತಿ ತಂತ್ರಜ್ಞಾನ ಬಳಸಿ ಡಿಜಿಟಲೈಸ್ ಮಾಡಿದ್ದೆವು. ಇದರಿಂದಾಗಿ ರಾಜ್ಯದ ಎಲ್ಲ ಭೂ ದಾಖಲೆಗಳು ಆನ್‌ಲೈನ್‌ನಲ್ಲಿ ಲಭ್ಯವಿದೆ.ಜಾತಿ ಮತ್ತು ಆದಾಯ ದೃಢೀಕರಣ ಪತ್ರಗಳನ್ನು ನೇರವಾಗಿ ಡೌನ್‌ಲೋಡ್ ಮಾಡಲು ಸಾಧ್ಯವಿರುವ 'ಇ–ಖಾನಾ' ಸೌಲಭ್ಯವನ್ನು ಪ್ರಾರಂಭಿಸಿದ್ದೆವು. ಪಡಿತರ ಕಾರ್ಡುಗಳನ್ನು ಅರ್ಹ ಕುಟುಂಬಗಳು ಆನ್ ಲೈನ್ ನಲ್ಲಿ ಅರ್ಜಿ ಸಲ್ಲಿಸಿದ 15 ದಿನಗಳೊಳಗೆ ಮನೆಗೆ ತಲುಪಿಸುವ ವ್ಯವಸ್ಥೆ ಮಾಡಿದ್ದೆವು. ನೀರಾವರಿ ಯೋಜನೆಗಳಿಗೆ ನೀಡಿರುವ ಅನುದಾನ ಒಂದು ದಾಖಲೆ, ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಐದು ವರ್ಷಗಳ ಅವಧಿಯಲ್ಲಿ ರೂ.58,394 ಕೋಟಿ ಒದಗಿಸಿದ್ದೆವು. ನೀರಾವರಿ ಸೌಲಭ್ಯ ಇಲ್ಲದ ಒಣಭೂಮಿ ರೈತರ ಕಷ್ಟಗಳನ್ನು ಗಮನದಲ್ಲಿರಿಸಿಕೊಂಡು ರಾಜ್ಯದ 70 ಲಕ್ಷ ರೈತರಿಗಾಗಿ 'ರೈತ ಬೆಳಕು' ಎಂಬ ಹೊಸ ಯೋಜನೆಗೆ ಚಾಲನೆ ನೀಡಿದ್ದೆವು. 3500 ಕೋಟಿ ರೂ.ವೆಚ್ಚದ ಈ ಯೋಜನೆಯಲ್ಲಿ ರೈತರ ಖಾತೆಗಳಿಗೆ ನೇರವಾಗಿ ಬೆಂಬಲದ ಮೊತ್ತವನ್ನು ವರ್ಗಾವಣೆ ಮಾಡುವ ಈ ಯೋಜನೆ ಕೂಡಾ ದೇಶದಲ್ಲಿಯೇ ಮೊದಲನೆಯದು. ಸಾವಿರ ರೈತರಿಗೆ ನೆರವಾಗುವ ಏಷ್ಯಾದ ಅತಿದೊಡ್ಡ ತುಂತುರು ಹನಿ ನೀರಾವರಿ ಯೋಜನೆ ಜಾರಿಗೆ ತಂದ ಹೆಗ್ಗಳಿಕೆ ಕೂಡಾ ನಮ್ಮ ಸರ್ಕಾರದ್ದು. ರಾಜ್ಯದಲ್ಲಿರುವ ಕನಿಷ್ಠ ಒಂದು ಕೋಟಿ ರೈತರು ನೇರವಾಗಿ ಸರ್ಕಾರದಿಂದ ಒಂದಿಲ್ಲ ಒಂದು ರೀತಿಯಲ್ಲಿ ಸಹಾಯ ಪಡೆದುಕೊಂಡಿದ್ದಾರೆ. ಕೃಷಿ ಕ್ಷೇತ್ರದಲ್ಲಿನ ಸಾಧನೆ ವೈಯಕ್ತಿಕವಾಗಿಯೂ ನನ್ನಲ್ಲಿ ಆತ್ಮತೃಪ್ತಿ ಮೂಡಿಸಿದೆ. ನನ್ನ ಆಡಳಿತದ ಅವಧಿಯಲ್ಲಿ ರಾಜ್ಯ ಹಲವು ಪ್ರಥಮಗಳನ್ನು ಸಾಧಿಸಿತ್ತು. ಉಚಿತವಾಗಿ ಅಕ್ಕಿ ನೀಡುವ ಅನ್ನಭಾಗ್ಯ, ಹಾಲಿಗೆ ಸಹಾಯಧನ ನೀಡುವ ಕ್ಷೀರಧಾರೆ, ಹಾಸ್ಟೆಲ್ ಸೌಲಭ್ಯ ಇಲ್ಲದವರಿಗೆ ವಿದ್ಯಾಸಿರಿ, ಕೃಷಿ ಇ–ಮಾರುಕಟ್ಟೆ, ಸಾರ್ವತ್ರಿಕ ಆರೋಗ್ಯ ಭಾಗ್ಯ, ಮಹಿಳಾ ಮೀಸಲು ಕೈಗಾರಿಕಾ ಪಾರ್ಕ, ರೈತರಿಗೆ ಬಡ್ಡಿರಹಿತ ಸಾಲ, ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಗುತ್ತಿಗೆ ಕಾಮಗಾರಿಯಲ್ಲಿ ಮೀಸಲಾತಿ, ನಗರ–ಪಟ್ಟಣದ ಬಡವರ ಹಸಿವು ನೀಗಿಸುವ ಇಂದಿರಾ ಕ್ಯಾಂಟೀನ್, ಹಿಂದುಳಿದ ವರ್ಗಗಳ ಬ್ಯಾಕ್‌ಲಾಗ್ ಹುದ್ದೆ ಭರ್ತಿ, ನೂತನ ಸ್ಟಾರ್ಟಅಪ್ ನೀತಿ, ಎಲೆಕ್ಟ್ರಿಕ್ ವಾಹನ ಮತ್ತು ಇಂಧನ ಸಂಗ್ರಹ ನೀತಿ, ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಉಚಿತ ಡಯಾಲಿಸಿಸ್ ಸೌಲಭ್ಯ.... ಈ ಎಲ್ಲ ಯೋಜನೆಗಳು ನಮ್ಮ ಸರ್ಕಾರದ ಮೂಲಕ ಇಡೀ ದೇಶದಲ್ಲಿಯೇ ಮೊದಲು ಕಾರ್ಯರೂಪಕ್ಕೆ ಬಂದದ್ದು ಕರ್ನಾಟಕದ ನೆಲದಲ್ಲಿ ಎನ್ನುವುದನ್ನು ವಿನಮ್ರತೆಯಿಂದ ಅಷ್ಟೇ ಹೆಮ್ಮೆಯಿಂದ ನೆನಪು ಮಾಡಿಕೊಡಲು ಬಯಸುತ್ತೇನೆ.

ಸಾರ್ವತ್ರಿಕ ಆರೋಗ್ಯ ಸೌಲಭ್ಯವನ್ನು ಅನುಷ್ಠಾನಕ್ಕೆ ತಂದಿದ್ದ ಮೊದಲ ರಾಜ್ಯ ನಮ್ಮದು. 'ಆರೋಗ್ಯ ಕರ್ನಾಟಕ' ಎಂಬ ಹೆಸರಿನ ಈ ಯೋಜನೆಯಡಿಯಲ್ಲಿ ರಾಜ್ಯದ ಎಲ್ಲ ಕುಟುಂಬಗಳು ಉಚಿತ ಇಲ್ಲವೇ ರಿಯಾಯಿತಿ ದರದಲ್ಲಿ ವೈದ್ಯಕೀಯ ಚಿಕಿತ್ಸೆ ಪಡೆಯಬಹುದಾಗಿತ್ತು. ಈ ಯೋಜನೆಯಲ್ಲಿ ರಾಜ್ಯದ 1.2 ಕೋಟಿ ಕುಟುಂಬಗಳು ಸರ್ಕಾರಿ ಇಲ್ಲವೆ ಖಾಸಗಿ ಆಸ್ಪತ್ರೆಗಳಲ್ಲಿ ಆರೋಗ್ಯ ಸೇವೆಯನ್ನು ಉಚಿತವಾಗಿ ಪಡೆಯಬಹುದಾಗಿತ್ತು. ಉಳಿದ 30 ಲಕ್ಷ ಕುಟುಂಬಗಳಿಗೆ ಆರೋಗ್ಯ ಸೇವೆಯನ್ನು ರಿಯಾಯಿತಿ ದರದಲ್ಲಿ ಒದಗಿಸಲಾಗುತ್ತಿತ್ತು.

ನಮ್ಮ ಸರ್ಕಾರದ ಅವಧಿಯಲ್ಲಿ ಬೆಂಗಳೂರಿಗೆ 'ಅತ್ಯಂತ ಕ್ರಿಯಾಶೀಲ ನಗರಿ' ಎನ್ನುವ ಹಿರಿಮೆ ಜಾಗತಿಕವಾಗಿ ದೊರೆತಿದೆ. ಜಾಗತಿಕವಾಗಿಯೂ ನಮ್ಮ ಸರ್ಕಾರದ ಆಡಳಿತವನ್ನು ಗುರುತಿಸಲಾಗಿತ್ತು ಎನ್ನುವುದಕ್ಕೆ ಇದು ಒಂದು ಉದಾಹರಣೆ. ಬಂಡವಾಳ ಹೂಡಿಕೆಗೆ ಆಸಕ್ತಿ ತೋರಿಸಿರುವ ರಾಜ್ಯಗಳಲ್ಲಿ ಕರ್ನಾಟಕ ಮೊದಲನೆಯ ಸ್ಥಾನದಲ್ಲಿತ್ತು. ಕೇಂದ್ರ ಸರ್ಕಾರದ ಕೈಗಾರಿಕಾ ನೀತಿ ಮತ್ತು ಉತ್ತೇಜನಾ ಸಂಸ್ಥೆ ಬಿಡುಗಡೆಗೊಳಿಸಿರುವ ದಾಖಲೆಗಳ ಪ್ರಕಾರವೇ 2017ರ ವರ್ಷದ ಅವಧಿಯಲ್ಲಿ ಕರ್ನಾಟಕದಲ್ಲಿ 1.54 ಲಕ್ಷ ಕೋಟಿ ರೂಪಾಯಿ ಬಂಡವಾಳ ಹೂಡಿಕೆಗೆ ಉದ್ಯಮಿಗಳು ಆಸಕ್ತಿ ತೋರಿದ್ದರು. ಈ ಮೂಲಕ ಬಂಡವಾಳ ಆಕರ್ಷಿಸಿದ ರಾಜ್ಯಗಳಲ್ಲಿ ಕರ್ನಾಟಕ ಮೊದಲ ಸ್ಥಾನದಲ್ಲಿತ್ತು. . ಶಾಂತಿ, ಸಾಮರಸ್ಯ ನೆಲೆಸಿರುವ, ಬಂಡವಾಳ ಹೂಡಿಕೆ ಸ್ನೇಹಿ ಆಡಳಿತ ನೀತಿಗಳನ್ನು ಹೊಂದಿರುವ ನಾಡಿಗೆ ಬಂಡವಾಳ ಸಹಜವಾಗಿಯೇ ಹರಿದು ಬರುತ್ತದೆ, ವಿಪುಲ ಉದ್ಯೋಗಾವಕಾಶಗಳೂ ಸೃಷ್ಟಿಯಾಗುತ್ತವೆ ಎನ್ನುವುದಕ್ಕೆ ನಮ್ಮ ಆಡಳಿತಾವಧಿಯ ಐದು ವರ್ಷಗಳು ಸಾಕ್ಷಿ. ಜಾಗತಿಕ ಹೂಡಿಕೆದಾರರ ಸಮಾವೇಶವಾದ 'ಇನ್ವೆಸ್ಟ್ ಕರ್ನಾಟಕ–2016' ಯಶಸ್ವಿಯಾಗಿದ್ದು, 1.27 ಲಕ್ಷ ಕೋಟಿ ರೂ. ಹೂಡಿಕೆಯ 112 ಒಪ್ಪಂದಗಳಿಗೆ ಸಹಿಯಾಗಿತ್ತು. ಮಾಹಿತಿ ತಂತ್ರಜ್ಞಾನ ವಲಯದಲ್ಲಿ ಕರ್ನಾಟಕ 2015–16ನೇ ಸಾಲಿನಲ್ಲಿ ಇಡೀ ದೇಶದಲ್ಲೇ ಅತ್ಯಧಿಕ ಬಂಡವಾಳವನ್ನು ಆಕರ್ಷಿಸಿದ ರಾಜ್ಯಗಳ ಪೈಕಿ ಮೊದಲ ಸ್ಥಾನದಲ್ಲಿತ್ತು. ದೇಶದ ಒಟ್ಟು ಹೂಡಿಕೆಯಾದ 2.2 ಲಕ್ಷ ಕೋಟಿ ರೂ.ಗಳ ಪೈಕಿ ರಾಜ್ಯದ ಪಾಲು 53,400 ಕೋಟಿ ರೂ. ಗಳಷ್ಟಿತ್ತು. ಇದು ದೇಶದ ಒಟ್ಟು ಐಟಿ ಬಂಡವಾಳ ಆಕರ್ಷಣೆಯ ಪೈಕಿ ಶೇ.25 ಎನ್ನುವುದು ಹೆಮ್ಮೆಯ ಸಂಗತಿಯಾಗಿದೆ.

3500ಕ್ಕೂ ಹೆಚ್ಚು ಐಟಿ ಕಂಪೆನಿಗಳು ನಮ್ಮ ಆಡಳಿತದ ಅವಧಿಯಲ್ಲಿ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿತ್ತು. ಭಾರತದ ಐಟಿ ರಾಜಧಾನಿ ಎಂಬ ಹೆಗ್ಗಳಿಕೆಯ ಕರ್ನಾಟಕ ವಿಶ್ವದ ನಾಲ್ಕನೇ ಅತಿದೊಡ್ಡ ಟೆಕ್ನಾಲಜಿ ವಲಯ ಎಂಬ ಹಿರಿಮೆಗೂ ಪಾತ್ರವಾಗಿತ್ತು. 2017ರಲ್ಲಿ ಮೂರು ಲಕ್ಷ ಕೋಟಿ ರೂಪಾಯಿ ಮೌಲ್ಯದ ರಫ್ತು ವಹಿವಾಟು ನಡೆಸುವ ಮೂಲಕ ಭಾರತದ ಒಟ್ಟಾರೆ ರಫ್ತಿನಲ್ಲಿ ಸುಮಾರು ಶೇ.38ರಷ್ಟು ಸಿಂಹಪಾಲನ್ನು ಪಡೆಯುವ ಮೂಲಕ ಐಟಿ ರಫ್ತಿನಲ್ಲಿ ಅದ್ವಿತಿಯ ನಾಯಕನಾಗಿ ಕರ್ನಾಟಕ ಮುಂಚೂಣಿಯಲ್ಲಿತ್ತು. ಶೇಡಕಾ 30.6ರಷ್ಟು ಐಟಿ ಉದ್ದಿಮೆ ಬೆಳವಣಿಗೆ ದರ ಕೂಡಾ ದೇಶದಲ್ಲಿ ಮೊದಲನೆಯ ಸ್ಥಾನ. ದೇಶದ 'ಸ್ಟಾರ್ಟ್‌ಅಪ್ ರಾಜಧಾನಿ' ಎಂದು ಗುರುತಿಸಿ ಕೊಳ್ಳುತ್ತಿರುವ ಕರ್ನಾಟಕ ಇಡೀ ದೇಶದಲ್ಲೇ ಮೊದಲ ಬಾರಿಗೆ ನವೋದ್ಯಮ ನೀತಿಯನ್ನು ಜಾರಿಗೆ ತಂದಿದೆ. ಈ ಮೂಲಕವೂ ನಾವು ಮತ್ತೊಮ್ಮೆ ವಿಶ್ವದ ಗಮನವನ್ನು ನಮ್ಮತ್ತ ಸೆಳೆದುಕೊಂಡಿದ್ದೇವೆ. ನೂರು ಅತ್ಯುತ್ತಮ ನವೋದ್ಯಮಿಗಳಿಗೆ ಬೆಂಬಲ ನೀಡುವ 'ಎಲಿವೇಟ್–1' ಎಂಬ ಕಾರ್ಯ ಕ್ರಮವನ್ನು ಯಶಸ್ವಿಯಾಗಿ ಜಾರಿಗೊಳಿಸಿದ್ದೆವು. ಇದರಿಂದಾಗಿ ದೇಶದ ಶೇ. 30ರಷ್ಟು ನವೋದ್ಯಮಗಳು ಕರ್ನಾಟಕದಲ್ಲಿ ಬೀಡುಬಿಡುವಂತಾಗಿತ್ತು. ಕರ್ನಾಟಕವೂ ನವೋದ್ಯಮಿಗಳ ರಾಜಧಾನಿ ಎಂಬ ಖ್ಯಾತಿ ಗಳಿಸಿದ್ದು ನಮ್ಮ ಸರ್ಕಾರದ ಅವಧಿಯಲ್ಲಿ. 20 ಸಾವಿರಕ್ಕೂ ಹೆಚ್ಚು ನವೋದ್ಯಮಿಗಳಿಗೆ ಕರ್ನಾಟಕದಲ್ಲಿ ನೆಲೆ ಒದಗಿಸಿ ರಾಜ್ಯವನ್ನು ಅವಿಷ್ಕಾರಿ ಉದ್ದಿಮೆಗಳ ತಾಣ ವಾಗಿಸುವುದು ನಮ್ಮ ಗುರಿಯಾಗಿತ್ತು. ಈ ಮೂಲಕ 18 ಲಕ್ಷ ಉದ್ಯೋಗ ವಕಾಶಗಳನ್ನು ಸೃಷ್ಟಿಸುವುದು ಈ ನವೋದ್ಯಮ ನೀತಿಯ ಉದ್ದೇಶವಾಗಿತ್ತು.

...2



ಪುಟ 1 ರಿಂದ .. 228ಕ್ಕೂ ಹೆಚ್ಚು ಬಯೋಟೆಕ್ನಾಲಜಿ ಕಂಪೆನಿಗಳು ಮತ್ತು 65ಕ್ಕೂ ಹೆಚ್ಚು ಬಯೋಟೆಕ್ನಾಲಜಿ ಸ್ಟಾರ್ಟಪ್‌ಗಳ ಮೂಲಕ ದೇಶದ ಒಟ್ಟು ಬಯೊ ಟೆಕ್ನಾಲಜಿ ಉದ್ಯಮ ಆದಾಯಕ್ಕೆ ಶೇಕಡಾ 35ರಷ್ಟು ಕೊಡುಗೆಯನ್ನು ಕರ್ನಾಟಕ ನೀಡುತ್ತಿತ್ತು. ಭಾರತದ 100 ಬಿಲಿಯನ್ ಡಾಲರ್ ಬಯೋಟೆಕ್ ವಲಯಕ್ಕೆ ರಾಜ್ಯದ ಕೊಡುಗೆಯನ್ನು ಖಾತರಿ ಪಡಿಸಲು ನಮ್ಮ ಸರ್ಕಾರ 'ಬಯೊಟೆಕ್ನಾಲಜಿ ನೀತಿ 2017–22'ಕ್ಕೆ ಅನುಮೋದನೆ ನೀಡಿತ್ತು. ಐಟಿ ಬಿಟಿ ಕ್ಷೇತ್ರಗಳಲ್ಲದೆ ಇತರ ಉತ್ಪಾದನಾ ಸಾಮರ್ಥ್ಯದಲ್ಲಿಯೂ ಕರ್ನಾಟಕ 2.63 ಉತ್ಪಾದನಾ ಸಂಸ್ಕರಣಾ ಅನುಪಾತದೊಂದಿಗೆ ದೇಶದಲ್ಲಿ ಮೊದಲ ಸ್ಥಾನದಲ್ಲಿತ್ತು. ದೇಶದ ಒಟ್ಟಾರೆ ಉತ್ಪಾದನಾ ಬಂಡವಾಳ ಹೂಡಿಕೆಯಲ್ಲಿ ಶೇಕಡಾ 10ರಷ್ಟನ್ನು ಹಾಗೂ ಉತ್ಪಾದನಾ ವಲಯದ ಹೂಡಿಕೆ ಪಾಲುದಾರಿಕೆ ಯಲ್ಲಿ ಶೇಕಡಾ 32ರಷ್ಟನ್ನು ಕರ್ನಾಟಕವೇ ಸೆಳೆದುಕೊಂಡಿತ್ತು.

ರಾಜ್ಯದ ಯುವಪೀಳಿಗೆಗೆ ಉದ್ಯೋಗ ಸೃಷ್ಟಿಸಬೇಕೆನ್ನುವ ನಮ್ಮ ಹಂಬಲವೇ ಇಂದು ಕರ್ನಾಟಕವನ್ನು ಬಂಡವಾಳ ಹೂಡಿಕೆಗೆ ದೇಶದಲ್ಲೇ ಅತ್ಯಂತ ಪ್ರಶಸ್ತ ತಾಣವಾಗಿ ಮಾಡಲಾಗಿದೆ. ಕರ್ನಾಟಕದ ಯುವಜನತೆ ಜಾಗತಿಕವಾಗಿ ಸ್ಪರ್ಧಿಸುವಂತಿರಬೇಕು ಎನ್ನುವ ನಮ್ಮ ಹಂಬಲವೇ ಇಂದು ಅವರನ್ನು ಜಗತ್ತಿನ ಅತ್ಯುತ್ತಮ ಕೌಶಲಿಗಳನ್ನಾಗಿ ರೂಪಿಸಲು ಕಾರಣವಾಗಿದೆ. ಜಗತ್ತಿನೆಲ್ಲೆಡೆ ಉದ್ಯೋಗರಹಿತ ಅಭಿವೃದ್ಧಿ ಕಂಡುಬರುತ್ತಿದ್ದರೆ, ಕರ್ನಾಟಕದಲ್ಲಿ ನಾವು ಉದ್ಯೋಗಸಹಿತ ಅಭಿವೃದ್ಧಿಯನ್ನು ಅವರಲ್ಲಿ ಅದಮ್ಯ ಚೈತನ್ಯವನ್ನು ಮೂಡಿಸಿದ್ದೆವು. ಮಹಿಳಾ ಸಬಲೀಕರಣದ ವಿಚಾರದಲ್ಲಿ ರಾಜ್ಯವು ಇರಿಸಿರುವ ಹೆಜ್ಜೆ ಹಾಗೂ ಮಾಡಿರುವ ಸಾಧನೆಗಳ ಬಗ್ಗೆ ದೇಶ ಚರ್ಚೆ ನಡೆಸಿತ್ತು. ಮಹಿಳಾ ಉದ್ಯಮಿಗಳಿಗೆ ಕರ್ನಾಟಕ ಸರ್ಕಾರವು ಪ್ರೋತ್ಸಾಹ ನೀಡುತ್ತಿರುವ ರೀತಿ, ಉದ್ಯೋಗಾವಕಾಶಗಳ ವಿಚಾರದಲ್ಲಿ ಅವರಿಗೆ ನೀಡಿರುವ ಬೆಂಬಲದ ಬಗ್ಗೆ ಮುಕ್ತ ಕಂಠದ ಪ್ರಶಂಸೆಗಳು ವ್ಯಕ್ತವಾಗಿವೆ. ನಮ್ಮ ಸರ್ಕಾರ ಮಹಿಳಾ ಆರೋಗ್ಯ, ಶಿಕ್ಷಣ, ಸ್ವಾವಲಂಬನೆಯ ವಿಚಾರದಲ್ಲಿ ಅತೀವ ಕಾಳಜಿಯನ್ನು ವಹಿಸಿದೆ. ಈ ನಾಡಿನ ಮಹಿಳೆಯರಲ್ಲಿ ಶರಣೆ ಅಕ್ಕಮಹಾದೇವಿಯ ಚಿನ್ಮತ್ಯ, ರಾಣಿ ಚೆನ್ನಮ್ಮಳ ಶೌರ್ಯ, ಓಬವ್ವಳ ನಿರ್ಭೀತಿ ಹಾಸುಹೊಕ್ಕಾಗಿದೆ.

ಗರ್ಭಿಣಿ ಮತ್ತು ಬಾಣಂತಿಯರಿಗೆ 'ಮಾತೃ ಪೂರ್ಣ' ಯೋಜನೆಯಡಿ ಉಚಿತವಾಗಿ ಪುಷ್ಟಿದಾಯಕ ಆಹಾರವನ್ನು ಅಂಗನವಾಡಿ ಕೇಂದ್ರಗಳಲ್ಲಿ ದೇಶದಲ್ಲಿ ಮೊದಲ ಬಾರಿ ನಮ್ಮ ಸರ್ಕಾರ ಪ್ರಾರಂಭಿಸಿತ್ತು. ಈ ಯೋಜನೆಗೆ ಹತ್ತು ಲಕ್ಷ ಮಹಿಳೆಯರು ಫಲಾನುಭವಿಗಳಾಗಿದ್ದರು. ಅಂಗನವಾಡಿ ಕಾರ್ಯಕರ್ತೆಯರ ಗೌರವಧನವನ್ನು ಹೆಚ್ಚಿಸಿದ್ದೆವು. ನಮ್ಮ ಸರ್ಕಾರವು ಮಹಿಳಾ ಉದ್ಯಮಿಗಳನ್ನು ಪ್ರೋತ್ಸಾಹಿಸುವಲ್ಲಿ ಹಾಗೂ ಲಿಂಗಾಧಾರಿತ ಅಸಮಾನತೆಯನ್ನು ನಿವಾರಿಸಲು ಇಟ್ಟಿರುವ ಹೆಜ್ಜೆಗಳಿಗಾಗಿ ನಮ್ಮ ಸರ್ಕಾರಕ್ಕೆ ಅಮೇರಿಕಾದಲ್ಲಿ ಅಂತರರಾಷ್ಟ್ರೀಯ ಮಟ್ಟದ 'ಅತ್ಯಂತ ಬೆಂಬಲ ನೀಡುವ ರಾಜ್ಯ ಸರ್ಕಾರ – 2017' ಎನ್ನುವ ಪ್ರಶಸ್ತಿ ಸಂದಿದೆ.

ತಳಸಮುದಾಯದ ಏಳಿಗೆ ನಮ್ಮ ಸರ್ಕಾರದ ಆದ್ಯತೆ. ನೊಂದವರಿಗೆ ಆಸರೆಯಾಗಲು ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ದಿನವೇ ಈ ಸಮುದಾಯದವರ ಸಾಲ ಮನ್ನಾ ಮಾಡಿತ್ತು. ಇದರಿಂದ 10.18 ಲಕ್ಷ ಜನರು ಹಳೆ ಸಾಲಗಳಿಂದ ಮುಕ್ತರಾಗಿ ಹೊಸ ಉದ್ಯೋಗ ಕೈಗೊಳ್ಳಲು ನೆರವಾಗಿತ್ತು. ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಸರ್ವ ತೋಮುಖ ಅಭಿವೃದ್ಧಿಗಾಗಿ ಕರ್ನಾಟಕ ಪರಿಶಿಷ್ಟ ಜಾತಿಗಳ ಉಪಯೋಜನೆ ಮತ್ತು ಬುಡಕಟ್ಟು ಉಪಯೋಜನೆ ಅಧಿ ನಿಯಮ, 2013 ಎನ್ನುವ ಚಾರಿತ್ರಿಕ ಕಾನೂನನ್ನು ಜಾರಿಗೆ ತಂದಿದ್ದೆವು. ಈ ಮೂಲಕ ಜನಸಂಖ್ಯೆಗೆ ಅನುಗುಣವಾಗಿ ಅನು ದಾನವನ್ನು ಮೀಸಲಾಗಿಟ್ಟ ದೇಶದ ಏಕೈಕ ರಾಜ್ಯ ನಮ್ಮದು. 2008–09ರಿಂದ 2012–13 ರ ಅವಧಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳವರಿಗೆ 26.840 ಕೋಟಿ ರೂ. ವೆಚ್ಚ ಮಾಡಲಾಗಿತ್ತು. ನಮ್ಮ ಸರ್ಕಾರದ ಅವಧಿಯಲ್ಲಿ ಅದರ ನಾಲ್ಕು ಪಟ್ಟು ಅಂದರೆ 88,395 ಕೋಟಿ ರೂ. ವೆಚ್ಚಮಾಡಿ ನೊಂದವರ ಪರವೆನ್ನುವ ತನ್ನ ಬದ್ಧತೆಯನ್ನು ತೋರಿಸಿದೆ.

ಹಿಂದಿನ ಸರ್ಕಾರದ ಅವಧಿಯಲ್ಲಿ 196 ವಸತಿ ಶಾಲೆಗಳನ್ನು ಪ್ರಾರಂಭಿಸಲಾಗಿತ್ತು. ನಮ್ಮ ಸರ್ಕಾರ ಹೋಬಳಿಗೊಂಡು ವಸತಿ ಶಾಲೆಯ ಪರಿಕಲ್ಪನೆಯಲ್ಲಿ 270 ಹೊಸ ವಸತಿ ಶಾಲೆಗಳು ಹಾಗು 200 ಹೊಸ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಿತ್ತು. ಇದರಿಂದ 74,300 ವಿದ್ಯಾರ್ಥಿ ಗಳಿಗೆ ಹೆಚ್ಚುವರಿ ಅವಕಾಶ ಸಿಕ್ಕಿತ್ತು. 2008–09ರಿಂದ 2013ರ ವರೆಗೆ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ರೂ.316 ಕೋಟಿ ಶುಲ್ಕ ಮರುಪಾವತಿಸಿದ್ದರೆ, ನಮ್ಮ ಸರ್ಕಾರದ ಅವಧಿಯಲ್ಲಿ ಹಿಂದಿನ 10 ವರ್ಷಗಳಿಂದ ಬಾಕಿ ಉಳಿದಿದ್ದ ಶುಲ್ಕವೂ ಸೇರಿದಂತೆ ಒಟ್ಟು 29,89,589 ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ರೂ.1648.82 ಕೋಟಿ ಶುಲ್ಕವನ್ನು ಮರುಪಾವತಿ ಮಾಡಿದ್ದೆವು. ಒಟ್ಟು 71,90,089 ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ರೂ.767.57 ಕೋಟಿ ವಿದ್ಯಾರ್ಥಿವೇತನ ನೀಡಿದ್ದೆವು.

ಅರಿವು ಶೈಕ್ಷಣಿಕ ಸಾಲ ಯೋಜನೆಯಲ್ಲಿ ನಮ್ಮ ಅಧಿಕಾರ ವಧಿಯಲ್ಲಿ 12,138 ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ರೂ.5852 ಲಕ್ಷ ಸಾಲ ಸೌಲಭ್ಯ ನೀಡಿ ಅವರು ವೈದ್ಯಕೀಯ, ಎಂಜನಿಯರಿಗ್ ಮೊದಲಾದ ವೃತ್ತಿಪರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡಲು ಅನುಕೂಲ ಕಲ್ಪಿಸಿದ್ದೆವು. ನಮ್ಮ ಸರ್ಕಾರ 1978ರಿಂದ ಹಿಂದುಳಿದ ವರ್ಗಗಳ 4,98,234 ಫಲಾನುಭವಿಗಳಿಂದ ಬಾಕಿ ಇದ್ದ ಅಸಲು ಮತ್ತು ಬಡ್ಡಿಸೇರಿ ರೂ.516.26 ಕೋಟಿ ಸಾಲ ವನ್ನು ಮನ್ನಾ ಮಾಡಿದ್ದೆವು.

ಪಾವಗಡದಲ್ಲಿ ವಿಶ್ವದ ಅತಿದೊಡ್ಡ ಸೌರ ಉದ್ಯಾನವನ್ನು ಸ್ಥಾಪಿಸಿ ದಾಖಲೆ ನಿರ್ಮಿಸಿದ್ದೆವು. 2000 ಮೆಗಾವಾಟ್ ಸಾಮರ್ಥ್ಯದ ಈ ಸೋಲಾರ್ ಪಾರ್ಕ್ 600 ಮೆಗಾವಾಟ್ ಸೌರ ವಿದ್ಯುತನ್ನು ಆ ಕಾಲದಲ್ಲಿಯೇ ಉತ್ಪಾದಿಸುತ್ತಿತ್ತು. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಏರೋಸ್ಪೇಸ್, ಎನಿಮೇಷನ್ ಮತ್ತು ವಿಷ್ವಲ್ ಎಫೆಕ್ಟ್ ಹಾಗೂ ಸೆಮಿ ಕಂಡಕ್ಟರ್ ನೀತಿಗಳನ್ನು ಘೋಷಿಸಿದ್ದ ಮೊದಲ ರಾಜ್ಯ ನಮ್ಮದು. ವಿದ್ಯುತ್ ಚಾಲಿತ ವಾಹನ ಮತ್ತು ವಿದ್ಯುತ್ ಸಂಗ್ರಹಾಗಾರ ನೀತಿಯನ್ನು ಘೋಷಿಸಿದ ಮೊದಲ ರಾಜ್ಯ ಕರ್ನಾಟಕ. ವಿದ್ಯುತ್ ಚಾಲಿತ ವಾಹನಗಳ ನಿರ್ಮಾಣ ಮತ್ತು ಬಳಕೆಗೆ ಪ್ರೋತ್ಸಾಹ ನೀಡುವುದರ ಮೂಲಕ ರಾಜ್ಯವನ್ನು ವಿದ್ಯುತ್ ಚಾಲಿತ ವಾಹನ ಉತ್ಪಾದನೆಯ ಕೇಂದ್ರವನ್ನಾಗಿ ಮಾಡುವುದು ನಮ್ಮ ಕನಸಾಗಿತ್ತು.

ಮಹಿಳಾ ಉದ್ಯಮಿಗಳಿಗಾಗಿಯೇ ಪ್ರತ್ಯೇಕ ಕೈಗಾರಿಕಾ ಪಾರ್ಕ್ ನಿರ್ಮಿಸಿದ್ದ ಮೊದಲ ರಾಜ್ಯ ಕರ್ನಾಟಕ. ನಾಲ್ಕು ಇನ್ ಕ್ಯುಬೇಟರ್‌ಗಳಲ್ಲಿ ಮಹಿಳೆಯರಿಗೆ 20% ಮೀಸಲಾತಿ ನೀಡಿರುವ ಜೊತೆಯಲ್ಲಿ ಹತ್ತು ಕೋಟಿ ರೂಪಾಯಿಗಳ ವಿಶೇಷ ನಿಧಿಯನ್ನು ಮೀಸಲಿಡಲಾಗಿತ್ತು. ರೇಷ್ಮೆ ಉತ್ಪಾದನೆ ಯಲ್ಲಿ ನಮ್ಮ ರಾಜ್ಯದ ಕೊಡುಗೆ ಶೇ. 50ಕ್ಕಿಂತಲೂ ಅಧಿಕ. ಹನಿ ನೀರಾವರಿಗೆ ಶೇ. 90ರಷ್ಟು ಸಹಾಯಧನವನ್ನು ಎಲ್ಲಾ ಸಮುದಾಯ ದವರಿಗೆ ಒದಗಿಸಿದ್ದ ಹಾಗೂ ಶೂನ್ಯ ಬಡ್ಡಿ ದರಲ್ಲಿ 3 ಲಕ್ಷ ರೂ.ಗಳ ವರೆಗೆ ರೈತರಿಗೆ ಸಾಲ ನೀಡುವ ದೇಶದ ಏಕಮಾತ್ರ ಸರ್ಕಾರವೆನಿಸಿದೆ.

ಗ್ರಾಮೀಣಾಭಿವೃದ್ಧಿಯಲ್ಲಿ ಹೊಸ ಭಾಷ್ಯ ಬರೆದಿರುವ ಸರ್ಕಾರ 21 ಅಂಶಗಳ ಮೂಲಕ ಗ್ರಾಮಗಳನ್ನು ಮಾದರಿ ಗ್ರಾಮಗಳನ್ನಾಗಿ ರೂಪಿಸಿದ್ದೆವು. ಗ್ರಾಮೀಣ ಆಡಳಿತ ವ್ಯವಸ್ಥೆಯಲ್ಲಿ ನಾವು ಮಾಡಿದ್ದ ಸಾಧನೆಗೆ ಸತತವಾಗಿ ನಮಗೆ ಬಂದಿದ್ದ ರಾಷ್ಟ್ರೀಯ ಪುರಸ್ಕಾರಗಳೇ ಸಾಕ್ಷಿ. ನಾಗರಿಕರ ಆರೋಗ್ಯಕ್ಕಾಗಿ ಸಾರ್ವತ್ರಿಕ ವಿಮಾಯೋಜನೆ, ಯಶಸ್ವಿನಿ, ಆರೋಗ್ಯ ಸುರಕ್ಷಾ ಕಾರ್ಯಕ್ರಮಗಳು, ಡಯಾಬಿಟಿಸ್ ಮತ್ತು ಅಧಿಕ ರಕ್ತದೊತ್ತಡ ಕಂಡುಬಂದವರಿಗೆ ನಿಯಮಿತ ಚಿಕಿತ್ಸೆ, ಡಯಾಲಿಸಿಸ್ ಅಗತ್ಯವಿರುವವರಿಗೆ ಉಚಿತ ಡಯಾಲಿಸಿಸ್ ಸೇವೆ. ವಿಶೇಷಚೇತನರಿಗಾಗಿ 'ಸ್ವಾವಲಂಬನ' ವಿಮಾ ಯೋಜನೆ, ಹಿರಿಯ ನಾಗರಿಕರಿಗಾಗಿ ವಿವಿಧ ಸಾಧನ, ಉಪಕರಣಗಳ ವಿತರಣೆ, ವೃದ್ಧರಿಗೆ, ವಿಧವೆಯರಿಗೆ, ಪರಿತ್ಯಕ್ತ ಮಹಿಳೆಯರಿಗಾಗಿ ನೀಡ ಲಾಗುವ ಪಿಂಚಣಿ ವ್ಯವಸ್ಥೆ; ಹೀಗೆ ಸಮಾಜದ ಎಲ್ಲ ವಯೋಮಾನ ದವರ ಅಗತ್ಯಗಳಿಗೆ ಸ್ಪಂದಿಸುವ ಸೇವೆಯನ್ನು ನಮ್ಮ ಸರ್ಕಾರ ಒದಗಿಸಿತ್ತು. ಸಾಮಾಜಿಕ ಭದ್ರತೆಯನ್ನು ಒದಗಿಸುವಲ್ಲಿ ಈ ಸರ್ಕಾರವೇ ಮೊದಲ ಸಾಲಿನಲ್ಲಿ ನಿಲ್ಲುತ್ತದೆ. ದೇಶದಲ್ಲೇ ಅತ್ಯಧಿಕವೆನಿಸಿದ 75 ಲಕ್ಷ ಅಸಹಾಯಕರಿಗೆ 12 ಸಾವಿರ ಕೋಟಿ ರೂ.ಗಳ ಆರ್ಥಿಕ ಭದ್ರತೆ ನೀಡಿತು ಹಾಗಾಗಿ ನಮ್ಮ ಸರ್ಕಾರವನ್ನು ಕೇವಲ ಕೆಲವೇ ವರ್ಗಗಳಿಗೆ ಕಟ್ಟಿ ಹಾಕಿ ನೋಡಬಯಸುವವರಿಗೆ ನಿರಾಸೆಯಾಗಿತ್ತು. ಅನ್ನಭಾಗ್ಯ, ಕೃಷಿಭಾಗ್ಯದಂಥ ಯೋಜನೆ ಗಳಡಿ ಎಲ್ಲ ವರ್ಗಗಳ ಬಡವರು ಲಾಭ ಪಡೆದಿದ್ದರು.

ಶುದ್ಧಕುಡಿಯುವ ನೀರಿನ ಘಟಕಗಳು ಎಲ್ಲ ಜಾತಿ, ವರ್ಗಗಳಿಗೆ ನೀರುಣಿಸಿವೆ. ಈ ಹಿಂದಿನ ಯಾವುದೇ ಸರ್ಕಾರ ನೀಡದಷ್ಟು ಅನು ದಾನವನ್ನು ನಾವು ನೀರಾವರಿ ಕ್ಷೇತ್ರಕ್ಕೆ ನೀಡಿದ್ದೇವೆ. ರಸ್ತೆಗಳ ವಿಚಾರ ದಲ್ಲಿಯೂ ಅಷ್ಟೆ, ಜಿಲ್ಲಾಕೇಂದ್ರ, ತಾಲ್ಲೂಕು ಕೇಂದ್ರಗಳನ್ನು ಬಿಡಿ ರೈತರುತಮ್ಮ ಹೊಲಗಳಿಗೆ ತೆರಳಲು ಅಗತ್ಯವಾದ ರಸ್ತೆಗಳ ನಿರ್ಮಾಣಕ್ಕೂ ಒತ್ತು–ಕೊಟ್ಟ ಸರ್ಕಾರ ನಮ್ಮದು. 'ನಮ್ಮಹೊಲ–ನಮ್ಮದಾರಿ' ಎನ್ನುವುದು ನಮ್ಮ ಸರ್ಕಾರ ಅತ್ಯಂತ ಯಶಸ್ವಿ ಕಾರ್ಯಕ್ರಮ. ಇನ್ನು ರಾಜ್ಯದ ಅರ್ಥಿಕ ಅಭಿವೃದ್ಧಿಗೆ ಈ ಸರ್ಕಾರ ಏನು ಕೊಡುಗೆ ನೀಡಿದೆ ಎಂದು ನಮ್ಮ ವಿರೋಧಿಗಳು ಪ್ರಶ್ನಿಸುವಂತೆಯೇ ಇಲ್ಲ. ಅದಕ್ಕಾಗಿ ಅವರು ಅಭಿವೃದ್ಧಿಯ ವಿಷಯವನ್ನು ಮಾತನಾಡುವುದೇಇಲ್ಲ. ಬೆಂಗಳೂರಿನಲ್ಲಿ ಇಂದು ಮೆಟ್ರೋ ಸಾರಿಗೆ ಹೊಸ ಕ್ರಾಂತಿಯನ್ನೇ ಮಾಡಿದೆ. ಅಂಡರ್‌ಪಾಸ್‌ಗಳು, ಫ್ಲೈಓವರ್‌ಗಳು, ಟೆಂಡರ್‌ಶೂರ್ ರಸ್ತೆಗಳು, 3000 ಸಾವಿರದಷ್ಟು ಹೊಸ ಸಾರಿಗೆ ಬಸ್‌ಗಳು–ಬಹುಶಃ ನಾವು ಬೆಂಗಳೂರನ್ನು ಸಂಚಾರಸ್ನೇಹಿ ನಗರವನ್ನಾಗಿ ರೂಪಿಸುವಲ್ಲಿ ಇಟ್ಟ ಹೆಜ್ಜೆಗಳನ್ನು ಇತಿಹಾಸ ಎಂದೂ ಮರೆಯುವುದಿಲ್ಲ ಎನ್ನುವ ಆತ್ಮವಿಶ್ವಾಸ ನನ್ನದು. ಗ್ರಾಮೀಣ ಭಾಗದಜನತೆಯ ಬಳಿಗೆ ತಂತ್ರಜ್ಞಾನವನ್ನೂ ಒಯ್ಯಬೇಕು ಎನ್ನುವ ಸದುದ್ದೇಶದಿಂದ 2500 ಗ್ರಾಮ ಪಂಚಾಯತ್‌ಗಳಲ್ಲಿ ಉಚಿತ ವೈ–ಫೈ ನೀಡುವ ಮಹತ್ವಾಕಾಂಕ್ಷಿ ಯೋಜನೆಗೆ ಚಾಲನೆ ನೀಡಿದ್ದೆವು. ಇನ್ನು, ಮಹಿಳೆಯರು ಸ್ವಾವಲಂಬಿಗಳಾಗಿ ಹೆಚ್ಚೆಚ್ಚು ಉದ್ಯಮಗಳನ್ನು ಸ್ಥಾಪಿಸಬೇಕು ಎನ್ನುವ ನಿಟ್ಟಿನಲ್ಲಿ ಮಹಿಳಾ ಉದ್ಯಮಿಗಳಿಗಾಗಿ ಪ್ರತ್ಯೇಕವಾಗಿ ಬಿಸಿನೆಸ್ ಇನ್‌ಕ್ಯುಬೇಟರ್ ಸ್ಥಾಪನೆಗೆ ಕ್ರಮಕೈಗೊಂಡಿದ್ದು, ಅವರನ್ನು ಉತ್ತೇಜಿಸಲು ಶೇ.4ರ ಬಡ್ಡಿದರದಲ್ಲಿ ನೀಡುತ್ತಿದ್ದ ಸಾಲವನ್ನು ರೂ.50 ಲಕ್ಷದಿಂದ ರೂ.2 ಕೋಟಿಗೆ ಏರಿಸಿದ್ದು ಹೀಗೆ ಅನೇಕ ಕಾರ್ಯಕ್ರಮಗಳನ್ನು ಕೈಗೊಂಡಿತ್ತು. ನೆಲ–ಜಲ–ಭಾಷೆಗೆ ಸಂಬಂಧಿಸಿದಂತೆ ನಮ್ಮ ಸರ್ಕಾರ ರಾಜಿ ಇಲ್ಲದ ನಿಲುವನ್ನು ಹೊಂದಿತ್ತು. ರಾಜ್ಯ–ಕ್ಕೊಂದು ಪ್ರತ್ಯೇಕವಾದ ನಾಡಧ್ವಜ ಬೇಕೆಂಬ ಬೇಡಿಕೆಯನ್ನು ನಾಡಿನ ಹಿರಿಯ ಸಾಹಿತಿಗಳು ವ್ಯಕ್ತಪಡಿಸಿದಾಗ ಆ ಬಗ್ಗೆ ಅಧ್ಯಯನ ನಡೆಸಲು ತಜ್ಞರ ಸಮಿತಿಯನ್ನು ನೇಮಿಸಿದ್ದೆ. ಆ ಸಮಿತಿ ರೂಪಿಸಿಕೊಟ್ಟಿದ್ದ ನಾಡಧ್ವಜಕ್ಕೆ ಒಪ್ಪಿಗೆ ನೀಡಿ ಅದಕ್ಕೆ ಅಧಿಕೃತ ಮಾನ್ಯತೆ ನೀಡಲು ಕೋರಿ ಕೇಂದ್ರ ಸರ್ಕಾರಕ್ಕೆ ಪತ್ರವನ್ನೂ ಬರೆದಿದ್ದೆ, ದುರದೃಷ್ಟವಶಾತ್ ಕೇಂದ್ರ ಸರ್ಕಾರ ಈ ಬಗ್ಗೆ ಇನ್ನೂ ನಿರ್ಧಾರ ಕೈಗೊಂಡಿಲ್ಲ. ಬೆಂಗಳೂರು ಮೆಟ್ರೋ ಹಿಂದಿ ಹೇರಲು ಹೋದ ಸಂದರ್ಭದಲ್ಲಿಯೂ ದ್ವಿಭಾಷ ಸೂತ್ರ ಅನುಸರಿಸುವಂತೆ ನಮ್ಮ ಸರ್ಕಾರ ಕಟ್ಟುನಿಟ್ಟಿನ ನಿರ್ದೇಶನ ನೀಡಿ ಕನ್ನಡ ಭಾಷೆಯನ್ನು ಎತ್ತಿ ಹಿಡಿದಿತ್ತು. ಕನ್ನಡ ಭಾಷೆಯಲ್ಲಿನ ಧ್ವನಿಗೆ ಅನುಗುಣವಾಗಿ ಪ್ರಮುಖ ನಗರಗಳ ಹೆಸರು ಬದಲಾವಣೆಗೆ ಕ್ರಮಕೈಗೊಂಡಿತ್ತು. ರಾಜ್ಯ ನಾಗರಿಕ ಸೇವೆಗಳಲ್ಲಿ ಕನ್ನಡ ಮಾಧ್ಯಮ ವಿದ್ಯಾರ್ಥಿಗಳಿಗೆ ಶೇಕಡಾ ಐದರಷ್ಟು ಮೀಸಲಾತಿ ನೀಡಿತ್ತು. ಮಲ್ಟಿಪ್ಲೆಕ್ಸ್ ಚಲನಚಿತ್ರಮಂದಿರಗಳಲ್ಲಿ ಕನ್ನಡ ಚಲನಚಿತ್ರಗಳನ್ನು ಕಡ್ಡಾಯಗೊಳಿಸಿತ್ತು. ನಮ್ಮ ಸರ್ಕಾರದ ಐದು ವರ್ಷಗಳ ಅವಧಿಯಲ್ಲಿ ಕರ್ನಾಟಕವು ದೇಶದಲ್ಲಿ ಮಾತ್ರವೇ ಅಲ್ಲ, ಜಾಗತಿಕವಾಗಿ ಅಗ್ರಗಣ್ಯ ರಾಜ್ಯವಾಗಿ ಹೊರಹೊಮ್ಮಬೇಕು ಎನ್ನುವ ಕನಸಿನ ರೆಕ್ಕೆಗೆ ವಾಸ್ತವದ ಬಲ ಬಂದಿತ್ತು. ಅರ್ಥಿಕ, ಮಾನವಿಕ ಅಭಿವೃದ್ಧಿಯ ಮಾನದಂಡಗಳ ಹಿನ್ನೆಲೆಯಲ್ಲಿ ಕರ್ನಾಟಕವನ್ನು ಜಗತ್ತಿನ ಅತ್ಯುತ್ತಮ ರಾಜ್ಯಗಳಲ್ಲೊಂದಾಗಿಸುವ ನಮ್ಮ ಪ್ರಯತ್ನ ಯಶಸ್ಸಿನ ದಾರಿಯಲ್ಲಿತ್ತು. ಅಂತಹ ರಾಜ್ಯವೊಂದನ್ನು ಪಡೆಯಲು ಈ ನಾಡಿನ ಜನತೆ, ಇಲ್ಲಿನ ಇತಿಹಾಸ ಪರಂಪರೆ, ಹಾಸುಹೊಕ್ಕಾಗಿರುವ ಶಾಂತಿ ಸೌಹಾರ್ದತೆ ಯಾವತ್ತೂ ಅರ್ಹವಾಗಿವೆ. ಅದನ್ನು ಸಾಧಿಸುವುದೇ ನಮ್ಮ ಗುರಿಯಾಗಿತ್ತು. ನಾವು ಕೇವಲ ಕನಸು ಬಿತ್ತುವವರಲ್ಲ, ಬಿತ್ತಿದ ಕನಸನ್ನು ಬೆಳೆಸಿ ನನಸು ಮಾಡುವವರು. ಈ ಪ್ರಾಮಾಣಿಕ ಪ್ರಯತ್ನದ ಫಲವಾಗಿಯೇ ಕರ್ನಾಟಕ ರಾಜ್ಯ ದೇಶಕ್ಕೆ ಮಾದರಿ ರಾಜ್ಯವಾಗಿ ರೂಪುಗೊಳ್ಳುತ್ತಿತ್ತು. ಇಷ್ಟೆಲ್ಲ ಜನಪರ ಕಾರ್ಯಕ್ರಮಗಳ ಹೊರತಾ ಗಿಯೂ ಚುನಾವಣೆಯಲ್ಲಿ ಸೋಲು ಹೇಗೆ ಎದುರಾಯಿತು ಎಂದು ಹಲವರು ಪ್ರಶ್ನಿಸುತ್ತಾರೆ. ಕಳೆದ ಚುನಾವಣೆಯಲ್ಲಿ ಅತ್ಯಧಿಕ ಮತವನ್ನು ರಾಜ್ಯದ ಜನ ನೀಡಿರುವುದು ಕಾಂಗ್ರೆಸ್ ಪಕ್ಷಕ್ಕೆ ಎನ್ನುವುದನ್ನು ನಾವು ಮರೆಯಬಾರದು. ಸಮೀಪ ಪ್ರತಿಸ್ಪರ್ಧಿ ಬಿಜೆಪಿಗಿಂತ ಶೇಕಡಾ 1.40 ರಷ್ಟು ಹೆಚ್ಚು ಮತಗಳನ್ನು ಕಾಂಗ್ರೆಸ್ ಪಡೆದಿದೆ. ಈ ಅಂಕಿ–ಅಂಶಗಳ ಮೂಲಕ ಪಕ್ಷದ ಸೋಲನ್ನು ಸಮರ್ಥಿಸಿಕೊಳ್ಳಲು ನಾನು ಹೋಗುವುದಿಲ್ಲ. ನಾವು ನಿರೀಕ್ಷಿತ ಮಟ್ಟದಲ್ಲಿ ಜನರನ್ನು ತಲುಪಲು, ಅವರ ಮನಸ್ಸನ್ನು ಗೆಲ್ಲಲು ಸಾಧ್ಯವಾಗದೆ ಇರುವುದು ಕೂಡಾ ಸೋಲಿಗೆ ಕಾರಣ ಇರಬಹುದು.

ದಯವಿಟ್ಟು 2013–2018ರವರೆಗಿನ ಐದು ವರ್ಷಗಳ ಅವಧಿಯ ನಮ್ಮ ಸರ್ಕಾರದ ಕಾರ್ಯಕ್ರಮಗಳ ಮೇಲೆ ಒಮ್ಮೆ ಕಣ್ಣು ಹಾಯಿಸಿ. ಇಷ್ಟೆಲ್ಲ ಜನಪರ ಕಾರ್ಯಕ್ರಮಗಳ ಹೊರತಾಗಿಯೂ ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಯಾಕೆ ಸೋಲಾಯಿತು ಎನ್ನುವ ಪ್ರಶ್ನೆ ಆಗಲೂ ನಿಮ್ಮಲ್ಲಿ ಹುಟ್ಟಿಕೊಂಡರೆ ದಯವಿಟ್ಟು ಆ ಪ್ರಶ್ನೆಯನ್ನು ನಿಮ್ಮ ಆತ್ಮಸಾಕ್ಷಿಯ ನಿರ್ಣಯಕ್ಕೆ ಬಿಟ್ಟುಬಿಡಿ, ಉತ್ತರ ಸಿಗಬಹುದು.ರಾಜ್ಯದ ಜನತೆಯ ಸೇವೆ ಮಾಡಬೇಕೆಂಬ ನನ್ನ ಮತ್ತು ನಮ್ಮ ಪಕ್ಷದ ಬದ್ಧತೆ ಚುನಾವಣಾ ಸೋಲಿನಿಂದ ಹಿನ್ನಡೆಗೊಳಗಾಗುವಷ್ಟು ದುರ್ಬಲವಾದುದಲ್ಲ, ಕತ್ತಲೆಯ ಹಿಂದೆ ಬೆಳಕು ಇದ್ದ ಹಾಗೆ ಸೋಲಿನ ಹಿಂದೆ ಗೆಲುವಿನ ದರ್ಶನ ಖಂಡಿತ ಇರುತ್ತದೆ ಎಂದು ನಂಬಿದವನು ನಾನು. ಈ ನಂಬಿಕೆಯನ್ನು ನನ್ನಲ್ಲಿ ಹುಟ್ಟಿಸಿರುವುದು ರಾಜ್ಯದ ಜನರ ಜೊತೆಗಿನ ನಾಲ್ಕು ದಶಕಗಳ ನನ್ನ ರಾಜಕೀಯ ಜೀವನದ ಒಡನಾಟದ ಅನುಭವ. ಒಳ್ಳೆಯ ಮನಸ್ಸುಗಳನ್ನು, ಒಳ್ಳೆಯ ಕೆಲಸಗಳನ್ನು ಗುರುತಿಸಿ ಆದರಿಸುವ ಸಜ್ಜನಿಕೆ ನಮ್ಮ ಜನರಲ್ಲಿದೆ ಎನ್ನುವ ಗಟ್ಟಿ ನಂಬಿಕೆ ಇದೆ. ಈ ನಂಬಿಕೆಯ ಅಡಿಗಲ್ಲಿನ ಮೇಲೆಯೇ ಪ್ರಜಾಪ್ರಭುತ್ವದ ಸೌಧ ನಿಂತಿದೆ.

ಇಂತಿ ನಿಮ್ಮ

ಸಿದ್ದರಾಮಯ್ಯ



75 2013–2018 ಕಾಂಗ್ರೆಸ್ ಸರ್ಕಾರದ ಹೆಜ್ಜೆ ಗುರುತುಗಳು

ಅನ್ನಭಾಗ್ಯ



ಸಾಧನೆಗಳು: 5 ವರ್ಷಗಳಲ್ಲಿ ರಾಜ್ಯವನ್ನು 'ಹಸಿವು ಮುಕ್ತ ಕರ್ನಾಟಕ'ವನ್ನಾಗಿ ಮಾಡಲು "ಅನ್ನಭಾಗ್ಯ ಯೋಜನೆ"ಯಡಿ 11,564 ಕೋಟಿ ರೂ.ಗಳ ವೆಚ್ಚದಲ್ಲಿ ಪ್ರತಿ ವರ್ಷ 3.85 ಕೋಟಿ ಫಲಾನುಭವಿಗಳಿಗೆ ಆಹಾರ ಭದ್ರತೆಯನ್ನು ಒದಗಿಸಲಾಗಿದೆ.

ರಾಜ್ಯವನ್ನು ಹಸಿವು ಮುಕ್ತಗೊಳಿಸುವ ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಅನ್ನ ಭಾಗ್ಯ ಯೋಜನೆಯನ್ನು ಯಶಸ್ವಿಯಾಗಿ ಜಾರಿಗೊಳಿಸಲಾಗಿದೆ. ಬಡತನ ರೇ–ಖೆಗಿಂತ ಕೆಳಗಿರುವ 1.10 ಕೋಟಿ ಕುಟುಂಬಗಳು ಈ ಯೋಜನೆಯ ಲಾಭ ಪಡೆದಿದ್ದಾರೆ. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಅವರ ಪೌಷ್ಟಿಕಾಂಶದಲ್ಲಿ ಸಾಕಷ್ಟು ಪ್ರೋಟೀನ್ಗಳು ದೊರೆಯುವುದನ್ನು ಖಾತರಿಪಡಿಸಲು ಅನ್ನಭಾಗ್ಯ ಯೋಜನೆಯ ಭಾಗವಾಗಿ ಒಂದು ಪಡಿತರ ಚೀಟಿಗೆ ಒಂದು ಕೆ.ಜಿ ಬೇಳೆ ನೀಡಲಿ ಚಾಲನೆ ನೀಡಲಾಗಿದೆ.

25 ರೂಪಾಯಿಗಳಿಗೆ ಒಂದು ಲೀಟರ್ ತಾಳೆ ಎಣ್ಣೆ ಮತ್ತು 2 ರೂಪಾಯಿಗೆ ಅಯೋಡಿಯನ್ಯುಕ್ತ ಉಪ್ಪನ್ನು ನೀಡಲಾಗಿತ್ತು. ಉಚಿತ ಅಕ್ಕಿ ಜೊತೆಗೆ, ರಾಗಿ, ಜೋಳ, ಕುಸುಬಲು ಅಕ್ಕಿ ಹಾಗೂ ಗೋಧಿಯನ್ನು ನೀಡಲಾಗಿದೆ. ಯೋಜನೆಯನ್ನು ಎ.ಪಿ.ಎಲ್. ಪಡಿತರ ಚೀಟಿದಾರರಿಗೂ ವಿಸ್ತರಿಸಲಾಗಿದೆ.

ದಾಸೋಹ ಯೋಜನೆಯಡಿ ನಾರಿನಿಕೇತನ, ವೃದ್ಧಾಶ್ರಮ, ಅಂಧಮಕ್ಕಳ ಶಾಲೆ, ಬಡವಿದ್ಯಾರ್ಥಿಗಳ ವಿದ್ಯಾರ್ಥಿನಿಲಯ, ಭಿಕ್ಷುಕರ ಪುನರ್ವಸತಿ ಕೇಂದ್ರ ಮುಂತಾದವುಗಳಿಗೆ ಅನ್ನಭಾಗ್ಯ ಮಾದರಿ ಉಚಿತ ಆಹಾರಧಾನ್ಯಗಳನ್ನು ಪೂರೈಕೆ ಮಾಡಲು ಕ್ರಮಕೈಗೊಳ್ಳಲಾಗಿದೆ. ರಾಜ್ಯವು ಎಲ್ಲಾ ಅಗತ್ಯವಿರುವ ಕುಟುಂಬಗಳಿಗೆ ಆಹಾರ ಭದ್ರತೆಯನ್ನು ಒದಗಿಸಲು ಬದ್ಧವಾಗಿರುವುದಲ್ಲದೇ, ಅನರ್ಹ ಕುಟುಂಬಗಳನ್ನು ಅರ್ಹ ಪಟ್ಟಿಯಿಂದ ತೆಗೆಯಲು ಕ್ರಮವಹಿಸಿದೆ. 5 ವರ್ಷಗಳಲ್ಲಿ ಸರ್ಕಾರವು 95.8 ಲಕ್ಷ ಆದ್ಯತಾ ಹಾಗೂ ಅಂತ್ಯೋದಯ ಪಡಿತರ ಚೀಟಿಗಳನ್ನು ರದ್ದುಪಡಿಸಿ 35.3 ಲಕ್ಷ ಹೊಸ ಆದ್ಯತಾ ಮತ್ತು ಅಂತ್ಯೋದಯ ಪಡಿತರ ಚೀಟಿಗಳನ್ನು ವಿತರಿಸಿದೆ.


ದೇಶದಲ್ಲೇ ಪ್ರಪ್ರಥಮ ಬಾರಿಗೆ ಆನ್‌ಲೈನ್ ಮೂಲಕ ಸ್ವೀಕೃತವಾದ ಅರ್ಜಿಗಳನ್ನು ಪರಿಷ್ಕರಿಸಿ ಅರ್ಜಿದಾರರ ಮನೆ ಬಾಗಿಲಿಗೆ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ. 5 ಕಿಲೋ ಆಹಾರ ಧಾನ್ಯವನ್ನು ರಿಯಾಯಿತಿ ದರದಲ್ಲಿ ರಾಷ್ಟ್ರೀಯ ಆಹಾರ ಖಾತರಿ ಕಾಯ್ದೆಯಡಿ ನೀಡಿರುವುದಲ್ಲದೇ, ರಾಜ್ಯವು 2 ಕಿಲೋ ಹೆಚ್ಚುವರಿ ಆಹಾರಧಾನ್ಯಗಳನ್ನು ಪ್ರತಿ ಯೂನಿಟ್ಗೆ ನೀಡಿದೆ, ಇದ–ರಿಂದಾಗಿ ಒಂದು ಯೂನಿಟ್‌ಗೆ 7 ಕಿಲೋದಷ್ಟು ರಾಷ್ಟ್ರದಲ್ಲೇ ದುಬಾರಿ ವೆಚ್ಚ ಭರಿಸಿ ನೀಡಲಾಗಿದೆ.

ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ ಪ್ರತಿಯೊಬ್ಬ ಸದಸ್ಯರಿಗೂ ತಲಾ 7 ಕಿ.ಗ್ರಾಂ ಆಹಾರ ಧಾನ್ಯವನ್ನು ಉಚಿತವಾಗಿ ನೀಡುತ್ತಿರುವ ದೇಶದ ಏಕೈಕ ರಾಜ್ಯ ಕರ್ನಾಟಕವಾಗಿತ್ತು. ಇದಕ್ಕಾಗಿ ಸರ್ಕಾರ 2450 ಕೋಟಿ ರೂ. ಸಹಾಯಧನ ನೀಡಿತ್ತು. ರಾಜ್ಯ ಸರ್ಕಾರಕ್ಕೆ ತೈಲ ಹಾಗೂ ಅನಿಲ ಸಂರಕ್ಷಣೆ ಮತ್ತು ಮಾಲಿನ್ಯಗೊಳಿಸುವಂತಹ ಇಂಧನಗಳ ಮೇಲಿನ ಅವಲಂಬನೆಯನ್ನು ಕಡಿತಗೊಳಿಸಲು ಪಟ್ಟ ಅವಿರತ ಶ್ರಮಕ್ಕಾಗಿ ದೇಶದಲ್ಲಿಯೇ ಉತ್ತಮ ರಾಜ್ಯವೆಂಬ ಪ್ರಶಸ್ತಿ ಲಭಿಸಿತ್ತು.

ಅನಿಲಭಾಗ್ಯ ಯೋಜನೆಯಡಿ ಅನಿಲರಹಿತ ಬಡಕುಟುಂಬಗಳಿಗೆ ಉಚಿತವಾಗಿ ಅನಿಲ ಸಂಪರ್ಕ ಒದಗಿಸಲು ಹಾಗೂ ಪಡಿತರ ಸೀಮೆಎಣ್ಣೆ ಮುಕ್ತ ರಾಜ್ಯವನ್ನಾಗಿಸಲು ಎಲ್ಲಾ ಉಜ್ವಲ ಫಲಾನುಭವಿಗಳಿಗೆ 1,600 ರೂ.ಗಳ ಸಹಾಯಧನದ ಉಚಿತ ಅನಿಲ ಸಂಪರ್ಕ, 1,000 ರೂ.ಗಳಲ್ಲಿ ಎರಡು ಬರ್ನರ್‌ಯುಕ್ತ ಗ್ಯಾಸ್ ಒಲೆ ವಿತರಣೆ ಮಾಡಲಾಗಿದೆ.

ಪುನರ್ಬೆಳಕು ಯೋಜನೆಯಡಿ ಸೀಮೆಎಣ್ಣೆ ಸೌಲಭ್ಯ ಹೊಂದಿದ ಪಡಿತರದಾರರು ತಮಗೆ ಹಂಚಿಕೆಯಾದ ಸೀಮೆಎಣ್ಣೆ ಬಿಟ್ಟುಕೊಟ್ಟಲ್ಲಿ ಉಚಿತ ರೀಚಾರ್ಜೆಬಲ್ ಎಲ್.ಇ.ಡಿ. ಸೆಟ್ ಆಯ್ಕೆ ಮಾಡಿಕೊಳ್ಳುವ ಅವಕಾಶವನ್ನು ಒದಗಿಸಲಾಗಿದೆ. ಕೇಂದ್ರ ಸರ್ಕಾರದ ಉಜ್ವಲ ಯೋಜನೆಯಡಿ ಆಯ್ಕೆಯಾಗದ ಅಂದಾಜು 5 ಲಕ್ಷ ಅರ್ಹ ಬಡಕುಟುಂಬಗಳಿಗೆ ಉಚಿತ ಅನಿಲ ಸಂಪರ್ಕಕ್ಕಾಗಿ ಪ್ರತಿ ಫಲಾನುಭವಿಗೆ 1,920 ರೂ. ಸಹಾಯಧನ ವಿತರಿಸಲು ಕ್ರಮಕೈಗೊಳ್ಳಲಾಗಿತ್ತು.

ಹಿಂದುಳಿದ ವರ್ಗಗಳ ಅಭಿವೃದ್ಧಿ ಇಲಾಖೆ



ರಾಜ್ಯದಲ್ಲಿ ಗಣನೀಯ ಸಂಖ್ಯೆಯಲ್ಲಿರುವ ಹಿಂದುಳಿದ ವರ್ಗಗಳ ಜನ ಸಮುದಾಯದ ಅಭಿವೃದ್ಧಿಯನ್ನು ಗಮನ ದಲ್ಲಿಟ್ಟುಕೊಂಡು ಸರ್ಕಾರವು ಜಾರಿಗೆ ತಂದಿರುವ ಯೋಜ ನೆಗಳಿಂದ ಒಂದು ಕೋಟಿಗೂ ಅಧಿಕ ಮಂದಿ ಪ್ರಯೋಜನ ಪಡೆದುಕೊಂಡಿ–ದ್ದಾರೆ. ಸಾಲ ನೀಡಿಕೆ ಮತ್ತು ಸಾಲ ಮನ್ನಾ, ಪ್ರೋತ್ಸಾಹ, ಸಹಾಯಧನ, ಶಿಕ್ಷಣ ಕ್ಕೆ ನೆರವು ನೀಡುವ ಮೂಲಕ ಹಿಂದುಳಿದ ವರ್ಗದವರಲ್ಲಿ ಭದ್ರತೆಯ ಭಾವನೆ ಮೂಡಿಸಿದೆ.

ಡಿ.ದೇವರಾಜ ಅರಸು ಅಭಿವೃದ್ಧಿ ನಿಗಮ : ಹಿಂದುಳಿದ ವರ್ಗಗಳ ವಿಧವೆಯರು ಆರ್ಥಿಕ ಚಟುವಟಿಕೆ ಕೈಗೊಳ್ಳಲು 10,000 ರೂ. ಸಹಾಯಧನ ಮತ್ತು ಶೇ. 4ರ ಬಡ್ಡಿ ದರದಲ್ಲಿ 30,000 ರೂ.ವರೆಗೆ ಸಾಲ ನೀಡಲಾಗಿದೆ. ಮಡಿವಾಳ, ಸವಿತಾ ಸಮಾಜ, ತಿಗಳ, ಕುಂಬಾರ ಸಮುದಾಯಗಳ ಅಭಿವೃದ್ಧಿಗೆ 60 ಕೋಟಿ ರೂ. ಅನುದಾನವನ್ನು ಒದಗಿಸಲಾಗಿದೆ. ವಾಹನ ಚಾಲನಾ ಪರವಾನಗಿ ಹೊಂದಿರುವ ಹಿಂದುಳಿದ ವರ್ಗಗಳ ನಿರುದ್ಯೋಗಿಗಳಿಗೆ 1000 ಪ್ರವಾಸಿ ಟ್ಯಾಕ್ಸಿಗಳನ್ನು ವಿತರಿಸಲಾಗಿದೆ. ಸಾರಾಯಿ ಮಾರಾಟ ನಿಷೇಧದಿಂದ ಉದ್ಯೋಗ ಕಳೆದುಕೊಂಡಿರುವ ಮೂರ್ತೆದಾರ, ಈಡಿಗ ಇತ್ಯಾದಿ ಸಮುದಾಯದವರಿಗೆ ಸ್ವಯಂ ಉದ್ಯೋಗ ಕೈಗೊಳ್ಳಲು ಆರ್ಥಿಕ ನೆರವನ್ನು ನೀಡಲಾಗಿದೆ. ಡಿ. ದೇವರಾಜ ಅರಸು ಸಂಶೋಧನಾ ಸಂಸ್ಥೆಯನ್ನು ಸ್ವಾ–ಯತ್ತ ಸಂಸ್ಥೆಯನ್ನಾಗಿಸಲು ಕ್ರಮ ವಹಿಸಲಾಗಿದೆ.

ವಿಶ್ವಕರ್ಮ ಅಭಿವೃದ್ಧಿ ನಿಗಮ

ಮಹಿಳೆಯರಿಗೆ ಮೈಕ್ರೋ ಕ್ರೆಡಿಟ್ ಸಾಲ ಯೋಜನೆ ಅಡಿ 15,000 ರೂ.ಗಳ ಘಟಕ ವೆಚ್ಚದಲ್ಲಿ ಶೇ.4ರ ಬಡ್ಡಿ ದರದಲ್ಲಿ 10,000 ರೂ.ಗಳ ಸಾಲ ಹಾಗೂ 5,000 ರೂ.ಗಳ ಸಹಾಯಧನವನ್ನು ನೀಡಲಾಗಿದೆ. ವಿಶ್ವಕರ್ಮ ಸಮುದಾಯದವರು ಮಾಡುವ ಕೆಲಸಗಳಲ್ಲಿ ವೃತ್ತಿ ಕೌಶಲ್ಯ ಸುಧಾರಣೆ ಹಾಗೂ ಆಧುನಿಕ ಸಲಕರಣೆ ಖರೀದಿಗೆ 300 ಜನರಿಗೆ ತಲಾ 1.5 ಲಕ್ಷ ರೂ.ಗಳ ಅನುದಾನ ನೀಡಲು ಕ್ರಮ ಕೈಗೊಳ್ಳಲಾಗಿತ್ತು. 'ಪಂಚವೃತ್ತಿ ಆರ್ಥಿಕ ನೆರವು ಯೋಜನೆ'ಯಡಿ ಘಟಕ ವೆಚ್ಚವನ್ನು ತಲಾ 1 ಲಕ್ಷ ರೂ. ಗಳಿಗೆ ಹೆಚ್ಚಳ ಮಾಡಿದೆ.

ಕೃಷಿ ಇಲಾಖೆ

ಪ್ರತ್ಯೇಕ ಕೃಷಿ ಬಜೆಟ್ ಮಂಡನೆ ಆದಾಗ್ಯೂ ಸಹ 2008 ರಿಂದ 2013ರವರೆಗೆ ಕೃಷಿ ವೆಚ್ಚವು 7,637 ಕೋಟಿ ರೂ.ಗಳು ಮಾತ್ರ ಆಗಿತ್ತು. ಕಾಂಗ್ರೆಸ್ ಸರ್ಕಾ ರದ ಅವಧಿಯಲ್ಲಿ ಮಾರ್ಚ್ 2018ರವರೆಗೆ 19,561 ಕೋಟಿ ರೂ. ಗಳನ್ನು ವೆಚ್ಚ ಮಾಡಲಾಗಿದೆ. 2008 ರಿಂದ 2013ರವರೆಗಿನ ವೆಚ್ಚವನ್ನು ಹೋಲಿಸಿದಲ್ಲಿ, ಕಾಂಗ್ರೆಸ್ ಸರ್ಕಾರದ ಅವಧಿಯ ವೆಚ್ಚವು ಶೇ.256ರಷ್ಟು ಹೆಚ್ಚಾಗಿರುತ್ತದೆ.

ಕೃಷಿಭಾಗ್ಯ ಸಾಧನೆಗಳು:

ಸರ್ಕಾರವು ಸೂಕ್ಷ್ಮ ನೀರಾವರಿಗೆ ಹೆಚ್ಚು ಒತ್ತು ನೀಡಲು ಶೇ.90ರಷ್ಟು ಸಹಾಯಧನ ನೀಡಿತ್ತು.ರಾಜ್ಯದ ಸರಿಸುಮಾರು 6.27 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಹನಿ ಮತ್ತು ತುಂತುರು ನೀರಾವರಿಯನ್ನುಅಳವಡಿಸಿಕೊಂಡಿರುವ 5.88 ಲಕ್ಷ ರೈತರು ಇದರಿಂದ ಪ್ರಯೋಜನ ಪಡೆದುಕೊಂಡಿದ್ದಾರೆ. ರಾಜ್ಯದ ಎಲ್ಲಾ ಜಿಲ್ಲೆಗಳಿಗೂ ಕೃಷಿಭಾಗ್ಯವನ್ನು ವಿಸ್ತರಿಸಲಾಗಿದೆ. ಇದರಡಿ 1.89 ಲಕ್ಷ ಕೃಷಿ ಹೊಂಡ ಮತ್ತು 3546 ಪಾಲಿಹೌಸ್ ನಿರ್ಮಾಣಕ್ಕಾಗಿ 1877.47 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.ಕೃಷಿ ಯಾಂತ್ರೀಕರಣ ಯೋಜನೆಯಡಿ 14.7 ಲಕ್ಷ ರೈತರು ಕಡಿಮೆ ಬಾಡಿಗೆಗೆ ಕೃಷಿ ಯಂತ್ರಗಳು ಮತ್ತು ಕೃಷಿ ಸಂಸ್ಕರಣೆಯ ಸೌಲಭ್ಯ ಪಡೆದುಕೊಂಡಿದ್ದಾರೆ. ಇದಕ್ಕಾಗಿ ಸರ್ಕಾರವು ರೂ. 1655 ಕೋಟಿ ವೆಚ್ಚ ಮಾಡಿದೆ. ರಾಜ್ಯದಾದ್ಯಂತ ಸ್ಥಾಪಿಸಿರುವ 335 ಕೃಷಿಯಂತ್ರಧಾರೆ ಕೇಂದ್ರಗಳಲ್ಲಿ ಲಭ್ಯವಿರುವ ಸೌಲಭ್ಯವನ್ನು 8.16 ಲಕ್ಷ ರೈತರು ಬಳಕೆ ಮಾಡಿಕೊಂಡಿದ್ದಾರೆ. 5 ವರ್ಷಗಳ ಅವಧಿಯಲ್ಲಿ 1 ಕೋಟಿ ರೈತರಿಗೆ 35 ಲಕ್ಷ ಕ್ವಿಂಟಾಲ್ ಗುಣಮಟ್ಟದ ಬೀಜ ಮತ್ತು 140ಲಕ್ಷ ಟನ್ ರಸಗೊಬ್ಬರವನ್ನು ವಿತರಿಸಲಾಗಿದೆ. ಮಣ್ಣು ಆರೋಗ್ಯ ಅಭಿಯಾನದಡಿ 20 ಲಕ್ಷ ಮಣ್ಣು ಮಾದರಿಗಳನ್ನು



ಸಂಗ್ರಹಿಸಿ, 45 ಲಕ್ಷ ಮಣ್ಣು ಆರೋಗ್ಯ ಕಾರ್ಡ್‌ಗಳನ್ನು ಸರ್ಕಾರ ವಿತರಿಸಿದೆ. 'ಕೃಷಿ ಭಾಗ್ಯ' ಯೋಜನೆಯನ್ನು ಎಲ್ಲ ತಾಲ್ಲೂಕುಗಳಿಗೆ ವಿಸ್ತರಿಸಲು 600ಕೋಟಿ ರೂ.ಗಳನ್ನು ಸರ್ಕಾರ ನೀಡಿದೆ. ನೀರಿನ ಸಮರ್ಪಕ ಬಳಕೆಗಾಗಿಹನಿ ಮತ್ತು ತುಂತುರು ನೀರಾವರಿಗೆ ಹೆಚ್ಚಿನ ಒತ್ತು ನೀಡಲಾಗಿದ್ದು, 1258ಕೋಟಿ ರೂ. ಗಳ ವೆಚ್ಚದಲ್ಲಿ 5.88 ಲಕ್ಷ ರೈತರಿಗೆ 6.27 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಸೂಕ್ಷ್ಮ ನೀರಾವರಿ ಪದ್ಧತಿಯನ್ನು ಅಳವಡಿಸಲಾಗಿದೆ.'ಕೃಷಿ ಯಂತ್ರಧಾರೆ' ಯೋಜನೆಯಡಿ 335 ಕ್ಕೂ ಹೆಚ್ಚು ಕೇಂದ್ರಗಳನ್ನು ಹೋಬಳಿ ಮಟ್ಟದಲ್ಲಿ ಸ್ಥಾಪಿಸಲಾಗಿದೆ. ಇದಕ್ಕಾಗಿ 122 ಕೋಟಿ ರೂ.ವೆಚ್ಚಮಾಡಲಾಗಿದೆ. ಬೇಸಾಯದ ವೆಚ್ಚ ಕಡಿತಗೊಳಿಸುವ ನಿಟ್ಟಿನಲ್ಲಿ ಸುಧಾರಿತ ತಾಂತ್ರಿಕತೆಗಳ ಅಳವಡಿಕೆಯನ್ನು ಉತ್ತೇಜಿಸಲು ಸರ್ಕಾರ 100 ಕೋಟಿ ರೂ.ಗಳ ಪ್ರೋತ್ಸಾಹಧನವನ್ನು ನೀಡಿದೆ. ಕೃಷಿಯಂತ್ರ ಬಳಕೆಯನ್ನು ಪ್ರೋತ್ಸಾಹಿಸಲು 174 ತಾಲ್ಲೂಕುಗಳಲ್ಲಿ 'ಗ್ರಾಮೀಣ ಕೃಷಿ ಯಂತ್ರೋಪಕರಣ/ಸೇವಾ ಕೇಂದ್ರ'ಗಳನ್ನು 10 ಕೋಟಿ ರೂ.ಗಳ ವೆಚ್ಚದಲ್ಲಿ ಆರಂಭಿಸಿದೆ."ಸಾವಯವ ಭಾಗ್ಯ ಯೋಜನೆ" ಹಾಗೂ ಪರಂಪರಾಗತ ಕೃಷಿ ವಿಕಾಸ ಯೋಜನೆಯಡಿ ಸಾವಯವ ಕೃಷಿಗೆ ಆದ್ಯತೆ ನೀಡಲಾಗಿದೆ. ರಾಜ್ಯಾದ್ಯಂತ 79,797 ಕೃಷಿಕರನ್ನೊಳಗೊಂಡ 1.07 ಲಕ್ಷ ಹೆಕ್ಟೇರ್ ಪ್ರದೇಶವನ್ನು ಪ್ರಮಾಣೀಕೃತ ಸಾವಯವ ಕೃಷಿ ಪದ್ಧತಿಗೆ ಪರಿವರ್ತಿಸಿ, ಈ ಉತ್ಪನ್ನಗಳಿಗೆ ಮಾರುಕಟ್ಟೆ ಸಂಪರ್ಕ ಕಲ್ಪಿಸಲಾಗಿದೆ. ಸಾವಯವ ಕೃಷಿಕರ ಸಂಘಗಳ ಒಕ್ಕೂಟಗಳನ್ನು ರಚಿಸಲಾಗಿದೆ. ಸಾವಯವ ಕೃಷಿ ಉತ್ಪನ್ನಗಳಿಗೆ ವ್ಯವಸ್ಥಿತ ಮಾರುಕಟ್ಟೆ ಸೌಲಭ್ಯ ಕಲ್ಪಿಸಲು 5 ವರ್ಷಗಳಲ್ಲಿ 203 ಕೋಟಿ ರೂ. ಅನುದಾನ ವೆಚ್ಚ ಮಾಡಲಾಗಿದೆ."ಕೃಷಿ ಪ್ರೇರಣಾ" ಕಾರ್ಯಕ್ರಮದಡಿ ರಾಜ್ಯದಲ್ಲಿ ಪ್ರಪ್ರಥಮ ಬಾರಿಗೆ ನಿರ್ದಿಷ್ಟ ತಾಂತ್ರಿಕತೆ ಅಳವಡಿಸಿ, ಪ್ರಾತ್ಯಕ್ಷಿಕೆ ಕೈಗೊಳ್ಳುವ ರೈತರ ಖಾತೆಗೆ ನೇರವಾಗಿ ಪ್ರೋತ್ಸಾಹಧನವನ್ನು ವರ್ಗಾಯಿಸಲಾಗಿದೆ. ಈ ಕಾರ್ಯ ಕ್ರಮವನ್ನು 101 ಕೋಟಿ ರೂ. ಅನುದಾನದಲ್ಲಿ ಇಲಾಖೆಯ ಇತ–ರೆ ಯೋಜನೆಗಳೊಂದಿಗೆ ಸಮನ್ವಯ ಗೊಳಿಸಿ ಅನುಷ್ಠಾನಗೊಳಿಸಲಾಗಿದೆ.

— Promotional Feature —

75

2013–2018
ಕಾಂಗ್ರೆಸ್ ಸರ್ಕಾರದ ಹೆಜ್ಜೆ ಗುರುತುಗಳು



ನಗದುರಹಿತವಾಗಿ ಪಡೆಯಬಹುದು. ನಂತರ ಯಶಸ್ವಿನಿ ಯೋಜನೆಯನ್ನು ನಗರ ಸಹಕಾರಿಗಳಿಗೂ ವಿಸ್ತರಣೆ ಮಾಡಲಾಯಿತು.

2012–13ನೇ ಸಾಲಿನ ಅಂತ್ಯಕ್ಕೆ 16.71 ಲಕ್ಷ ರೈತರಿಗೆ 6560 ಕೋಟಿ ರೂ. ಗಳಷ್ಟು ವಿತರಿಸಿದ್ದ ಕೃಷಿ ಸಾಲವನ್ನು 2017–18ನೇ ಸಾಲಿಗೆ 25 ಲಕ್ಷ ರೈತರಿಗೆ 13500 ಕೋಟಿ ರೂಪಾಯಿಗಳಿಗೆ ಹೆಚ್ಚಿಸಲಾಗಿತ್ತು. 5 ವರ್ಷಗಳ ಅವಧಿಯಲ್ಲಿ ಸರ್ಕಾರ 8.29 ಲಕ್ಷ ಹೊಸ ರೈತರಿಗೆ 6940 ಕೋಟಿ ರೂಪಾಯಿ ಕೃಷಿ ಸಾಲ ಹೆಚ್ಚಿಸಿತ್ತು.

ಸಣ್ಣ ನೀರಾವರಿ ಇಲಾಖೆ

ಇಲಾಖೆಗೆ ಒದಗಿಸಿದ ಅನುದಾನ (ಕೋಟಿ ರೂ.ಗಳಲ್ಲಿ)

ಜಲಸಿರಿ

55 ಲಕ್ಷ
ರೈತರಿಗೆ ಪ್ರಯೋಜನ

ಸಾಧನೆಗಳು:

ಜಲಸಂಪನ್ಮೂಲ ಇಲಾಖೆಗೆ (ಭಾರಿ ಮತ್ತು ಮಧ್ಯಮ ನೀರಾವರಿ) ಸರ್ಕಾರವು 5 ವರ್ಷಗಳಲ್ಲಿ 58,393 ಕೋಟಿ ರೂ.ಗಳನ್ನು ಒದಗಿಸಲಾಗಿದ್ದು, 6.54 ಲಕ್ಷ ಎಕರೆ ಪ್ರದೇಶಕ್ಕೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ.

ಕಾಂಗ್ರೆಸ್ ಸರ್ಕಾರ ಕೃಷ್ಣಾ ಮೇಲ್ದಂಡೆ ಯೋಜನೆಯ ಹಂತ–3ರ ಕಾಮಗಾರಿಗಳನ್ನು 51,149 ಕೋಟಿ ರೂ.ಗಳಲ್ಲಿ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಿತ್ತು, 2013–14ರಿಂದ ಡಿಸೆಂಬರ್– 2017ರ ಅಂತ್ಯಕ್ಕೆ 8,500 ಕೋಟಿ ರೂ. ಮೊತ್ತದ ಕಾಮಗಾರಿಗಳನ್ನು ಪ್ರಾರಂಭಿಸಿ 6996 ಕೋಟಿ ರೂ. ವೆಚ್ಚ ಮಾಡಲಾಗಿತ್ತು. ಯೋಜನೆಯಡಿ ಒಟ್ಟಾರೆ ಸುಮಾರು 1.46 ಲಕ್ಷ ಎಕರೆ ನೀರಾವರಿ ಸಾಮರ್ಥ್ಯ ಕಲ್ಪಿಸಲಾಗಿದೆ.

ಕೆರೆಕಟ್ಟೆ

100
ಕೋಟಿ ರೂ.
ವೆಚ್ಚದಲ್ಲಿ ಒತ್ತುವರಿ ತೆರವು

ಸಾಧನೆಗಳು:

ರಾಜ್ಯದಲ್ಲಿರುವ ಸುಮಾರು 30 ಸಾವಿರಕ್ಕೂ ಹೆಚ್ಚು ಕೆರೆಗಳ ಕ್ರಮಬದ್ಧ ಅಭಿವೃದ್ಧಿಗಾಗಿ "ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ" ವನ್ನು ರಚಿಸಲಾಗಿದೆ. 100 ಕೋಟಿ ರೂ.ಗಳ ಮೊತ್ತದಲ್ಲಿ ಕೆರೆಗಳ ಒತ್ತುವರಿ ತೆರವು ಮತ್ತು ಕೆರೆಗಳ ಪೋಷಕ ಕಾಲುವೆ / ರಾಜಕಾಲುವೆಗಳ ದುರಸ್ತಿ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗಿತ್ತು.

2017 ಮತ್ತು 18 ನೇ ಸಾಲಿನಲ್ಲಿ ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ರಾಮನಗರ, ತುಮಕೂರು, ಗದಗ, ವಿಜಯಪುರ, ಕೊಪ್ಪಳ, ಬಾಗಲಕೋಟೆ ಮತ್ತು ರಾಯಚೂರು ಜಿಲ್ಲೆಗಳಲ್ಲಿ 200 ಕೋಟಿ ರೂ.ಗಳ ವೆಚ್ಚದಲ್ಲಿ 243 ಸರಣಿ ಚೆಕ್ಡ್ಯಾಂಗಳನ್ನು ನಿರ್ಮಿಸಲು ಕ್ರಮ ಕೈಗೊಳ್ಳಲಾಗಿತ್ತು.



ಮಲ್ಲಾಬಾದ್, ರಾಂಪುರ, ಚಿಮ್ಮಲಗಿ, ಇಂಡಿ ಏತ ನೀರಾವರಿ ಯೋಜನೆಗಳು, ನಾರಾಯಣಪುರ ಬಲದಂಡೆ ಕಾಲುವೆ ವಿಸ್ತರಣೆ ಮತ್ತು ಹೆರ್ಕಲ್ ಏತ ನೀರಾವರಿ ಯೋಜನೆಗಳನ್ನು ತೀವ್ರಗತಿಯಲ್ಲಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿತ್ತು.

ರಾಮಥಾಳ್ (ಮರೋಳ್) ಏತ ನೀರಾವರಿ ಯೋಜನೆ 2ನೇ ಹಂತದಡಿ ಬಾಗಲಕೋಟೆ ಜಿಲ್ಲೆ ಹುನಗುಂದ ತಾಲ್ಲೂಕಿನಡಿ 786 ಕೋಟಿ ರೂ.ಗಳ ವೆಚ್ಚದಲ್ಲಿ 59,280 ಎಕರೆ ಅಚ್ಚುಕಟ್ಟು ಹನಿ ನೀರಾವರಿ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿತ್ತು.

ಕಾವೇರಿ ಕೊಳ್ಳದಲ್ಲಿ 22 ಅಣೆಕಟ್ಟು ನಾಲೆಗಳಡಿ ಒಟ್ಟು 1522.46 ಕಿಮೀ. ಉದ್ದಕ್ಕೆ ಕಾಂಕ್ರೀಟ್ ಲೈನಿಂಗ್ ಮಾಡುವ ಕಾಮಗಾರಿಗಳನ್ನು 1634 ಕೋಟಿ ರೂ. ಅಂದಾಜು ಮೊತ್ತದಲ್ಲಿ ಕೈಗೊಳ್ಳಲಾಗಿತ್ತು.

ತುಂಗಭದ್ರಾ, ಭದ್ರಾ, ಮಲಪ್ರಭಾ, ಬೆಣ್ಣೆತೊರಾ, ಅಮರ್ಜಾ, ಕಾರಂಜಾ, ಕೆಳದಂಡೆ ಮತ್ತು ಮೇಲ್ದಂಡೆ ಮುಲ್ಲಾಮಾರಿ, ಹಾಗೂ ಗಂಡೋರಿ ಯೋಜನೆಗಳ ನಾಲಾ ಆಧುನೀಕರಣ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿತ್ತು.

ರಾಜ್ಯ ಕಾಂಗ್ರೆಸ್ ಸರ್ಕಾರ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಮೊದಲನೇ ಹಂತದ ಲಿಫ್ಟ್ ಕಾಮಗಾರಿಗಳನ್ನು 3,716 ಕೋಟಿ ರೂ. ಮೊತ್ತದಲ್ಲಿ ಐದು ಪ್ಯಾಕೇಜ್‌ಗಳಲ್ಲಿ ಕೈಗೆತ್ತಿಕೊಂಡು, ಡಿಸೆಂಬರ್ 2017 ರ ಅಂತ್ಯದವರೆಗೆ 2565 ಕೋಟಿ ರೂ. ವೆಚ್ಚ ಮಾಡಿತ್ತು. ಇದರ ಜೊತೆಗೆ ನೀರು ಹರಿಸುವ ಕಾಲುವೆ ಕಾಮಗಾರಿಗಳು, ಅಕ್ವಾಡಕ್ಟ್ ಮತ್ತು ಜಲಾಶಯ ಕಾಮಗಾರಿಗಳ 3255 ಕೋಟಿ ರೂ.ಗಳ ಮೊತ್ತದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿತ್ತು.


ಕುಡಿಯುವ ನೀರು ಹಾಗೂ ಅಂತರ್ಜಲ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಎತ್ತಿನಹೊಳೆ ಯೋಜನೆಯಡಿ 527 ಕೆರೆಗಳು ಹಾಗೂ ಭದ್ರಾ ಮೇಲ್ದಂಡೆ ಯೋಜನೆಯಡಿ 367 ಕೆರೆಗಳ ಜೊತೆಗೆ 2672 ಇತರೆ ಕೆರೆಗಳನ್ನು ತುಂಬಿಸಲು 114 ಯೋಜನೆಗಳನ್ನು 8891 ಕೋಟಿ ರೂ. ಮೊತ್ತದಲ್ಲಿ ಕೈಗೊಳ್ಳಲಾಗಿತ್ತು.

ಸಹಕಾರ ಇಲಾಖೆ

ಸಹಕಾರ ಕ್ಷೇತ್ರವು ಸಣ್ಣ, ಅತಿ ಸಣ್ಣ ಹಾಗೂ ಮಧ್ಯಮ ಹಿಡುವಳಿದಾರರಿಗೆ ಸಾಲ ಮನ್ನಾ, ಬಡ್ಡಿ ಸಹಾಯಧನ ಒದಗಿಸುತ್ತದೆ. ಜೊತೆಗೆ, ಕೃಷಿ ಮಾರುಕಟ್ಟೆ ವ್ಯವಸ್ಥೆಯನ್ನು ಬಲಪಡಿಸಲು ಅಗತ್ಯ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ. ಕಾಂಗ್ರೆಸ್ ಸರ್ಕಾರದ 5 ವರ್ಷಗಳ ಅವಧಿಯಲ್ಲಿ ಒಂದು ಕೋಟಿಗೂ ಅಧಿಕ ಜನರು ಸಹಕಾರಿ ಸಾಲ ಸೌಲಭ್ಯ ಪಡೆದುಕೊಂಡಿದ್ದಾರೆ.

ಕೃಷಿಕರ ಏಳಿಗೆ

1
ಕೋಟಿ
ಜನರಿಗೆ ಪ್ರಯೋಜನ




ಸಾಧನೆಗಳು:

ರಾಜ್ಯ ಸರ್ಕಾರವು 2 ಲಕ್ಷ ರೂ.ಗಳವರೆಗಿನ ಅಲ್ಪಾವಧಿ ಕೃಷಿ ಸಾಲವನ್ನು ಶೂನ್ಯ ಬಡ್ಡಿ ದರದಲ್ಲಿ 2013–2014ನೇ ಸಾಲಿನಿಂದ ವಿತರಿಸುವ ಯೋಜನೆಯನ್ನು ರೂಪಿಸಿತ್ತು. 2014– 15ನೇ ಸಾಲಿನಿಂದ 3 ಲಕ್ಷ ರೂ.ಗಳಿಗೆ ಹೆಚ್ಚಿಸುವ ಮೂಲಕ ಕಾಂಗ್ರೆಸ್ ಸರ್ಕಾರ ರೈತರಿಗೆ ನೆರವಾಗಿದೆ. ಇದರಿಂದಾಗಿ 2012–13ನೇ ಸಾಲಿನಲ್ಲಿ 16.71 ಲಕ್ಷ ರೈತರಿಗೆ ವಿತರಿಸಿದ್ದ 6,560 ಕೋಟಿ ರೂ. ಸಾಲವು 2017–18ನೇ ಸಾಲಿನ ಅಂತ್ಯದವರೆಗೆ 24 ಲಕ್ಷ ರೈತರು ಮತ್ತು 12,000 ಕೋಟಿ ರೂ.ಗಳಿಗೆ ಏರಿಕೆಯಾಗಿತ್ತು.

2017ನೇ ಸಾಲಿನಲ್ಲಿ ತೀವ್ರ ಬರಗಾಲದಿಂದ ಕಷ್ಟಕ್ಕೀಡಾದ ರಾಜ್ಯದ ರೈತರನ್ನು ಸಾಲದ ಹೊರೆಯಿಂದ ರಕ್ಷಿಸಲು, ಸಹಕಾರ ಸಂಘಗಳಲ್ಲಿ ಸಾಲ ಪಡೆದು ದಿನಾಂಕ: 20.06.2017ಕ್ಕೆ ಬಾಕಿ ಇರುವ ಅಲ್ಪಾವಧಿ ಕೃಷಿ ಸಾಲದಲ್ಲಿ 50,000 ರೂ.ಗಳವರೆಗಿನ ಸಾಲ ಮನ್ನಾ ಮಾಡಿದ್ದು, ಇದರಿಂದ 22.27 ಲಕ್ಷ ರೈತರ 8,165 ಕೋಟಿ ರೂ. ಸಾಲ ಮನ್ನಾವಾಗಿದೆ.

ಜಲಸಂಪನ್ಮೂಲ ಇಲಾಖೆ

ಪ್ರತೀ ವರ್ಷವೂ ರಾಜ್ಯದ ನೀರಾವರಿ ವಲಯಕ್ಕೆ ತಲಾ 10,000 ಕೋಟಿ ರೂ. ಗಳಂತೆ ನೀಡಿದ್ದು, ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಿಂತ ಹೆಚ್ಚು, ಅಂದರೆ 58,393 ಕೋಟಿ ರೂ. ಗಳನ್ನು ನೀರಾವರಿಗೆ ನೀಡಿರುವುದು ಕಾಂಗ್ರೆಸ್ ಸರ್ಕಾರದ ಸಾಧನೆ



ಇಲಾಖೆಗೆ ಒದಗಿಸಿದ ಅನುದಾನ (ಕೋಟಿ ರೂ.ಗಳಲ್ಲಿ)

8.29 ಲಕ್ಷ ಹೊಸ ರೈತರಿಗೆ ಕೃಷಿ ಸಾಲ

ಐದು ಬಜೆಟ್‌ಗಳಲ್ಲಿ 7241 ಕೋಟಿ ರೂ. ಅನುದಾನ ನೀಡಲಾಗಿದೆ

2013–14	2014–15	2015–16	2016–17	2017–18
2126	666	1323	1463	1663

2013–14ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿದಂತೆ ಕೃಷಿ ಮಾರುಕಟ್ಟೆ ಸುಧಾರಣಾ ಸಮಿತಿಯ ಶಿಫಾರಸ್ಸುಗಳನ್ನು ಜಾರಿಗೆ ತರಲಾಗಿದೆ. ಅದರನ್ವಯ ಮುಖ್ಯವಾಗಿ ರಾಜ್ಯದ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳನ್ನು ಆನ್‌ಲೈನ್ ಮಾರಾಟ ವ್ಯಾಪ್ತಿಗೆ ತರಲಾಗಿದೆ. ರಾಜ್ಯದ ಒಟ್ಟು 162 ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳ ಪೈಕಿ 157 ಸಮಿತಿಗಳನ್ನು ಏಕೀಕೃತ ಮಾರಾಟ ವೇದಿಕೆಗೆ ಜೋಡಣೆ ಮಾಡಲಾಗಿತ್ತು. 2018ರ ವರೆಗೆ ಸುಮಾರು 75,690 ಕೋಟಿ ರೂ. ಮೌಲ್ಯದ 95.21 ಲಕ್ಷ ರೈತರ ಉತ್ಪನ್ನಗಳ ಆನ್‌ಲೈನ್ ವಹಿವಾಟು ನಡೆದಿದೆ. ಸುಮಾರು 47.28 ಲಕ್ಷ ರೈತರು ಏಕೀಕೃತ ಮಾರಾಟ ವೇದಿಕೆಯಡಿ ನೊಂದಾಯಿಸಿ ಕೊಂಡಿದ್ದಾರೆ.

ಯಶಸ್ವಿನಿ ಯೋಜನೆ ಗ್ರಾಮೀಣ ಸಹಕಾರಿಗಳ ಆರೋಗ್ಯ ರಕ್ಷಣಾ ಯೋಜನೆ. ರಾಜ್ಯದ ಗ್ರಾಮೀಣ ಸಹಕಾರಿಗಳಿಗಾಗಿಯೇ ರೂಪಗೊಂಡಿರುವ ಈ ಯೋಜನೆ 'ಸ್ವಯಂ–ನಿಧಿ' ಶಸ್ತ್ರಚಿಕಿತ್ಸಾ ಯೋಜನೆ ಎನಿಸಿದೆ. ಈ ಯೋಜನೆಯಡಿ ಗ್ರಾಮೀಣ ಸಹಕಾರಿಯೊಬ್ಬರು ತಿಂಗಳಿಗೆ ಇಂತಿಷ್ಟರಂತೆ ನಿಗದಿತ ಪ್ರಮಾಣದಲ್ಲಿ ತುಂಬಬೇಕು. ವಿಮೆ ಮೊತ್ತ ಪಾವತಿಸಿದ ಒಂದು ವರ್ಷದ ಅವಧಿಯಲ್ಲಿ ಫಲಾನುಭವಿಯು ನಿಗದಿ ಪಡಿಸಿರುವ ರೋಗಗಳಿಗೆ ಸಂಬಂಧಿಸಿದಂಥೆ ಶಸ್ತ್ರ ಚಿಕಿತ್ಸೆಯನ್ನು ಷರತ್ತು ಮತ್ತು ನಿಯಮಗಳಿಗೆ ಒಳಪಟ್ಟ ಟ್ರಸ್ಟಿನಿಂದ ಅಥವಾ ಅಂಗೀಕೃತ ಯಾವುದೇ ಆಸ್ಪತ್ರೆಗಳಲ್ಲಿ

ಇಲಾಖೆಗೆ ಒದಗಿಸಿದ ಅನುದಾನ (ಕೋಟಿ ರೂ.ಗಳಲ್ಲಿ)

8891 ಕೋಟಿ ರೂ. ವೆಚ್ಚದಲ್ಲಿ ಕೆರೆಗಳ ಭರ್ತಿ

ಐದು ಬಜೆಟ್‌ಗಳಲ್ಲಿ 64,523 ಕೋಟಿ ರೂ. ಅನುದಾನ ನೀಡಲಾಗಿದೆ



2013–14	2014–15	2015–16	2016–17	2017–18
9812	11,349	12,956	14,477	15,929

ಇಲಾಖೆಗೆ ಒದಗಿಸಿದ ಅನುದಾನ (ಕೋಟಿ ರೂ.ಗಳಲ್ಲಿ)

1428 ಕೆರೆಗಳ ಹೂಳು ಎತ್ತಲಾಗಿತ್ತು

ಐದು ಬಜೆಟ್‌ಗಳಲ್ಲಿ 7335 ಕೋಟಿ ರೂ. ಅನುದಾನ ನೀಡಲಾಗಿದೆ



2013–14	2014–15	2015–16	2016–17	2017–18
1146	1347	1253	1490	2099

ರಾಜ್ಯದಲ್ಲಿ ಪ್ರಥಮ ಬಾರಿಗೆ ಸಂಸ್ಕರಿಸಿದ ತ್ಯಾಜ್ಯ ನೀರನ್ನು 2,404 ಕೋಟಿ ರೂ.ಗಳ ವೆಚ್ಚದಲ್ಲಿ ಕೋಲಾರ, ಬೆಂಗಳೂರು ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳ 253 ಕೆರೆಗಳಿಗೆ ತುಂಬಿಸಲು ಕಾರ್ಯಕ್ರಮ ರೂಪಿಸಿ, ಜಾರಿಗೊಳಿಸಲಾಗಿತ್ತು. ಕಾಂಗ್ರೆಸ್ ಸರ್ಕಾರದ ಈ ಯೋಜನೆ ದೇಶದ ಗಮನ ಸೆಳೆದಿತ್ತು.

ಕೆರೆ ಸಂಜೀವಿನಿ ಯೋಜನೆಯಡಿ 105 ಕೋಟಿ ರೂ. ಯೋಜನಾ ಗಾತ್ರದಲ್ಲಿ 1428 ಕೆರೆಗಳ ಹೂಳೆತ್ತುವ ಕಾಮಗಾರಿಯನ್ನು ಪೂರ್ಣಗೊಳಿಸಲಾಗಿತ್ತು.

ಕರಾವಳಿ ಜಿಲ್ಲೆಗಳಲ್ಲಿ ಪಶ್ಚಿಮಾಭಿಮುಖವಾಗಿ ಹರಿಯುತ್ತಿರುವ ನದಿಗಳ ಹರಿವನ್ನು ಸಂರಕ್ಷಿಸಲು ಮತ್ತು ಸಂಗ್ರಹಿಸಲು "ಪಶ್ಚಿಮ ವಾಹಿನಿ" ಯೋಜನೆಯಡಿ 200 ಕೋಟಿ ರೂ. ಮೊತ್ತದಲ್ಲಿ 53 ಕಿಂಡಿ ಅಣೆಕಟ್ಟುಗಳ ನಿರ್ಮಾಣ ಮಾಡಲಾಗಿದೆ.

ಮೈಸೂರು ಮಿತ್ರ

75

2013–2018
ಕಾಂಗ್ರೆಸ್ ಸರ್ಕಾರದ ಹೆಜ್ಜೆ ಗುರುತುಗಳು



ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ



ನಲಿಕಲಿ

'ಪ್ರತಿಯೊಂದು ಮಗು ಶಾಲೆಯಲ್ಲಿ ಮತ್ತು ಉತ್ತಮ ಕಲಿಕೆಯೊಂದಿಗೆ' ಎನ್ನುವ ಗುರಿಯೊಂದಿಗೆ ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟದ ಹೆಚ್ಚಳಕ್ಕಾಗಿ ಸರ್ಕಾರ ಅನೇಕ ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ. ಮಕ್ಕಳಿಗೆ ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಮಧ್ಯಾಹ್ನದ ಬಿಸಿಯೂಟ ಮತ್ತು ಬಿಸಿಹಾಲನ್ನು ನೀಡಿತ್ತು. 1 ಕೋಟಿಗೂ ಹೆಚ್ಚು ಮಕ್ಕಳು ಇದರ ಪ್ರಯೋಜನ ಪಡೆದುಕೊಂಡಿದ್ದಾರೆ.

ಸಾಧನೆಗಳು:

ಭಾರತ ಸರ್ಕಾರದ ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯ ಮತ್ತು ಎನ್.ಸಿ.ಇ.ಆರ್.ಟಿ.ಯು ರಾಜ್ಯದ 5492 ಶಾಲೆಗಳಲ್ಲಿ 3, 5 ಮತ್ತು 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ 1.29 ಲಕ್ಷ ವಿದ್ಯಾರ್ಥಿಗಳಿಗೆ ನಡೆಸಿದ ರಾಷ್ಟ್ರೀಯ ಸಾಧನೆ ಸಮೀಕ್ಷೆಯಲ್ಲಿ ಕರ್ನಾಟಕವು ಮೊದಲನೇ ಸ್ಥಾನದಲ್ಲಿತ್ತು.

ಕರ್ನಾಟಕ ರಾಜ್ಯದ ಕಲಿಕಾ ಸಾಧನೆ ಶೇ.65.18ರಷ್ಟಿದ್ದು, ಶಾಲಾ ಶಿಕ್ಷಣದ ಗುಣಮಟ್ಟದ ಸುಧಾರಣೆಗಾಗಿ ಸರ್ಕಾರವು ಕೈಗೊಂಡ ಕ್ರಮಗಳಿಂದ ರಾಷ್ಟ್ರಮಟ್ಟದಲ್ಲಿ ಹೆಚ್ಚು ಮನ್ನಣೆಯನ್ನು ಪಡೆದಿತ್ತು.

ಶಿಕ್ಷಣ ಇಲಾಖೆಯು 61 ಲಕ್ಷ ವಿದ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು, 47 ಲಕ್ಷ ವಿದ್ಯಾರ್ಥಿಗಳಿಗೆ ಸಮವಸ್ತ್ರ, ಶೂಗಳು ಮತ್ತು ಸಾಕ್ಸ್ ಗಳನ್ನು, 5 ಲಕ್ಷ ವಿದ್ಯಾರ್ಥಿಗಳಿಗೆ ಬೈಸಿಕಲ್ಗಳನ್ನು ಉಚಿತವಾಗಿ

ವಿತರಿಸಿರುವುದಲ್ಲದೆ, ಪ್ರತಿದಿನ 60 ಲಕ್ಷ ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಬಿಸಿಯೂಟ ಹಾಗೂ ಕ್ಷೀರಭಾಗ್ಯ ಯೋಜನೆಯಡಿ ವಾರದಲ್ಲಿ 5 ದಿನ ಕೆನೆಭರಿತ ಹಾಲನ್ನು ನೀಡಿದೆ.

ರಾಜ್ಯದ ಎಲ್ಲಾ ಶಾಲೆಗಳಲ್ಲಿ ಸುಮಾರು 1 ಕೋಟಿ ವಿದ್ಯಾರ್ಥಿಗಳ ಹಾಜರಾತಿ ಮತ್ತು ಶೈಕ್ಷಣಿಕ ಪ್ರಗತಿಯ ಮೇಲುಸ್ತುವಾರಿ ಮಾಡಲು ತಂತ್ರಜ್ಞಾನ ಆಧಾರಿತ ''ಶಿಕ್ಷಣ ಕಿರಣ'' ಪ್ರಾರಂಭಿಸಲಾಗಿದೆ. ಹಿಂದಿನ ದಾಖಲಾತಿಗಳನ್ನು 'ಆಧಾರ್' ನೊಂದಿಗೆ ಜೋಡಿಸುವ ಮೂಲಕ ಒಂದಕ್ಕಿಂತ ಹೆಚ್ಚು ಶಾಲೆಯಲ್ಲಿ ವಿದ್ಯಾರ್ಥಿಗಳು ನಕಲಿ ಪ್ರವೇಶ ಪಡೆದಿಲ್ಲವೆಂಬುದನ್ನು ಖಚಿತಪಡಿಸಿಕೊಳ್ಳುವಲ್ಲಿ ಇಲಾಖೆ ಯಶಸ್ವಿಯಾಗಿದೆ. ಇದು ವಿದ್ಯಾರ್ಥಿ ಪ್ರೋತ್ಸಾಹಕಗಳ ದುರ್ಬಳಕೆ ಯಾಗುವುದನ್ನು ತಡೆಗಟ್ಟಲು ಮತ್ತಷ್ಟು ಸಹಕಾರಿಯಾಗಿತ್ತು.

2016ರಲ್ಲಿ 7,911 ಶಿಕ್ಷಕರ ನೇಮಕಾತಿ ಮಾಡಿದೆ. 2017–18ರಲ್ಲಿ ಪ್ರಾಥಮಿಕ ಶಾಲೆಗಳಿಗೆ ಹೊಸದಾಗಿ 10,000 ಪದವೀಧರ ಶಿಕ್ಷಕರು, 1,626 ಪ್ರೌಢ ಶಾಲಾ ಶಿಕ್ಷಕರು ಮತ್ತು ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಶಿಕ್ಷಕರ ಕೊರತೆಯನ್ನು ನೀಗಿಸಲು 2013–14ನೇ ಸಾಲಿನಿಂದ 2018ರ ವರೆಗೆ 1763 ಉಪನ್ಯಾಸಕರನ್ನು ನೇಮಕಾತಿ ಮಾಡಲಾಗಿದೆ. ಸರ್ಕಾರೇತರ ಸಂಸ್ಥೆಗಳೊಂದಿಗಿನ ಸಹಭಾಗಿತ್ವದಲ್ಲಿ ಶಿಕ್ಷಣದ ಗುಣಮಟ್ಟ ಸುಧಾರಣೆಗೆ ಹಾಗೂ ಶಿಕ್ಷಕರ ಸಾಮರ್ಥ್ಯವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ. ಒಟ್ಟಾರೆ 20 ಸಾವಿರ ಶಿಕ್ಷಕರನ್ನು ನೇಮಕಾತಿ ಮಾಡಿದಂತಾಗುತ್ತದೆ. ಎಲ್ಲಾ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಶಾಲೆಗಳಲ್ಲಿ ಶಿಕ್ಷಕರ ಕೊರತೆಯನ್ನು ನೀಗಿಸಲು 20 ಸಾವಿರ ಅತಿಥಿ ಶಿಕ್ಷಕರನ್ನು ನೇಮಕ ಮಾಡಲಾಗಿದೆ.

ಶಿಕ್ಷಣ ಕ್ಷೇತ್ರದ ಸಮಗ್ರ ಸುಧಾರಣೆಗಾಗಿ ಸರ್ಕಾರ 'ಕರ್ನಾಟಕ ಶಾಲಾ ಶಿಕ್ಷಣ ನೀತಿ'ಯನ್ನು ಜಾರಿಗೆ ತರಲಾಗಿದೆ. ಸರ್ಕಾರಿ ಶಾಲೆಗಳಲ್ಲಿ ಶಿಕ್ಷಣದ ಗುಣಮಟ್ಟ ಉತ್ತಮಪಡಿಸಲು 1ನೇ ತರಗತಿಯಿಂದ ಆಂಗ್ಲ ಭಾಷೆಯ ಪರಿಣಾಮಕಾರಿ ಬೋಧನೆಗೆ ಒತ್ತು ನೀಡುವುದರ ಜೊತೆಗೆ, 1 ರಿಂದ 8ನೇ ತರಗತಿಗಳವರೆಗೆ ವಸ್ತುನಿಷ್ಠ ಕಲಿಕಾ ಮೌಲ್ಯಮಾಪನ, 1 ರಿಂದ 10ನೇ ತರಗತಿಗಳವರೆಗೆ ಪರಿಷ್ಕೃತ ಪಠ್ಯಪುಸ್ತಕಗಳು ಮತ್ತು 9 ರಿಂದ 12 ತರಗತಿಗಳವರೆಗೆ ಆಯ್ದ ವಿಷಯಗಳಿಗೆ ಎನ್‌ಸಿಇಆರ್‌ಟಿ ಪಠ್ಯ ಪುಸ್ತಕಗಳ ಅಳವಡಿಕೆ ಮಾಡಲಾಗುತ್ತಿದೆ. ಬೇಸಿಗೆ ಮತ್ತು ಇತರ ರಜಾ ಅವಧಿಗಳಲ್ಲಿ ಪೂರಕ ಬೋಧನೆಗಾಗಿ 'ವಿಶ್ವಾಸ ಕಿರಣ' ಎನ್ನುವ ಹೊಸ ಯೋಜನೆಯನ್ನು ಪರಿಚಯಿಸಲಾಗಿದೆ.

ಗ್ರಾಮ ಪಂಚಾಯಿತಿ ಕೇಂದ್ರಸ್ಥಾನದಲ್ಲಿ 12ನೇ ತರಗತಿವರೆಗೆ 198 ಸಂಯೋಜಿತ ಶಾಲೆಗಳನ್ನು ಪ್ರಾರಂಭಿಸಲಾಗಿದೆ, ಹೆಚ್ಚುವರಿ 1000 ಪ್ರೌಢಶಾಲೆಗಳು ಮತ್ತು ಪಿ.ಯು. ಕಾಲೇಜುಗಳಲ್ಲಿ ಐಟಿ@ಸ್ಕೂಲ್‌ಗಳು ಆರಂಭಿಸಲಾಗಿದೆ. ಮಾಹಿತಿ ತಂತ್ರ ಜ್ಞಾನವನ್ನು ಬಳಸಿಕೊಂಡು ಎಸ್.ಎಸ್.ಎಲ್.ಸಿ ಮತ್ತು ಪಿ.ಯು.ಸಿ ಪರೀಕ್ಷೆಗಳ ಸಮಗ್ರ ಸುಧಾರಣೆಗೆ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ.

ಮಕ್ಕಳ ಶಿಕ್ಷಣ ಹಕ್ಕು ಅಧಿನಿಯಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುವುದರೊಂದಿಗೆ

1 ಕೋಟಿ ವಿದ್ಯಾರ್ಥಿಗಳಿಗೆ ನೆರವು



ಸರ್ಕಾರವು 5 ಲಕ್ಷಕ್ಕೂ ಅಧಿಕ ಅಶಕ್ತ ಮತ್ತು ದುರ್ಬಲ ವರ್ಗಗಳ ಮಕ್ಕಳಿಗೆ ಖಾಸಗಿ ಶಾಲೆಗಳಲ್ಲಿ ಪ್ರವೇಶಾವಕಾಶ ಒದಗಿಸಿ ಗುಣಮಟ್ಟದ ಶಿಕ್ಷಣದ ತೃಪ್ತಿಯನ್ನು ಒದಗಿಸಿತ್ತು.

2011ರ ಜನಗಣತಿಯನುಸಾರ ಕೆಲವು ಜಿಲ್ಲೆಗಳಲ್ಲಿ ಸಾಕ್ಷರತಾ ಪ್ರಮಾಣ ಶೇ.75.60ರಷ್ಟು ಮತ್ತು ಮಹಿಳಾ ಸಾಕ್ಷರತೆ ಪ್ರಮಾಣ ಶೇ.50ಕ್ಕಿಂತ ಕಡಿಮೆ ಇರುವುದು ಕಂಡುಬಂದಿದೆ. ಅಂತಹ ಜಿಲ್ಲೆಗಳಲ್ಲಿ "ಸಾಕ್ಷರ ಭಾರತ್" ಕಾರ್ಯಕ್ರಮ ಅನುಷ್ಠಾನಗೊಳಿಸಿ, 57 ಲಕ್ಷ ಅನಕ್ಷರಸ್ಥರನ್ನು ಸಾಕ್ಷರರನ್ನಾಗಿ ಮಾಡಲಾಗಿದೆ.

1 ಲಕ್ಷ ವಿದ್ಯಾರ್ಥಿಗಳ ಪೈಕಿ ಪ್ರತಿ ಜಿಲ್ಲೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಗಿದೆ. ಈ ಕಾರ್ಯಕ್ರಮದಿಂದ 180 ವಿದ್ಯಾರ್ಥಿಗಳು ಪ್ರಯೋಜನ ಪಡೆದಿದ್ದಾರೆ.



ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಹಜ್ ಇಲಾಖೆ: ಕಾಂಗ್ರೆಸ್ ಸರ್ಕಾರವು ಅಲ್ಪಸಂಖ್ಯಾತ ಸಮುದಾಯಗಳಾದ ಮುಸ್ಲಿಂ, ಕ್ರೈಸ್ತ, ಜೈನ್, ಸಿಖ್, ಬೌದ್ಧ ಮತ್ತು ಪಾರ್ಸಿ ಸಮುದಾಯಗಳನ್ನು ಸಶಕ್ತ ಮತ್ತು ಅಭಿವೃದ್ಧಿಗೊಳಿಸಲು ಸಮಾನ ಅವಕಾಶಗಳನ್ನು ಕಲ್ಪಿಸಿದೆ. ಈ ಸಮುದಾಯಗಳ ಸರ್ವತೋಮುಖ ಅಭಿವೃದ್ಧಿಗೆ ಸರ್ಕಾರ 6,428 ಕೋಟಿ ರೂ.ಗಳ ಅನುದಾನವನ್ನು ನೀಡಿದೆ. ಒಟ್ಟಾರೆ ಈ ಸಮುದಾಯದ 50 ಲಕ್ಷ ಮಂದಿಗೆ ಪ್ರಯೋಜನವಾಗಿದೆ.

ವಸತಿ ಇಲಾಖೆ: ಕಾಂಗ್ರೆಸ್ ಸರ್ಕಾರ ತನ್ನ ಆಡಳಿತಾವಧಿಯಲ್ಲಿ ಗುಡಿಸಲು ಮುಕ್ತ ಕರ್ನಾಟಕವನ್ನಾಗಿಸುವ ಗುರಿಯನ್ನು ಹೊಂದಿತ್ತು. ಇದಕ್ಕಾಗಿ ಪ್ರತಿ ವರ್ಷವೂ 3 ಲಕ್ಷ ಮನೆಗಳನ್ನು ನಿರ್ಮಿಸಿದೆ. ಸಾರ್ವಜನಿಕ ವಸತಿಗೆ ಹೆಚ್ಚಿನ ಆದ್ಯತೆ ನೀಡಿರುವ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿತ್ತು. ಇದಕ್ಕಾಗಿ ಸರ್ಕಾರವು ಹುಡ್ಕೊ ಸಂಸ್ಥೆಯಿಂದ ವಸತಿ ಯೋಜನೆಗಳ ಅನುಷ್ಠಾನದ ಅತ್ಯುತ್ತಮ ಸಾಧನೆಯ ಪುರಸ್ಕಾರಕ್ಕೂ ಭಾಜನವಾಗಿದೆ.

ವಸತಿ ಭಾಗ್ಯ :ಸಾಧನೆಗಳು:

- ಕರ್ನಾಟಕವನ್ನು ಗುಡಿಸಲು ಮುಕ್ತ ರಾಜ್ಯವನ್ನಾಗಿಸಲು ಸರ್ಕಾರ ಪ್ರತಿ ವರ್ಷ 3 ಲಕ್ಷ ಮನೆಗಳಂತೆ 5 ವರ್ಷಗಳಲ್ಲಿ 15 ಲಕ್ಷ ಮನೆಗಳನ್ನು ನಿರ್ಮಿಸುವ ಗುರಿಯನ್ನು ಹಾಕಿಕೊಂಡಿತ್ತು. ಅದರಂತೆ 2018ರ ಮಾರ್ಚ್ ಅಂತ್ಯಕ್ಕೆ 15.5 ಲಕ್ಷ ಮನೆಗಳನ್ನು ಪೂರ್ಣಗೊಳಿಸಲಾಗಿದೆ. ಇದೇ ಅವಧಿಯಲ್ಲಿ ವಸತಿ ನಿವೇಶನ ಯೋಜನೆಯಡಿ 50 ಸಾವಿರಕ್ಕೂ ಹೆಚ್ಚು ವಸತಿ ನಿವೇಶನಗಳನ್ನು ಹಂಚಿಕೆ ಮಾಡಿದೆ.
- ಸರ್ಕಾರವು ಬಡವರಿಗೆ ಮತ್ತು ಮಧ್ಯಮ ವರ್ಗದವರಿಗೆ ಮನೆಗಳನ್ನು ನಿರ್ಮಿಸಿಕೊಡುವ ದೃಷ್ಟಿಯಿಂದ ಜಾರಿಗೆ ತಂದಿದ್ದ ಬಸವ ವಸತಿ ಯೋಜನೆ, ಇಂದಿರಾ ಆವಾಸ್ ಯೋಜನೆ, ಗ್ರಾಮೀಣ ಅಂಬೇಡ್ಕರ್ ಯೋಜನೆ ಮತ್ತು ವಾಜಪೇಯಿ ನಗರ ವಸತಿ ಯೋಜನೆಗಳ ಮೂಲಕ ಸರ್ಕಾರವು ಒಟ್ಟು 15.5 ಲಕ್ಷ ಮನೆಗಳನ್ನು ಪೂರ್ಣಗೊಳಿಸಿದೆ.
- 5 ವರ್ಷಗಳ ಅವಧಿಯಲ್ಲಿ ವಸತಿ ಉದ್ದೇಶಕ್ಕಾಗಿ 15,391 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಅದರಲ್ಲಿ 9145 ಕೋಟಿ ರೂ.ಗಳನ್ನು (ಶೇ.59ರಷ್ಟು) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗಾಗಿ ಖರ್ಚು ಮಾಡಲಾಗಿದೆ.
- ಆಶ್ರಯ ಯೋಜನೆ ಅಡಿ 11.42 ಲಕ್ಷ ಫಲಾನುಭವಿಗಳಿಗೆ ನೀಡಿದ್ದ 2765 ಕೋಟಿ ರೂ.ಗಳ ಸಾಲವನ್ನು ಮನ್ನಾ ಮಾಡಲಾಗಿದೆ. 'ಸಾಲ ಮನ್ನಾ ತಿಳವಳಿಕೆ ಪತ್ರ' ವನ್ನು ಫಲಾನುಭವಿಗಳಿಗೆ ತಲುಪಿಸಲಾಗಿದೆ.
- ಫಲಾನುಭವಿಗಳು ಈಗ ಮನೆಸಾಲದಿಂದ ಋಣ ಮುಕ್ತರಾಗಿದ್ದು ಕನಸಿನ ಮನೆಯನ್ನು ತಮ್ಮದಾಗಿಸಿಕೊಂಡಿರುವ ಸಂತಸವನ್ನು ಹೊಂದಿದ್ದಾರೆ.
- ಸರ್ಕಾರವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗಾಗಿ ನೀಡುವ ಸಹಾಯಧನವನ್ನು ಗ್ರಾಮೀಣ ಪ್ರದೇಶಗಳಲ್ಲಿ 1.5 ಲಕ್ಷ ರೂ. ಗಳಿಂದ 1.75 ಲಕ್ಷ ರೂ.ಗಳಿಗೆ ಮತ್ತು ನಗರ ಪ್ರದೇಶಗಳಲ್ಲಿ 1.8 ಲಕ್ಷರೂ.ಗಳಿಂದ 2 ಲಕ್ಷ ರೂ.ಗಳಿಗೆ ಹೆಚ್ಚಿಸಿದೆ.
- ರಾಜ್ಯದಲ್ಲಿನ ವಸತಿ ಗ್ರಾಹಕರ ಹಿತಾಸಕ್ತಿಯನ್ನು ಕಾಪಾಡಲು ಹಾಗೂ ರಿಯಲ್ ಎಸ್ಟೇಟ್ಗೆ ಸಂಬಂಧಿಸಿದಂತೆ ಆರೋಗ್ಯಕರವಾದ ಬೆಳವಣಿಗೆಗಾಗಿ ರಾಜ್ಯದಲ್ಲಿ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ (ರೇರಾ) ವನ್ನು ಜಾರಿಗೆ ತರಲಾಗಿದೆ.
- ಕರ್ನಾಟಕ ಗೃಹ ಮಂಡಳಿ ಮುಖಾಂತರ 2013–14ನೇ ಸಾಲಿನಿಂದ 2018ರ ವರೆಗೆ ಒಟ್ಟು 26,513 ನಿವೇಶನಗಳನ್ನು ಮತ್ತು 4,223 ಮನೆಗಳನ್ನು 3,360 ಕೋಟಿ ರೂ. ಮೊತ್ತದಲ್ಲಿ ಹಂಚಿಕೆ ಮಾಡಲಾಗಿದೆ.
- ಕರ್ನಾಟಕ ಕೊಳಗೇರಿ ಪ್ರದೇಶಾಭಿವೃದ್ಧಿ ನೀತಿ–2016, ಕರ್ನಾಟಕ ಧಾರಣೀಯ ವಸತಿ ನೀತಿ–2016 ಅನ್ನು ಜಾರಿಗೆ ತಂದಿದೆ. ಕರ್ನಾಟಕ ಗೃಹ ಮಂಡಳಿ ಕಾಯ್ದೆ 1962ರ ತಿದ್ದುಪಡಿ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.
- ಸ್ಥಿತಿ-ಗತಿಗಳ ಬಗ್ಗೆ ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿನ ಶಿಫಾರಸ್ಸುಗಳನ್ನು ಆಯವ್ಯಯದಲ್ಲಿ ಅಳವಡಿಸಿಕೊಳ್ಳಲಾಗಿದೆ.



ಕ್ಷೀರಭಾಗ್ಯ:

- ರಾಜ್ಯದಲ್ಲಿ ಅಪೌಷ್ಠಿಕತೆಯನ್ನು ನಿರ್ಮೂಲನೆ ಮಾಡಲು, ಸರ್ಕಾರವು ಹಲವಾರು ಕಾರ್ಯ ನೀತಿಗಳನ್ನು ರೂಪಿಸಿದೆ. ಕ್ಷೀರಭಾಗ್ಯ ಯೋಜನೆಯಡಿ 6 ತಿಂಗಳಿನಿಂದ 6 ವರ್ಷಗಳ ವಯಸ್ಸಿನ 37.52 ಲಕ್ಷ ಮಕ್ಕಳಿಗೆ ಜುಲೈ 2017ರಿಂದ ವಾರದಲ್ಲಿ ಐದು ದಿನ ಕೆನೆಭರಿತ ಹಾಲನ್ನು ನೀಡಲು ಆರಂಭಿಸಲಾಗಿದೆ. 3 ರಿಂದ 6 ವರ್ಷ ವಯಸ್ಸಿನ 14.85 ಲಕ್ಷ ಅಂಗನವಾಡಿ ಮಕ್ಕಳಿಗೆ ಜೂನ್ 2017ರಿಂದ ವಾರಕ್ಕೆ ಎರಡು ಬಾರಿ ಮೊಟ್ಟೆಯನ್ನು ನೀಡಲು ಆರಂಭಿಸಲಾಗಿದೆ. "ಮಾತೃಪೂರ್ಣ" ಯೋಜನೆಯಡಿ ಎಲ್ಲಾ ಜಿಲ್ಲೆಗಳಲ್ಲಿ 2ನೇ ಅಕ್ಟೋಬರ್ 2017 ರಿಂದ ಗರ್ಭಿಣಿ ಮಹಿಳೆ ಮತ್ತು ಬಾಣಂತಿಯರಿಗೆ ಪೌಷ್ಠಿಕಾಂಶಯುಕ್ತ ಬಿಸಿ ಊಟವನ್ನು ಒದಗಿಸಲಾಗಿದೆ. 8.31 ಲಕ್ಷ ಮಹಿಳೆಯರು ಇದರ ಪ್ರಯೋಜನ ಪಡೆದಿದ್ದಾರೆ.
- ನಮ್ಮ ರಾಜ್ಯದಲ್ಲಿ 2013ರ ಮಾರ್ಚ್‌ನಲ್ಲಿ ಮಕ್ಕಳ ತೀವ್ರ ಅಪೌಷ್ಠಿಕತೆಯ ಪ್ರಮಾಣವು ಶೇ.1.32ರಷ್ಟಿತ್ತು. ಇಲಾಖೆಯ ವಿವಿಧ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನದಿಂದಾಗಿ 2017ರ ಡಿಸೆಂಬರ್ ಅಂತ್ಯಕ್ಕೆ ಈ ಪ್ರಮಾಣವು ಶೇ.0.44ಕ್ಕೆ ಗಣನೀಯವಾಗಿ ಇಳಿಕೆಯಾಗಿದೆ. 2013ರಲ್ಲಿ 10.97 ಲಕ್ಷ ಅಪೌಷ್ಠಿಕ ಮಕ್ಕಳು ಹಾಗೂ 51,453 ತೀವ್ರ ಅಪೌಷ್ಠಿಕ ಮಕ್ಕಳಿದ್ದು, ಡಿಸೆಂಬರ್ 2017ರ ಅಂತ್ಯಕ್ಕೆ ಈ ಸಂಖ್ಯೆಯನ್ನು ಕ್ರಮವಾಗಿ 7.67 ಲಕ್ಷ ಮತ್ತು 17,738ಕ್ಕೆ ಇಳಿಸಲಾಗಿದೆ.
- ಮಕ್ಕಳ ಪೌಷ್ಠಿಕತೆಯನ್ನು ಹೆಚ್ಚಿಸಲು ಕಾಂಗ್ರೆಸ್ ಸರ್ಕಾರವು "ಕ್ಷೀರ ಭಾಗ್ಯ" ಯೋಜನೆಯನ್ನು ಜಾರಿಗೆ ತಂದು ಅಂಗನವಾಡಿ ಮಕ್ಕಳಿಗೆ ವಾರದಲ್ಲಿ 5 ದಿನ ಹಾಲನ್ನು ಒದಗಿಸಿದೆ. 5 ವರ್ಷಗಳಲ್ಲಿ ಈ ಯೋಜನೆಗಾಗಿ 1268 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಅಲ್ಲದೇ, ಇದೇ ಅವಧಿಯಲ್ಲಿ ಮಕ್ಕಳಿಗೆ ಮೊಟ್ಟೆಯನ್ನು ನೀಡಲಾಗಿದ್ದು, ಇದಕ್ಕಾಗಿ 79 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ.



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಆಗಸ್ಟ್ 2 ಮಂಗಳವಾರ 2022

ಸಂಪುಟ: 43 | ಸಂಚಿಕೆ: 108 | ಪುಟಗಳು: 12

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ
Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಭಾರತೀಯರೆಲ್ಲರೂ ಒಂದೇ ಡಿಎನ್‌ಎ

ಕೇಂದ್ರ ಮಾಜಿ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಅವರಿಂದ ಮೈಸೂರಿನ ಆರ್‌ಐಇನಲ್ಲಿ ಸರ್ದಾರ್ ಪಣಿಕ್ಕರ್ ಸ್ಮಾರಕ ಉಪನ್ಯಾಸ

ಮೈಸೂರು, ಆ.1(ಆರ್‌ಕೆ)– ಭಾರತೀಯರೆಲ್ಲರೂ ಒಂದೇ ಡಿಎನ್‌ಎಯೊಂದಿಗೆ ಒಂದೇ ಆಗಿದ್ದಾರೆ ಎಂದು ಕೇಂದ್ರ ಮಾಜಿ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಪ್ರತಿಪಾದಿಸಿದ್ದಾರೆ.


ಪಣಿಕ್ಕರ್

ಮೈಸೂರಿನ ಪ್ರಾದೇಶಿಕ ಶಿಕ್ಷಣ ಸಂಸ್ಥೆಯಲ್ಲಿ ಏರ್ಪಡಿಸಿದ್ದ 60ನೇ ಸಂಸ್ಥಾಪನಾ ದಿನಾಚರಣೆ ಸಮಾರಂಭ ಉದ್ಘಾಟಿಸಿದ ಅವರು, ಸರ್ದಾರ್ ಪಣಿಕ್ಕರ್ ಸ್ಮಾರಕ ಉಪನ್ಯಾಸ ಮಾಡಿದರು. ಭಾರತೀಯರೆಲ್ಲರೂ ಒಂದೇ. ಅವರೆಲ್ಲರಿಗೂ ಇರುವುದು ಒಂದೇ ಡಿಎನ್‌ಎ. ಈ ದೇಶದಲ್ಲಿ ವಾಸಿಸುವ ಪ್ರತಿಯೊಬ್ಬ ಪ್ರಜೆಯ ತಾತ–ಮುತ್ತಾತಂದಿರು ಹಿಂದೂಗಳೇ ಆಗಿದ್ದರು ಎಂಬುದು ದೃಢ ಎಂದರು.

ನಮ್ಮ ದೇಶದಲ್ಲಿ ವಾಸಿಸುವವರೆಲ್ಲರೂ ಹಿಂದೂಗಳೇ ಎಂಬುದನ್ನು ನಾನು ಡಿಎನ್‌ಎ ಪರೀಕ್ಷೆ ಮೂಲಕ ಸಾಬೀತು ಪಡಿಸುತ್ತೇನೆ. ಹಿಂದೂಗಳಂತೆಯೇ ಮುಸ್ಲಿಮರು ಮತ್ತು ಕ್ರಿಶ್ಚಿಯನ್ನರ ಡಿಎನ್‌ಎಗಳೂ ಒಂದೇ ಆಗಿರುತ್ತದೆ. ಅವರೆಲ್ಲರೂ ಒಂದೇ ಭೂಮಿಯ ಮಕ್ಕಳು. ಹಾಗಾಗಿ ಅವರು ಹೊರಗಡೆಯಿಂದ ಬಂದವರಲ್ಲ ಎಂಬುದನ್ನು ಒಪ್ಪಿಕೊಳ್ಳಲೇಬೇಕು ಎಂದೂ ಅವರು ನುಡಿದರು.

ದೇಶದ ವರ್ಣ ವ್ಯವಸ್ಥೆ ಬಗ್ಗೆ ಪ್ರಸ್ತಾಪಿಸಿದ ಅವರು, ವೈದಿಕ ಕಾಲದಿಂದಲೂ ಜಾತಿಪದ್ಧತಿ ಇರಲಿಲ್ಲ. ಜಾತಿ ವಂಶಾವಳಿಯೂ ಇರಲಿಲ್ಲ. ಆದರೆ, ಮಕ್ಕಳಲ್ಲಿನ ಗುಣ ಹಾಗೂ ▶ 6ನೇ ಪುಟಕ್ಕೆ





ಮೈಸೂರಿನ ಆರ್‌ಐಇನಲ್ಲಿ ಸೋಮವಾರ ಆಯೋಜಿಸಿದ್ದ ಸಂಸ್ಥೆಯ 60ನೇ ಸಂಸ್ಥಾಪನಾ ದಿನಾಚರಣೆ ಕಾರ್ಯಕ್ರಮದಲ್ಲಿ ಕೇಂದ್ರ ಮಾಜಿ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಉಪನ್ಯಾಸ ನೀಡಿದರು. ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಜಿ. ಹೇಮಂತ್‌ಕುಮಾರ್ ಹಾಗೂ ಆರ್‌ಐಇ ಪ್ರಾಂಶುಪಾಲ ಪ್ರೊ. ವೈ. ಶ್ರೀಕಾಂತ ಅವರಿದ್ದಾರೆ. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಆಹ್ವಾನಿತರನ್ನು ಬಲಚಿತ್ರದಲ್ಲಿ ಕಾಣಬಹುದು.

ವಿಧಾನಸಭಾ ಚುನಾವಣೆಗೆ ಮುನ್ನ

ಅಕ್ರಮ ಸಕ್ರಮ

- ಸರ್ಕಾರಿ ಭೂಮಿಯಲ್ಲಿ ನಿರ್ಮಾಣವಾಗಿರುವ 12 ಲಕ್ಷ ಬಡವರ ಮನೆ ಸಕ್ರಮ
- 40x60ರ ಮಿತಿಯೊಳಗಿನ ನಿರ್ಮಾಣಕ್ಕಷ್ಟೇ ಭಾಗ್ಯ
- ನಕ್ಷೆ ಅನುಮೋದನೆ ಆಗದ ಮನೆಗಳೂ ಸಕ್ರಮ
- ಸರ್ಕಾರಕ್ಕೆ 20 ಸಾವಿರ ಕೋಟಿ ಆದಾಯ



ಬೆಂಗಳೂರು, ಆ.1(ಕೆಎಂಶಿ)–ಮುಂಬರುವ ರಾಜ್ಯ ವಿಧಾನಸಭಾ ಚುನಾವಣೆಗೂ ಮುನ್ನ ಸರ್ಕಾರಿ ಭೂಮಿಯಲ್ಲಿ ಅಕ್ರಮವಾಗಿ ನಿರ್ಮಿಸಿಕೊಂಡಿರುವ 12 ಲಕ್ಷ ಬಡವರ ಮನೆಗಳನ್ನು ದಂಡ ಕಟ್ಟಿಸಿಕೊಂಡು ಸಕ್ರಮಗೊಳಿಸುವುದಾಗಿ ಕಂದಾಯ ಸಚಿವ ಆರ್. ಅಶೋಕ್ ಇಂದಿಲ್ಲಿ ಪ್ರಕಟಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಕ್ಷೆ ಮಂಜೂರಾತಿ ಇಲ್ಲದೆ ನಿರ್ಮಾಣಗೊಂಡಿರುವ ಮನೆಗಳನ್ನೂ ಸಕ್ರಮಗೊಳಿಸಲಾಗುವುದು. ಇದರಿಂದ ರಾಜ್ಯ ಸರ್ಕಾರಕ್ಕೆ 20 ಸಾವಿರ ಕೋಟಿ ರೂ. ವರಮಾನ ಬರಲಿದೆ ಎಂದರು.



ಒಂದು ಬಾರಿಗೆ ಅನ್ವಯವಾಗುವಂತೆ ಇಂತಹ ನಿರ್ಧಾರ ಕೈಗೊಳ್ಳುವುದರಿಂದ ಜನರಿಗೂ ನೆಮ್ಮದಿ, ಸರ್ಕಾರಕ್ಕೂ ಆದಾಯ ತಂದು ಕೊಡಲಿದೆ. 40x60 ಚದರಡಿ ವಿಸ್ತೀರ್ಣಕ್ಕಿಂತ ಹೆಚ್ಚಿನ ಭಾಗದಲ್ಲಿ ಮನೆ ನಿರ್ಮಿಸಿಕೊಂಡಿದ್ದರೆ, ಅಂತಹವುಗಳನ್ನು ಸಕ್ರಮಗೊಳಿಸುವುದಿಲ್ಲ ಎಂದು ಸ್ಪಷ್ಟಪಡಿಸಿದರು. ಸರ್ಕಾರ ನಿಗದಿ ಮಾಡಿರುವ ವಿಸ್ತೀರ್ಣದಲ್ಲೇ ಶೇ.90ರಷ್ಟು ಮಂದಿ ಮನೆಗಳನ್ನು ನಿರ್ಮಿಸಿಕೊಂಡಿದ್ದಾರೆ ಎಂದರು. ▶ 6ನೇ ಪುಟಕ್ಕೆ

ಆ.7ರಂದು ದಸರಾ ಗಜಪಯಣ



ಮೈಸೂರು,ಆ.1(ಎಂಟಿವೈ)– ಈ ಸಾಲಿನ ನಾಡಹಬ್ಬ ದಸರಾ ಮಹೋತ್ಸವದ ಗಜಪಯಣಕ್ಕೆ ಆ.7ರಂದು ಬೆಳಗ್ಗೆ 9.01ರಿಂದ 9.35ರೊಳಗೆ ಸಲ್ಲುವ ಕನ್ಯಾ ಲಗ್ನದಲ್ಲಿ ಸಮಯ ನಿಗದಿ ಮಾಡಲಾಗಿದೆ. ಮೈಸೂರು ಜಿಲ್ಲೆಯ ಹುಣಸೂರು ತಾಲೂಕು ವ್ಯಾಪ್ತಿಯ ನಾಗರಹೊಳೆ ಕಾಡಂಚಿನ ಗ್ರಾಮ ವೀರನಹೊಸಹಳ್ಳಿ ಗೇಟ್ ಬಳಿ ಅರ್ಚಕ ▶ 6ನೇ ಪುಟಕ್ಕೆ


ವರದಕ್ಷಿಣೆ ಕಿರುಕುಳ: 10 ತಿಂಗಳ ಹಸುಗೂಸು ಕೊಂದು ಮಂಡ್ಯ ಜಿಪಂ ಮಾಜಿ ಸದಸ್ಯೆ ಪುತ್ರಿ ಆತ್ಮಹತ್ಯೆ

ನಾಗಮಂಗಲ, ಆ.1– ಪ್ರೀತಿಸಿ ವಿವಾಹವಾಗಿದ್ದ ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಪುತ್ರಿ ವರದಕ್ಷಿಣೆ ಕಿರುಕುಳದಿಂದಾಗಿ ಡೆತ್‌ನೋಟ್ ಬರೆದಿಟ್ಟು 10 ತಿಂಗಳ ಮಗುವನ್ನು ಕೊಂದು ತಾನೂ ನೇಣಿಗೆ ಶರಣಾದ ಘಟನೆ ನಾಗಮಂಗಲ ತಾಲೂಕು ಕೆಂಚೇಗೌಡನ ಕೊಪ್ಪಲು ಗ್ರಾಮದಲ್ಲಿ ಸೋಮವಾರ ನಡೆದಿದೆ.

ಜಿಪಂ ಮಾಜಿ ಸದಸ್ಯೆ ಸುನಂದಾ ದೊರೆಸ್ವಾಮಿ ಪುತ್ರಿ ಬಿಂದು(25) ತನ್ನ ಪುತ್ರಿ 10 ತಿಂಗಳ ಜಾಹ್ನವಿಯನ್ನು ಕೊಂದು ನೇಣಿಗೆ ಶರಣಾದವಳಾಗಿದ್ದಾಳೆ.

ವಿವರ: ಬಿಂದು ಮೈಸೂರಿನಲ್ಲಿ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದ ವೇಳೆ ತನ್ನದೇ ಗ್ರಾಮದವನಾದ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ನವೀನ್ ಎಂಬಾತನನ್ನು ಪ್ರೀತಿಸಿ, ಮನೆಯವರಿಗೆ ಗೊತ್ತಾಗದಂತೆ ಕಳೆದ 5 ವರ್ಷಗಳ ಹಿಂದೆ ಬೆಳ್ಳೂರು ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ವಿವಾಹವಾಗಿ ವಿದ್ಯಾಭ್ಯಾಸವನ್ನು ಅರ್ಧಕ್ಕೆ ಮೊಟಕುಗೊಳಿಸಿ ಬೆಂಗಳೂರಿನಲ್ಲಿ ನವೀನ್ ಜೊತೆ ವಾಸವಾಗಿದ್ದಳು.

ಈ ವೇಳೆ ಪತಿ ನವೀನ್, ಅತ್ತೆ ನಾಗಮ್ಮ, ನಾದಿನಿಯರಾದ ನವ್ಯ ಮತ್ತು ನಯನಾ ಅವರು ಬಿಂದುವಿಗೆ ವರ ದಕ್ಷಿಣೆ ಕಿರುಕುಳ ನೀಡುತ್ತಿದ್ದರು ಎಂದು ಹೇಳಲಾಗಿದೆ. ಈ ನಡುವೆ ಪತಿ ಮಮತಾ ಎಂಬಾಕೆಯ ಜೊತೆ ಸಂಬಂಧ ಇರಿಸಿಕೊಂಡಿದ್ದು, ಬಿಂದುವಿಗೆ ವಿಚ್ಛೇದನಾ ನೀಡಿ ಆಕೆಯನ್ನು ವಿವಾಹವಾಗುವುದರ ಬಗ್ಗೆ ಹೇಳುತ್ತಿದ್ದ. ಆತನಿಗೆ ಆತನ ಮನೆಯವರು ಬೆಂಬಲ ನೀಡುತ್ತಿದ್ದರು ಎಂದು ಹೇಳಲಾಗಿದೆ.



ಕಳೆದ ಏಪ್ರಿಲ್ 2ರಂದು ಯುಗಾದಿ ಹಬ್ಬಕ್ಕಾಗಿ ತವರು ಮನೆಗೆ ಪುತ್ರಿಯೊಂದಿಗೆ ಬಂದ ಬಿಂದು ತನಗೆ ಪತಿ ಮನೆಯಲ್ಲಿ ವರದಕ್ಷಿಣೆಗಾಗಿ ಆಗುತ್ತಿರುವ ಕಿರುಕುಳದ ಬಗ್ಗೆ ಪೋಷಕರಿಗೆ ತಿಳಿಸಿದ್ದು, ಗಂಡನ ಮನೆಗೆ ಹೋಗದೆ ತವರು ಮನೆಯಲ್ಲಿಯೇ ಉಳಿದುಕೊಂಡಿದ್ದಾಳೆ. ಈ ನಡುವೆ ಆಕೆಯ ಗಂಡ ನವೀನ್ ನಾಗಮಂಗಲ ಪಟ್ಟಣದಲ್ಲಿ ಬಿಂದು ಹೆಸರಿನಲ್ಲಿದ್ದ ಮನೆಯನ್ನು ಮಾರಾಟ ಮಾಡಿದ್ದಾನೆ. ನೆನ್ನೆ(ಭಾನುವಾರ) ಗ್ರಾಮಕ್ಕೆ ಆಗಮಿಸಿದ್ದ ನವೀನ್ ಪತ್ನಿಯನ್ನು ಹೊರಗೆ ಕರೆದುಕೊಂಡು ಹೋಗಿ ಸಂಜೆ ಮನೆಗೆ ತಂದು ಬಿಟ್ಟು ಬೆಂಗಳೂರಿಗೆ ತೆರಳಿದ್ದ. ಆ ವೇಳೆ ಆತ ವ್ಯಾಪಾರ ಮಾಡುವುದಕ್ಕಾಗಿ 10 ಲಕ್ಷ ರೂ.ಗಳನ್ನು ನಿಮ್ಮ ತಂದೆಯಿಂದ ತೆಗೆದುಕೊಂಡು ಬಾ ಹಾಗೂ ಸಹೋದರಿಯರಿಗೆ ಹಣ ನೀಡಬೇಕು. ವರದಕ್ಷಿಣೆಯಾಗಿ 100 ಗ್ರಾಂ ಚಿನ್ನದ ಒಡವೆಯನ್ನು ತೆಗೆದುಕೊಂಡು ಬರುವಂತೆ ಪೀಡಿಸಿದನ್ನಲ್ಲದೆ, ತಾನು ಹೇಳಿದ ಹಣ ಮತ್ತು ಚಿನ್ನಾಭರಣ ತಾರದಿದ್ದರೆ ವಿಚ್ಛೇದನಾ ನೀಡಿ, ಮಮತಾ ಜೊತೆ ಮದುವೆಯಾಗುತ್ತೇನೆ ಎಂದು ಬೆದರಿಕೆ ಹಾಕಿದ್ದ ಎಂಬುದನ್ನು ತನಗೆ ಪುತ್ರಿ ಬಿಂದು ತಿಳಿಸಿದಳು. ಇಂದು ಮಧ್ಯಾಹ್ನ ತಾವು ಹೊರಗಡೆ ಹೋಗಿದ್ದಾಗ ಮಗಳು 10 ತಿಂಗಳ ಜಾಹ್ನವಿಯನ್ನು ನೇಣು ಹಾಕಿ ಕೊಂದ ನಂತರ, ತಾನು ಕೂಡ ನೇಣು ಹಾಕಿಕೊಂಡಿದ್ದಾಳೆ ಎಂದು ಆಕೆಯ ತಂದೆ ದೊರೆಸ್ವಾಮಿ ಪೊಲೀಸರಿಗೆ ನೀಡಿದ ದೂರಿನಲ್ಲಿ ತಿಳಿಸಿದ್ದಾರೆ. ಈ ಸಂಬಂಧ ನಾಗಮಂಗಲ ಪಟ್ಟಣ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಮಂಡ್ಯದಲ್ಲಿ ಸರಣಿ ಪ್ರತಿಭಟನೆ

ವಿವಿಧ ಬೇಡಿಕೆ ಈಡೇರಿಕೆಗಾಗಿ ಪ್ರಾಂತ ಕೃಷಿ ಕೂಲಿಕಾರರ ಸಂಘ ಹಾಗೂ ಸಿಐಟಿಯು ಕಾರ್ಯಕರ್ತರು, ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ಹಿಂದೂ ಪರ ಕಾರ್ಯಕರ್ತರು, ವೀರಶೈವ ಸಮುದಾಯವನ್ನು ಓಬಿಸಿ ಪಟ್ಟಿಗೆ ಸೇರಿಸಲು ಆಗ್ರಹಿಸಿ ಅಖಿಲ ಭಾರತ ವೀರಶೈವ– ಲಿಂಗಾಯತ ಮಹಾಸಭಾದ ಮುಖಂಡರು ಹಾಗೂ ಬೆಲ್ಲಕ್ಕೆ ಜಿಎಸ್‌ಟಿಯನ್ನು ರದ್ದುಪಡಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರು ನಗರದ ಜಿಲ್ಲಾಧಿಕಾರಿ ಕಚೇರಿ ಮುಂಭಾಗ ಸೋಮವಾರ ಪ್ರತಿಭಟನೆ ನಡೆಸಿದರು.

ಓಬಿಸಿಗೆ ವೀರಶೈವ ಸಮುದಾಯ ಸೇರಿಸಲು ಆಗ್ರಹ



ಮಂಡ್ಯ, ಆ.1– ವೀರಶೈವ ಸಮುದಾಯವನ್ನು ಓಬಿಸಿ ಪಟ್ಟಿಗೆ ಸೇರಿಸಲು ಆಗ್ರಹಿಸಿ ಅಖಿಲ ಭಾರತ ವೀರಶೈವ– ಲಿಂಗಾಯತ ಮಹಾಸಭಾದ ಮುಖಂಡರು ಹಾಗೂ ಕಾರ್ಯಕರ್ತರು ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಡಿಸಿ ಕಚೇರಿಗೆ ಚಂದ್ರವನ ಆಶ್ರಮದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ನೇತೃತ್ವದಲ್ಲಿ ಮುತ್ತಿಗೆ ಹಾಕಿದ ಪ್ರತಿಭಟನಾಕಾರರು, ಬಸವಣ್ಣನವರು ಹಾಕಿಕೊಟ್ಟ ದಾರಿಯಲ್ಲಿ ವೀರಶೈವ ಸಮುದಾಯ ಸಾಗುತ್ತಿದ್ದು, ಹಿಂದುಳಿದ ವರ್ಗಕ್ಕೆ ದೊರೆಯುವ ಮೀಸಲಾತಿಯಿಂದ ಸಮುದಾಯ ವಂಚಿತವಾಗಿದೆ. ಶಿಕ್ಷಣ, ಉದ್ಯೋಗ, ಇತರೆ ಹಿಂದುಳಿದ ವರ್ಗಕ್ಕೆ ದೊರೆಯುವ ಎಲ್ಲಾ ಸೌಲಭ್ಯ ನಮ್ಮ ಸಮುದಾಯಕ್ಕೆ ಸಿಗಬೇಕು ಎಂದು ಒತ್ತಾಯಿಸಿದರು. ಈಗಾಗಲೇ ಅನೇಕ ಸಮುದಾಯಗಳನ್ನು ಓಬಿಸಿ ಪಟ್ಟಿಗೆ ಸೇರಿಸಿದ್ದು, 3ನೇ ಹಿಂದುಳಿದ ವರ್ಗಗಳ ಆಯೋಗ ಚಿನ್ನಪ್ಪರೆಡ್ಡಿ ಆಯೋಗದ ವರದಿ ಪ್ರಕಾರ ಈಗಾಗಲೇ ಹಿಂದುಳಿದ ಪಟ್ಟಿಗೆ ಸೇರಿರುವ ಹಲವು ಸಮುದಾಯಗಳಿಗಿಂತ ವೀರಶೈವ ಸಮುದಾಯ ಹಿಂದುಳಿದಿದೆ. ಈ ನಿಟ್ಟಿನಲ್ಲಿ ನಮ್ಮ ಸಮುದಾಯವನ್ನು ಓಬಿಸಿಗೆ ಸೇರಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಸಮುದಾಯದ ಉಸ್ತುವಾರಿ ಪದಾಧಿಕಾರಿ ಮುಕ್ತಾಂಬ ಬಸವರಾಜು, ಜಿಲ್ಲಾಧ್ಯಕ್ಷ ಸುಬ್ರಮಣ್ಯ, ಪ್ರಧಾನ ಕಾರ್ಯದರ್ಶಿ ಶಿವಕುಮಾರ್ ಸೇರಿದಂತೆ ಹಲವರಿದ್ದರು.

ಸಿಐಟಿಯು ಕಾರ್ಯಕರ್ತರಿಂದ ಡಿಸಿ ಕಚೇರಿಗೆ ನುಗ್ಗಲು ಯತ್ನ, ತಳ್ಳಾಟದಲ್ಲಿ ಹಲವರಿಗೆ ಗಾಯ

ಮಂಡ್ಯ,ಆ.1– ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಪ್ರಾಂತ ಕೃಷಿ ಕೂಲಿಕಾರರ ಸಂಘ ಹಾಗೂ ಸಿಐಟಿಯು ಕಾರ್ಯಕರ್ತರು ಜಿಲ್ಲಾಧಿಕಾರಿ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದಾಗ ಪೊಲೀಸರು ಹಾಗೂ ಪ್ರತಿಭಟನಾಕಾರರ ನಡುವೆ ತಳ್ಳಾಟ ನೂಕಾಟ ನಡೆದು ಹಲವರು ಗಾಯಗೊಂಡರು.

ಸೋಮವಾರ ಸರಣಿ ಪ್ರತಿಭಟನೆಗಳಿದ್ದ ಕಾರಣ ನಗರದ ಜಿಲ್ಲಾಧಿಕಾರಿ ಕಚೇರಿಯ ಎರಡು ಪ್ರವೇಶ ದ್ವಾರಗಳನ್ನು ಬ್ಯಾರಿಕೇಟ್‌ಗಳಿಂದ ಬಂದ್‌ಗೊಳಿಸಿ ನೂರಾರು ಪೊಲೀಸರ ಸರ್ಪಗಾವಲನ್ನು ಹಾಕಲಾಗಿತ್ತು. ಆದರೆ, ಸಿಲ್ವರ್ ಜ್ಯುಬಿಲಿ ಪಾರ್ಕ್‌ನಿಂದ ಮೆರವಣಿಗೆ



ಬಂದ ನೂರಾರು ಮಂದಿ ಸಿಐಟಿಯು ಕಾರ್ಯಕರ್ತರು, ಡಿಸಿ ಕಚೇರಿಯ ಎಡ ಭಾಗದ ದ್ವಾರದಿಂದ ಕಚೇರಿಗೆ ನುಗ್ಗಲು ಯತ್ನಿಸಿದರು. ಈ ಸಂದರ್ಭದಲ್ಲಿ ಬ್ಯಾರಿಕೇಟ್‌ನ್ನು ತಳ್ಳಿ ಒಳ ಬರಲು ಯತ್ನಿಸಿದಾಗ ಘರ್ಷಣೆ ನಡೆಯಿತು. ಸಿಐಟಿಯು ಮುಖಂಡರಾದ ಆನಂದ್, ಶಿವಮಲ್ಲು, ಶಿವಾನಂಜೇಗೌಡ ಎಂಬುವವರಿಗೆ ಗಾಯಗಳಾದವು. ಜೊತೆಗೆ ಕೆಲವು ಪೊಲೀಸರಿಗೂ ಸಹ ಗಾಯಗಳಾದವು. ನಂತರ ಗಾಯಗೊಂಡ ಮೂವರು ಸಿಐಟಿಯು ಕಾರ್ಯಕರ್ತರನ್ನು ಆಂಬುಲೆನ್ಸ್ ಮೂಲಕ ಆಸ್ಪತ್ರೆಗೆ ದಾಖಲು ಮಾಡಲಾಯಿತು. ಇನ್ನು ಸಿಐಟಿಯು ಕಾರ್ಯಕರ್ತರು ಅಗತ್ಯ ವಸ್ತುಗಳ ಮೇಲೆ ಜಿಎಸ್‌ಟಿ ಜಾರಿ, ಪ್ರಾಂತ ಕೃಷಿ ಕೂಲಿಕಾರರಿಗೆ ಕನಿಷ್ಠ ವೇತನ ಜಾರಿ ಸೇರಿದಂತೆ ಅನೇಕ ಬೇಡಿಕೆಗಳನ್ನು ಈಡೇರಿಸಬೇಕೆಂದು ಆಗ್ರಹಿಸಿ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ಹಿಂದೂಪರ ಕಾರ್ಯಕರ್ತರ ಪ್ರತಿಭಟನೆ



ಮಂಡ್ಯ, ಆ.1– ಹಿಂದೂಪರ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆ ಖಂಡಿಸಿ ನಗರದಲ್ಲಿ ಹಿಂದೂ ಪರ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ಜಿಲ್ಲೆಯ ವಿವಿಧೆಡೆಯಿಂದ ತಂಡೋಪ ತಂಡವಾಗಿ ಆಗಮಿಸಿದ ಹಿಂದೂಪರ ಕಾರ್ಯಕರ್ತರು ನಗರದ ಮೈಷುಗರ್ ವೃತ್ತದಲ್ಲಿ ಗುಂಪು ಸೇರಿ ಅಲ್ಲಿಂದ ಬೈಕ್ ರ್‍ಯಾಲಿ ಮೂಲಕ ಡಿಸಿ ಕಚೇರಿಗೆ ಆಗಮಿಸಿದರು. ಹತ್ಯೆ ಮಾಡಿದವನ್ನು ಶೀಘ್ರ ಬಂಧಿಸಬೇಕು ಎಂದು ಆಗ್ರಹಿಸಿದರು. ರಾಜ್ಯದಲ್ಲಿ ಎಸ್‌ಡಿಪಿಐ ಹಾಗೂ ಪಿಎಫ್‌ಐ ಸಂಘಟನೆಗಳನ್ನು ನಿರ್ಬಂಧಿಸುವಂತೆ ಆಗ್ರಹಿಸಿದ ಪ್ರತಿಭಟನಾಕಾರರು, ಎರಡು ಸಂಘಟನೆಗಳ ವಿರುದ್ಧ ಘೋಷಣೆ ಕೂಗಿದರು. ಬಳಿಕ ಮನವಿ ಸಲ್ಲಿಸಿದರು. ಮುನ್ನೆಚ್ಚರಿಕಾ ಕ್ರಮವಾಗಿ ನಗರದಾದ್ಯಂತ ಬಿಗಿ ಪೊಲೀಸ್ ಬಂದೋಬಸ್ತ್ ಹಮ್ಮಿಕೊಳ್ಳಲಾಗಿತ್ತು.

ಬೆಲ್ಲದ ಮೇಲಿನ ಜಿಎಸ್‌ಟಿ ರದ್ದತಿಗೆ ಆಗ್ರಹಿಸಿ ರೈತರ ಪ್ರತಿಭಟನೆ

ಮಂಡ್ಯ, ಆ.1– ಬೆಲ್ಲಕ್ಕೆ ಜಿಎಸ್‌ಟಿ ವಿಧಿಸಲು ಮುಂದಾಗಿರುವ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳು ಕೂಡಲೇ ರದ್ದುಪಡಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ರೈತ ಸಂಘದ ಕಾರ್ಯಕರ್ತರು ಬೃಹತ್ ಪ್ರತಿಭಟನೆ ನಡೆಸಿದರು.

ನಗರದ ಕೆಬ್ಬಳ್ಳಿ ಗ್ರಾಮದಿಂದ ಎತ್ತಿನಗಾಡಿ ಮೂಲಕ ಡಿಸಿ ಕಚೇರಿಗೆ ಮೆರವಣಿಗೆಯಲ್ಲಿ ಬಂದು ಜಿಲ್ಲಾಧಿಕಾರಿ ಅಶ್ವಥಿ ಅವರಿಗೆ ಮನವಿ ಸಲ್ಲಿಸಿದ ಕಾರ್ಯಕರ್ತರು, ಬೆಲ್ಲಕ್ಕೆ ವೈಜ್ಞಾನಿಕ ಬೆಲೆಯನ್ನು ನಿಗದಿಪಡಿಸಬೇಕು. ಆಲೆಮನೆಗಳಿಗೆ ಕಬ್ಬು ನುರಿಸಲು ಗುಣಮಟ್ಟದ ವಿದ್ಯುತ್ ಪೂರೈಸಬೇಕು. ಎಪಿಎಂಸಿ ಕಾಯ್ದೆಯನ್ನು ಕೇಂದ್ರ ಸರ್ಕಾರ ವಾಪಸ್ ಪಡೆದಿದ್ದು, ರಾಜ್ಯ ಸರ್ಕಾರ ಸಹ ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ರಾಜ್ಯಾಧ್ಯಕ್ಷ ಬಡಗಲಪುರ ನಾಗೇಂದ್ರ, ಮುಖಂಡರಾದ ಮಧುಚಂದನ್, ಲಿಂಗಪ್ಪಾಜಿ, ರವಿಕುಮಾರ್, ಶಂಕರ್, ವಿಜಯ್‌ಕುಮಾರ್ ಇತರರಿದ್ದರು.



ಕಳ್ಳತನ ಮಾಡಿ ಸಿಕ್ಕಿಬಿದ್ದ ಅಪ್ರಾಪ್ತ ಬಾಲಕ ಆತ್ಮಹತ್ಯೆ

ಪೊಲೀಸ್ ಠಾಣೆ ಮುಂದೆ ಶವವಿಟ್ಟು ಕೆಲ ಕಾಲ ಪೋಷಕರ ಪ್ರತಿಭಟನೆ

ಮದ್ದೂರು, ಆ.1– ಕಳವು ಪ್ರಕರಣದಲ್ಲಿ ಪೊಲೀಸರಿಂದ ಬಂಧನಕ್ಕೊಳಗಾಗಿ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದ ಅಪ್ರಾಪ್ತ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾದ ಘಟನೆ ತಾಲೂಕಿನ ವಳಗೆರೆಹಳ್ಳಿ ಗ್ರಾಮದಲ್ಲಿ ನಡೆದಿದ್ದು, ಈತನ ಸಾವಿಗೆ ಪೊಲೀಸರೇ ಕಾರಣ ಎಂದು ಆರೋಪಿಸಿ ಪೋಷಕರು ಮದ್ದೂರು ಠಾಣೆಯ ಮುಂದೆ ಕೆಲ ಕಾಲ ಪ್ರತಿಭಟನೆ ನಡೆಸಿದರು.

ವಿವರ: ಬೆಸಗರಹಳ್ಳಿ ಠಾಣಾ ವ್ಯಾಪ್ತಿಯ ಮರ್ಹನವಮಿ ದೊಡ್ಡಿ ಗ್ರಾಮದ ಸುಮಿತ್ರಾ ಎಂಬುವವರ ಮನೆ ಹೆಂಚು ತೆಗೆದು ಒಳನುಗ್ಗಿ ಚಿನ್ನಾಭರಣ ಕಳವು ಮಾಡಿದ ಘಟನೆ ಜು.11ರಂದು ಬೆಳಗ್ಗೆ ನಡೆದಿತ್ತು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದ ಬೆಸಗರಹಳ್ಳಿ ಠಾಣೆ ಸಬ್‌ಇನ್‌ಸ್ಪೆಕ್ಟರ್ ಮಹೇಶ್ ಜು.30ರಂದು 17 ವರ್ಷದ ಅಪ್ರಾಪ್ತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆತ ಕಳವು ಮಾಡಿರುವುದನ್ನು ಒಪ್ಪಿಕೊಂಡಿದ್ದಾನೆ. ಈತ 30 ಸಾವಿರ ರೂ. ಸಾಲ ಮಾಡಿಕೊಂಡು ಸಾಲ ತೀರಿಸುವ ಸಲುವಾಗಿ ಕಳವು ಮಾಡಿರುವುದಾಗಿ ವಿಚಾರಣೆ ವೇಳೆ ತಿಳಿಸಿದ್ದಾನೆ ಎಂದು ಪೊಲೀಸ್ ಮೂಲಗಳು ಹೇಳಿವೆ. ಕಳವು ಮಾಡಿದ ಚಿನ್ನಾಭರಣವನ್ನು ಬೇರೆ ವ್ಯಕ್ತಿಗೆ ಈತ ನೀಡಿದ್ದು, ಅದನ್ನು ವಶಪಡಿಸಿಕೊಂಡು ಪೊಲೀಸರು ಬಾಲಕನ ಪೋಷಕರಿಗೆ ವಿಷಯ ತಿಳಿಸಿ, ನ್ಯಾಯಾಲಯದ ಮುಂದೆ ಆತನ್ನು ಹಾಜರುಪಡಿಸಲಾಗಿ ನ್ಯಾಯಾಧೀಶರು ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದು, ಮಗನನ್ನು ಪೋಷಕರು ಕರೆದೊಯ್ದುರು ಎಂದು ಪೊಲೀಸರು ತಿಳಿಸಿದ್ದಾರೆ.

ಕಳವು ಪ್ರಕರಣದಲ್ಲಿ ತಾನು ಬಂಧನಕ್ಕೊಳಗಾಗಿದ್ದರಿಂದ ಮನನೊಂದ ಬಾಲಕ ಭಾನುವಾರ ರಾತ್ರಿ ನೇಣಿಗೆ ಶರಣಾಗಿದ್ದಾನೆ. ಈತನ ಸಾವಿಗೆ ಬೆಸಗರಹಳ್ಳಿ ಠಾಣೆಯ ಪೊಲೀಸರೇ ಕಾರಣ ಎಂದು ಆರೋಪಿಸಿ ಕೆಲ ಕಾಲ ಪೋಷಕರು ಮದ್ದೂರು ಠಾಣೆ ಮುಂದೆ ಸೋಮವಾರ ಬಾಲಕಿ ಶವವನ್ನಿಟ್ಟು ಪ್ರತಿಭಟನೆ ನಡೆಸಿದರು. ಈ ಸಂಬಂಧ ಮದ್ದೂರು ಠಾಣೆಯಲ್ಲಿ ಅಸ್ವಾಭಾವಿಕ ಸಾವು ಪ್ರಕರಣ ದಾಖಲಾಗಿದೆ.

ಐದನೇ ಪುಟದಿಂದ

ಭಾರತೀಯರೆಲ್ಲರೂ ಒಂದೇ ಡಿಎನ್‌ಎ

ಆರಿಸಿಕೊಂಡ ವೃತ್ತಿ ಆಧಾರದ ಮೇಲೆ ಜಾತಿ ನಿರ್ಧಾರವಾಗಿದೆ. ಜಾತಿಯು ಒಂದು ತಾತ್ಕಾಲಿಕ ಅಂಶವಾಗಿದ್ದು, ವರ್ಣ ಪದ್ಧತಿಯು ದೇವರು ದಯಪಾಲಿಸಿದ್ದಲ್ಲ. ಆದರೆ, ದುರದೃಷ್ಟವಶಾತ್ ನಮ್ಮಲ್ಲಿ ವರ್ಣ ವ್ಯವಸ್ಥೆಯು ಸಮಾಜವನ್ನು ವಿಭಜಿಸುತ್ತಿದೆ ಎಂದೂ ವಿಷಾದ ವ್ಯಕ್ತಪಡಿಸಿದರು. ಸತ್ಯ ಹೊರತರುವ ಸಲುವಾಗಿ ಈ ಹಿಂದೆ ಬ್ರಿಟಿಷರು ಬರೆದ ಚರಿತ್ರೆಯನ್ನು ಈಗ ಬದಲಾಯಿಸುವ ಕಾಲ ಬಂದಿದೆ. ನಾವೆಲ್ಲರೂ ಎಲ್ಲಾ ಭಾಷೆಗಳನ್ನೂ ಬೆಸೆಯುವ ಒಂದು ಭಾಷೆ ಕಲಿಯಬೇಕಿದೆ. ಆ ಭಾಷೆ ಸಂಸ್ಕೃತ ವಾಗಿದೆ. ಅಮೇರಿಕಾದಲ್ಲಿಯೂ ಸಂಸ್ಕೃತ ಭಾಷೆಯನ್ನು ಕಲಿಯಲಾರಂಭಿಸಿದ್ದಾರೆ. ಆದರೆ ನಮ್ಮ ದೇಶದಲ್ಲಿ ಸಂಸ್ಕೃತದ ಬಗ್ಗೆ ಮಾತನಾಡಿದರೆ, ನೀವೊಬ್ಬನೂ ಕೋಮು ವಾದಿಯಾಗಿ ಬಿಂಬಿತರಾಗುತ್ತೀರಿ. ಇಲ್ಲಿ ಸಂಸ್ಕೃತವು ಎಲ್ಲರನ್ನೂ ಒಗ್ಗೂಡಿಸುವ ಭಾಷೆಗಳ ಮಾತೃ ಭಾಷೆ ಎಂದು ಹೇಳಿದರು. ಪಾಶ್ಚಿಮಾತ್ಯ ದೇಶಗಳ ಸಂಶೋಧನೆಯು ಸಂಸ್ಕೃತ ಕೇಂದ್ರೀಕೃತವಾಗಿದೆ. ಇದನ್ನು ಕಂಪ್ಯೂಟರ್‌ನಲ್ಲೂ ಬಳಸಲಾಗುತ್ತಿದ್ದು, ಗೂಗಲ್‌ನಲ್ಲೂ ಇದರ ಬಗ್ಗೆ ಸುದೀರ್ಘ ಮಾಹಿತಿ ಲಭ್ಯವಾಗುತ್ತಿದೆ. ಸಂಸ್ಕೃತ ವ್ಯಾಕರಣವು ಅದೆಷ್ಟು ಶಕ್ತಿಯುತವಾಗಿದೆ ಎಂದರೆ, ಮೆಷಿನ್ ಲರ್ನಿಂಗ್ ಹಾಗೂ ಆರ್ಟಿಫಿಷಿಯಲ್ ಇಂಟಲಿಜೆನ್ಸ್ (ಕೃತಕ ಬುದ್ಧಿಮತ್ತೆ)ನಲ್ಲೂ ಬಳಸಲಾಗುತ್ತಿದೆ ಎಂದು ನುಡಿದರು. ಪ್ರಸ್ತುತ ಪರಿಸ್ಥಿತಿಯಲ್ಲಿ ನಾವು ಬ್ರಿಟಿಷರು ರಚಿಸಿರುವ ಚರಿತ್ರೆಯನ್ನೇ ಓದುತ್ತಿದ್ದೇವೆ. ಅದನ್ನು ನಾವು ಬ್ರಿಟಿಷರು ಹೇಳಿಕೊಟ್ಟಿದ್ದ ಜನರಿಂದ ಕಲಿಯುತ್ತಿದ್ದೇವೆ. ಬ್ರಿಟಿಷರ ಪ್ರಕಾರ ನಾವು ಚದುರಿ ಹೋಗಿದ್ದ, ಸಮಾಜವೆಂದೂ, ಅವರೇ ನಮ್ಮನ್ನು ಒಂದುಗೂಡಿಸಿದರೆಂಬುದನ್ನೂ ಬಿಂಬಿಸಿದ್ದಾರೆ. ಆದರೆ ಅದು ಸತ್ಯಕ್ಕೆ ದೂರವಾದುದು ಎನ್‌ಸಿಆರ್‌ಇಟಿಯು ಚರಿತ್ರೆಯನ್ನು ಈಗ ಪುನರ್‌ರಚಿಸುತ್ತಿರುವುದು ಶ್ಲಾಘನೀಯ ಎಂದರು.

ಮೈಸೂರು ವಿವಿಯಿಂದ ಸಂಶೋಧನೆ

ವರ್ಣ ಮತ್ತು ಜಾತಿ ಪದ್ಧತಿಯು ಹೇಗೆ ಬ್ರಿಟಿಷರ ಒಡೆದು ಆಳುವ ನೀತಿಯ ಅಸ್ತ್ರವಾಗಿತ್ತು ಎಂಬುದರ ಬಗ್ಗೆ ಮಾತನಾಡಿದ ಅವರು, ಮೈಸೂರು ವಿಶ್ವವಿದ್ಯಾನಿಲಯವು ಹೈದರಾಬಾದಿನ ಸಿಸಿಎಂಬಿಯೊಂದಿಗೆ ನಡೆಸಿದ ಸಂಶೋಧನೆಯಿಂದ ಭಾರತೀಯರೆಲ್ಲರೂ ಒಂದೇ ಎಂಬುದು ಸಾಬೀತಾಗಿದೆ ಎಂದರು. ವಂಶಾವಳಿ ವಿಶ್ಲೇಷಣೆಯಿಂದ ಉತ್ತರ ಭಾರತೀಯರು ದಕ್ಷಿಣ ಭಾರತೀಯರಿಗಿಂತ ವಿಭಿನ್ನವಾಗಿಲ್ಲ ಎಂಬುದು ದೃಢಪಟ್ಟಿದೆಯಲ್ಲದೆ, ಎಲ್ಲರೂ ಒಂದೇ ವಂಶಾವಳಿ (ಜೆನೆಟಿಕಲೈಸೇಷನ್) ಅನ್ನೂ ಹಂಚಿಕೊಂಡಿದ್ದಾರೆಂಬುದು ಬಯಲಾಗಿದೆ. ಇದು ಉತ್ತರ ಮತ್ತು ದಕ್ಷಿಣ ಭಾರತದವರೆಲ್ಲರೂ ಒಂದೇ ಸಂಸ್ಕೃತಿಯ ಭಾಗವಾಗಿದ್ದಾರೆಂಬುದನ್ನು ತೋರುತ್ತದೆ ಎಂದರು. ಜನರು ಮತ್ತು ಜಾತಿಗಳ ನಡುವೆ ಯಾವುದೇ ವ್ಯತ್ಯಾಸವಿಲ್ಲ ಎಂದ ಅವರು, ಇವೆರಡರ ಮಧ್ಯೆ ಭಿನ್ನತೆ ಕಾಣಲು ಸಾಧ್ಯವಿಲ್ಲ ಎಂದು ಪ್ರತಿಪಾದಿಸಿದರು.

ಸರ್ದಾರ್ ಪಣಿಕ್ಕರ್ ಸ್ಮಾರಕ ಉಪನ್ಯಾಸ ಮಾಲಿಕೆಯನ್ನು 1964ರಲ್ಲಿ ಆರಂಭಿಸಲಾಗಿತ್ತು. ಭಾರತದಲ್ಲಿ ಶಿಕ್ಷಣದ ಅಭಿವೃದ್ಧಿಗೆ ಪಣಿಕ್ಕರ್ ನೀಡಿದ ಕೊಡುಗೆ ಸ್ಮರಿಸಲು ಇದು ಸಹಕಾರಿಯಾಗಿದೆ. ಸರ್ದಾರ್ ಪಣಿಕ್ಕರ್ ಅವರು ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಯಾಗಿದ್ದಾಗ ಪ್ರಾದೇಶಿಕ ಶಿಕ್ಷಣ ಸಂಸ್ಥೆ ಬೆಳವಣಿಗೆಗೆ ಆಸಕ್ತಿ ತೋರಿಸಿದ್ದರು ಎಂದ ಡಾ॥ ಸ್ವಾಮಿ, ಪಣಿಕ್ಕರ್ ಅವರು ಬ್ರಿಟಿಷರು ನೀಡಿದ್ದ ಭಾರತದ ಚರಿತ್ರೆಯನ್ನು ಅಳಿಸಿ ಹಾಕಲು ಶ್ರಮಿಸಿದ್ದರು ಎಂದರು.

ಆದರೆ ಅವರು ಭಾರತದ ಇತಿಹಾಸಕ್ಕೆ ನೀಡಿದ ಕೊಡುಗೆಯನ್ನು ದೇಶದ ಯಾವುದೇ ವಿಶ್ವವಿದ್ಯಾನಿಲಯದ ಚರಿತ್ರೆಯ ಪಠ್ಯಕ್ರಮದಲ್ಲಿ ಅಳವಡಿಸದಿರುವುದು ವಿಷಾದನೀಯ. ಭಾರತೀಯರು ಚೀನೀಯರ ಮೇಲೂ ಪ್ರಭಾವ ಬೀರಿದ್ದರು. ಒಂದೂವರೆ ಸಾವಿರ ವರ್ಷಗಳ ಹಿಂದೆ ಚೀನಾದಲ್ಲಿ ವು (wu) ಎಂಬ ರಾಜನಿದ್ದ. ಅವನು ಬೌದ್ಧ ಧರ್ಮದ ಬಹು ದೊಡ್ಡ ಆರಾಧಕನಾಗಿದ್ದನು. ತಮಿಳುನಾಡಿನ ಪಲ್ಲವ ಸಾಮ್ರಾಜ್ಯದ ಭೋದಿ ಧಾಮ ಎಂಬ ರಾಜಕುಮಾರ ಚೀನಾಗೆ ಬೌದ್ಧ ಭಿಕ್ಷುವಾಗಿ ಹೋಗಿ, ಬೌದ್ಧ ಧರ್ಮವನ್ನು ವ್ಯಾಪಕವಾಗಿ ಪ್ರಚಾರ ಮಾಡಿದ್ದ ಎಂದ ಅವರು, 22 ವರ್ಷದ ಭೋದಿ ಧಾಮನಿಗೆ ಸಂಪೂರ್ಣ ಜ್ಞಾನೋದಯವಾದ ನಂತರ ಅವನನ್ನು ಚೀನಾಗೆ ರಾಯಭಾರಿಯನ್ನಾಗಿ ಕಳುಹಿಸಲಾಯಿತು.

ಆ ದೇಶದಲ್ಲಿ ಆತ ಶಾವೊಲಿನ್ ಮೊನಾಸ್ಟರಿ ಯ ಬಿಕ್ಕುಗಳಿಗೆ ತರಬೇತಿ ನೀಡಿದನು. ಅದು ತದನಂತರ 'ಶಾವೊಲಿನ್ ಕುಂಗ್‌ಫೂ' ಆಗಿ ಪರಿವರ್ತನೆಯಾಯಿತು. ಈ ಪದ್ಧತಿಯು ಈಗಲೂ ಅಲ್ಲಿ ಪ್ರಚಲಿತದಲ್ಲಿದೆ ಎಂಬುದನ್ನು ಡಾ. ಸುಬ್ರಮಣಿಯನ್ ಸ್ವಾಮಿ ಇದೇ ವೇಳೆ ಸ್ಮರಿಸಿದರು. ಸಂಘ ಪರಿವಾರದ ಅತ್ಯಂತ ಪ್ರಭಾವಶಾಲಿ ಪ್ರಚಾರಕರಾಗಿದ್ದ ದೀನ ದಯಾಳ ಉಪಾಧ್ಯ ಅವರು 'ಇಂಟಿಗ್ರಲ್ ಹ್ಯೂಮನಿಸಂ' ಬಗ್ಗೆ ಬರೆದರು. ಇಂಟಿಗ್ರಲ್ ಹ್ಯೂಮನಿಸಂ ಮೆಟೀರಿಯಲಿಸಂ ಮತ್ತು ಹ್ಯೂಮನಿಸಂನೊಂದಿಗೆ ಬೆರೆತುಕೊಂಡಿರುವುದರಿಂದ ನಾವು ಅದನ್ನು ಪಾಲಿಸಬೇಕಾಗಿದೆ ಎಂದ ಅವರು, ಪಾಶ್ಚಿಮಾತ್ಯ ದೇಶಗಳಲ್ಲಿ ಹಿಂದುತ್ವವನ್ನು ಅತ್ಯುತ್ತಮ ಧರ್ಮ ಎಂದು ಪರಿಗಣಿಸಲಾಗುತ್ತದೆ. ಏಕೆಂದರೆ ಹಿಂದುತ್ವವು ಬೇರೆ ಧರ್ಮಗಳ ರೀತಿ ಕಠಿಣವಾಗಿಲ್ಲ. ಅಲ್ಲದೆ ಇದು ಇತರ ಧರ್ಮಗಳನ್ನು ದ್ವೇಷ ಪೂರಿತವಾಗಿ ಕಾಣುವುದಿಲ್ಲ ಎಂದರು. ಮೈಸೂರು ವಿವಿ ಕುಲಪತಿ ಪ್ರೊ.ಜಿ.ಹೇಮಂತಕುಮಾರ್, ಪ್ರಾದೇಶಿಕ ಶಿಕ್ಷಣ ಸಂಸ್ಥೆ ಪ್ರಾಂಶುಪಾಲ ಪ್ರೊ.ವೈ.ಶ್ರೀಕಾಂತ್ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ನಂತರ ವಿದ್ಯಾರ್ಥಿಗಳೊಂದಿಗೆ ಡಾ॥ಸುಬ್ರಮಣಿಯನ್‌ಸ್ವಾಮಿ ಸಂವಾದ ನಡೆಸಿದರು.

ಅಕ್ರಮ ಸಕ್ರಮ

ಮನೆಗಳನ್ನು ಸಕ್ರಮಗೊಳಿಸಿದ ನಂತರ ಇನ್ನು ಮುಂದೆ ರಾಜ್ಯದಲ್ಲಿ ಎ–ಖಾತಾ, ಬಿ–ಖಾತಾ ಎಂಬ ಪದವೇ ಇರುವುದಿಲ್ಲ. ಸರ್ಕಾರಿ ಭೂಮಿಯಲ್ಲಿ ಅಕ್ರಮವಾಗಿ ನಿರ್ಮಾಣಗೊಂಡಿರುವ ಮನೆಗಳನ್ನು ಸಕ್ರಮಗೊಳಿಸುವ ಸಂಬಂಧ ಈ ಹಿಂದೆಯೇ ನಿರ್ಧಾರ ಕೈಗೊಂಡಿತ್ತು. ಇದನ್ನು ಪ್ರಶ್ನಿಸಿ, ಕೇಂದ್ರ ಸಚಿವರಾಗಿರುವ ರಾಜೀವ್ ಚಂದ್ರಶೇಖರ್ ಅವರ ಬೆಂಗಳೂರು ಫೌಂಡೇಷನ್ ಹಾಗೂ ಮಂಗಳೂರಿನ ಸಂಸ್ಥೆಯೊಂದು ನ್ಯಾಯಾಲಯದ ಮೆಟ್ಟಿಲು ಹತ್ತಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಈ ಸಂಸ್ಥೆಗಳೊಟ್ಟಿಗೆ ಮಾತನಾಡಿದ ನಂತರ ಕೆಲವು ಷರತ್ತುಗಳನ್ನು ಮುಂದಿಟ್ಟು, ಈ ಸಂಸ್ಥೆಗಳು ನ್ಯಾಯಾಲಯದ ಮುಂದಿರುವ ಅರ್ಜಿಯನ್ನು ಹಿಂತೆಗೆದುಕೊಳ್ಳಲು ಸಮ್ಮತಿಸಿವೆ.

ನ್ಯಾಯಾಲಯದಲ್ಲಿರುವ ತಡೆಯಾಜ್ಞೆ ತೆರವುಗೊಂಡ ಕೂಡಲೇ ಅಕ್ರಮ ಮನೆಗಳನ್ನು ಸಕ್ರಮಗೊಳಿಸುವ ಸಂಬಂಧ ಹೊಸತಾಗಿ ಅರ್ಜಿಗಳನ್ನು ಹಾಕಲು ಜನರಿಗೆ ಅವಕಾಶವಿದ್ದು, ನಿಗದಿತ ದಂಡ ಶುಲ್ಕದೊಂದಿಗೆ ಮನೆಗಳನ್ನು ಸಕ್ರಮಗೊಳಿಸಿಕೊಳ್ಳಬಹುದು ಎಂದರು.

ಮನೆಗಳನ್ನು ಸಕ್ರಮಗೊಳಿಸಿಕೊಳ್ಳಲು ದಂಡ ಶುಲ್ಕವನ್ನು ನಿಗದಿಗೊಳಿಸಲಾಗುವುದು ಎಂದ ಅವರು,ಎಷ್ಟು ಅಳತೆಯ ಜಾಗದಲ್ಲಿ ಮನೆ ನಿರ್ಮಿಸಲಾಗಿದೆ ಮತ್ತು ಯಾವ ಪ್ರದೇಶದಲ್ಲಿ ಮನೆಗಳನ್ನು ನಿರ್ಮಿಸಲಾಗಿದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು ದಂಡ ಶುಲ್ಕವನ್ನು ನಿಗದಿಗೊಳಿಸಲಾಗುವುದು ಎಂದು ವಿವರಿಸಿದರು. ಈಗಾಗಲೇ ಸರ್ಕಾರ ಕಾನೂನು ಪ್ರಕ್ರಿಯೆ ಆರಂಭಿಸಿದ್ದು, ಒಂದೆರಡು ವಾರಗಳಲ್ಲಿ ಇದಕ್ಕೆ ಅಂತಿಮ ಸ್ವರೂಪ ದೊರೆಯಲಿದೆ. ಬೆಂಗಳೂರು ನಗರವೊಂದರಲ್ಲೇ ಆರು ಲಕ್ಷ ಮನೆಗಳಿದ್ದರೆ, ಉಳಿದಂತೆ ಮೈಸೂರು, ಮಂಗಳೂರು ಸೇರಿದಂತೆ ಹತ್ತು ನಗರ ಪಾಲಿಕೆಗಳು ಮತ್ತು ಪಟ್ಟಣ ಪ್ರದೇಶಗಳಲ್ಲಿ ಇದೇ ಪ್ರಮಾಣದ ಮನೆಗಳಿವೆ. ನಕ್ಷೆ ಉಲ್ಲಂಘನೆ ವಿಷಯದಲ್ಲಿ ಅದರ ಪ್ರಮಾಣವನ್ನು ಅಧಿಕಾರಿಗಳು ಗುರುತಿಸಿ, ದಂಡ ವಿಧಿಸಲಿದ್ದಾರೆ. ಉಲ್ಲಂಘನೆಯ ಪ್ರಮಾಣ ಶೇ. 40ಕ್ಕಿಂತ ಹೆಚ್ಚಿದ್ದರೆ, ಸಕ್ರಮ ಗೊಳಿಸುವುದು ಕ್ಲಿಷ್ಟಕರವಾಗಬಹುದೆಂದರು.

ಬೆಂಗಳೂರು: ಪ್ರಕೃತಿ ವಿಕೋಪ ಪರಿಹಾರ ಮೂರು ಪಟ್ಟು ಹೆಚ್ಚಳಕ್ಕೆ ಕೇಂದ್ರಕ್ಕೆ ಮನವಿ

ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿ ನೀಡುತ್ತಿರುವ ಪರಿಹಾರದ ಮೊತ್ತವನ್ನು ಮೂರು ಪಟ್ಟು ಹೆಚ್ಚಳ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಮನವಿ ಸಲ್ಲಿಸುವುದಾಗಿ ಕಂದಾಯ ಸಚಿವ ಆರ್.ಅಶೋಕ್ ಹೇಳಿದ್ದಾರೆ. ಪ್ರಕೃತಿ ವಿಕೋಪದ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ನೀಡುವ ಎನ್.ಡಿ.ಆರ್.ಎಫ್ ನಿಧಿಯ ಪ್ರಮಾಣವನ್ನು ಮೂರು ಪಟ್ಟು ಹೆಚ್ಚಳ ಮಾಡಲು ಮನವಿ ನೀಡುವುದಾಗಿ ಅವರು ಇದೇ ಸಂದರ್ಭದಲ್ಲಿ ಹೇಳಿದರು. ಕೇಂದ್ರ ಸರ್ಕಾರ ರಾಜ್ಯಕ್ಕೆ ನೀಡುವ ಪರಿಹಾರದ ಪ್ರಮಾಣ ಹಲವು ಕಾಲದಿಂದ ಹೆಚ್ಚಳವಾಗಿಲ್ಲ ಎಂದ ಅವರು,ಈ ನಿಧಿಯಡಿ ರಾಜ್ಯಕ್ಕೆ ಬರುತ್ತಿರುವ ಹಣ ಸಾಲುತ್ತಿಲ್ಲ ಎಂದರು. ಮಳೆಯಿಂದ ಮನೆಗಳು ಹಾಳಾದರೆ ಕೇಂದ್ರ ಸರ್ಕಾರ ತೊಂಭತ್ತೈದು ಸಾವಿರ ರೂಪಾಯಿ ನೀಡುತ್ತದೆ.ಆದರೆ ಇದು ಸಾಲುವುದಿಲ್ಲ ಎಂಬ ಕಾರಣಕ್ಕಾಗಿ ರಾಜ್ಯ ಸರ್ಕಾರ ನಾಲ್ಕು ಲಕ್ಷದ ಐದು ಸಾವಿರ ರೂಪಾಯಿಗಳನ್ನು ಸೇರಿಸಿ ಐದು ಲಕ್ಷ ರೂ. ನೀಡುತ್ತಿದೆ. ಕೇಂದ್ರ ಸರ್ಕಾರ ಈ ಪರಿಹಾರದ ಮೊತ್ತವನ್ನು ಮೂರು ಪಟ್ಟು ಹೆಚ್ಚಳ ಮಾಡಿದರೆ 2.85 ಲಕ್ಷ ರೂಪಾಯಿ ಬರುತ್ತದೆ.ಇದರಿಂದ ಫಲಾನುಭವಿಗಳಿಗೂ ಅನುಕೂಲವಾಗುತ್ತದೆ. ರಾಜ್ಯ ಸರ್ಕಾರದ ಬೊಕ್ಕಸದ ಮೇಲೂ ಹೊರೆ ಕಡಿಮೆಯಾಗುತ್ತದೆ ಎಂದು ನುಡಿದರು. ಇದೇ ರೀತಿ ಬೆಳೆ ಹಾನಿಯಾದಾಗ ವಿವಿಧ ಬೆಳೆಗಳಿಗೆ ಕೇಂದ್ರ ಸರ್ಕಾರದ ಮಾರ್ಗ ಸೂಚಿಯನ್ವಯ ನೀಡುವ ಪರಿಹಾರದ ಪ್ರಮಾಣ ಕಡಿಮೆ ಎಂದ ಅವರು, ಒಂದು ಹೆಕ್ಟೇರ್ ರಾಗಿ ಬೆಳೆಗೆ ಹದಿನಾರು ಸಾವಿರ ರೂಪಾಯಿ ಪರಿಹಾರ ನೀಡಲಾಗುತ್ತದೆ.ಇದೇ ರೀತಿ ವಿವಿಧ ಬೆಳೆಗಳಿಗೆ ಪರಿಹಾರದ ಮೊತ್ತವನ್ನು ನಿಗದಿ ಮಾಡಲಾಗಿದೆ. ಆದರೆ ಈ ಪರಿಹಾರದ ಮೊತ್ತದಿಂದ ರೈತ ಏನು ಮಾಡಬಹುದು. ಹೀಗಾಗಿ ಕೇಂದ್ರ ಸರ್ಕಾರ ನೀಡುವ ಪರಿಹಾರದ ಮೊತ್ತ ಮೂರು ಪಟ್ಟು ಹೆಚ್ಚಳವಾದರೆ ರಾಗಿ ಬೆಳೆಯುವ ರೈತನಿಗೆ ಒಂದು ಹೆಕ್ಟೇರ್‌ಗೆ ನಲವತ್ತೆಂಟು ಸಾವಿರ ರೂಪಾಯಿ ಸಿಗುತ್ತದೆ ಎಂದು ಅವರು ಹೇಳಿದರು.

ಬಗರ್ ಹುಕುಂ ಅರ್ಜಿ ಸಲ್ಲಿಕೆಗೆ ಮತ್ತೊಂದು ವರ್ಷ ಕಾಲಾವಕಾಶ: ಬಗರ್ ಹುಕುಂ ಸಾಗುವಳಿದಾರರು ಸರ್ಕಾರದ ಮುಂದೆ ಅರ್ಜಿ ಸಲ್ಲಿಸಲು ಇದ್ದ ಕಾಲಾವಕಾಶವನ್ನು ಒಂದು ವರ್ಷಗಳ ಕಾಲ ವಿಸ್ತರಿಸಲು ನಿರ್ಧರಿಸಲಾಗಿದೆ ಎಂದು ಅವರು ಹೇಳಿದರು.

ಆ.7ರಂದು ದಸರಾ ಗಜಪಯಣ

ಎಸ್.ವಿ.ಪ್ರಹ್ಲಾದ್‌ರಾವ್ ಅವರಿಂದ ಜಿಲ್ಲಾಡಳಿತ ಅಭಿಮನ್ಯು ನೇತೃತ್ವದ ಗಜಪಡೆಯ ಮೊದಲ ತಂಡಕ್ಕೆ ಪೂಜೆ ಸಲ್ಲಿಸುವುದರೊಂದಿಗೆ ಗಜಪಯಣಕ್ಕೆ ಚಾಲನೆ ದೊರೆಯಲಿದೆ.

ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್, ಶಾಸಕ ಹೆಚ್.ಪಿ.ಮಂಜುನಾಥ್ ಸೇರಿದಂತೆ ಇನ್ನಿತರ ಜನಪ್ರತಿನಿಧಿಗಳು, ಅಧಿಕಾರಿಗಳು ಪಾಲ್ಗೊಳ್ಳಲಿದ್ದಾರೆ. ಅಂದು ಮಧ್ಯಾಹ್ನದೊಳಗೆ ಅಶೋಕಪುರಂನಲ್ಲಿರುವ ಅರಣ್ಯ ಭವನಕ್ಕೆ ಆನೆಗಳು ಆಗಮಿಸಲಿವೆ. ಆ.10ರಂದು ಬೆಳಗ್ಗೆ 9.20ರಿಂದ 10ಗಂಟೆಯೊಳಗೆ ಸಲ್ಲುವ ಕನ್ಯಾ ಲಗ್ನದಲ್ಲಿ ಗಜಪಡೆ ಅರಮನೆ ಜಯಮಾರ್ತಾಂಡ ದ್ವಾರ ಪ್ರವೇಶಿಸಲು ಮುಹೂರ್ತ ನಿಗದಿ ಮಾಡಲಾಗಿದೆ. ಅ.5ರಂದು ಜಂಬೂಸವಾರಿ ನೆರವೇರಿದ ನಂತರ ಅ.7ರಂದು ಬೆಳಗ್ಗೆ 6.30ರಿಂದ 6.45ರೊಳಗೆ ಸಲ್ಲುವ ಕನ್ಯಾ ಲಗ್ನದಲ್ಲಿ ಆನೆಗಳಿಗೆ ಪೂಜೆ ಸಲ್ಲಿಸಿ, ಬೀಳ್ಕೊಡಲಾಗುತ್ತಿದೆ.

ಮೈಸೂರಲ್ಲಿ ಭಾರೀ ಮಳೆ: ಹಲವೆಡೆ ಮನೆಗಳಿಗೆ ನೀರು ನುಗ್ಗಿ ಅವಾಂತರ

● ರಸ್ತೆಗಳು ಜಲಮಯ ● ಬಹುತೇಕ ಕಡೆ ವಿದ್ಯುತ್ ವ್ಯತ್ಯಯ



ಮೈಸೂರು, ಆ.1(ಎಂಕೆ, ಎಸ್‌ಪಿಎನ್)– ಸೋಮವಾರ ರಾತ್ರಿ ಗುಡುಗು–ಮಿಂಚು ಸಹಿತ ಸುರಿದ ಭಾರೀ ಮಳೆಯಿಂದಾಗಿ ಮೈಸೂರಿನಲ್ಲಿ ಸಾಕಷ್ಟು ಮನೆಗಳಿಗೆ ನೀರು ನುಗ್ಗಿ ಅವಾಂತರ ಸೃಷ್ಟಿಸಿದೆ. ಬೆಳಗ್ಗೆಯಿಂದ ಬಿಡುವು ನೀಡಿದ್ದ ಮಳೆ ಸಂಜೆ 6.30ರ ಸುಮಾರಿಗೆ ಶುರುವಾಗಿ ತಡರಾತ್ರಿಯವರೆಗೂ ಧಾರಾಕಾರವಾಗಿ ಸುರಿಯಿತು. ಬೆಳಗ್ಗೆಯಿಂದ ಬಿಡುವು ನೀಡಿದ್ದ ಮಳೆ ಸಂಜೆ 6.30ರ ಸುಮಾರಿಗೆ ಶುರುವಾಗಿ ತಡರಾತ್ರಿಯವರೆಗೂ ಧಾರಾಕಾರವಾಗಿ ಸುರಿಯಿತು. ಪರಿಣಾಮ ಜನತಾನಗರ ಸಾಹುಕಾರ್ ಚೆನ್ನಯ್ಯ ಮುಖ್ಯ ರಸ್ತೆಯ 7ನೇ ಅಡ್ಡರಸ್ತೆಯ 5 ರಿಂದ 10 ಮನೆಗಳು ಹಾಗೂ ರಾಜರಾಜೇಶ್ವರಿ ನಗರದ ಎರಡ್ಮೂರು ಆಶ್ರಯ ಮನೆಗಳಿಗೆ, ಮಹದೇಶ್ವರ ಬಡಾವಣೆ ಹಾಗೂ ಬೆಲವತ್ತ ಗ್ರಾಮದ ಕೆಲವು ಮನೆಗೆ ನೀರು ನುಗ್ಗಿದ್ದು, ನಿವಾಸಿಗಳು ಪರದಾಡುವಂತಾಯಿತು. ಮನೆಯೊಳಗೆ ಮಂಡಿಯುದ್ದಕ್ಕೆ ನಿಂತಿದ್ದ ನೀರನ್ನು ಹೊರಹಾಕಲು ಹರಸಾಹಸ ಪಡುವಂತಾಯಿತು.

ಹಾಗೆಯೇ ಹೆಬ್ಬಾಳಿನ ಲಕ್ಷ್ಮೀಕಾಂತ ನಗರ, ವಿಜಯನಗರ 3ನೇ ಹಂತ, ಎನ್.ಆರ್.ಮೊಹಲ್ಲಾ ಹಾಗೂ ಬನ್ನಿಮಂಟಪ 2ನೇ ಹಂತದಲ್ಲಿ ಯುಜಿಡಿ ಮ್ಯಾನ್‌ಹೋಲ್‌ಗಳು ತುಂಬಿ ಹರಿದಿದ್ದು, ಪಾದಚಾರಿಗಳು ತಿರುಗಾಡುವುದಕ್ಕೂ ಕಷ್ಟವಾಗಿದೆ. ನಗರದ ಮಧುವನ, ಗುಂಡೂರಾವ್‌ನಗರ, ಚಾಮುಂಡಿಪುರಂ, ಕನಕಗಿರಿ, ಉದಯಗಿರಿ ಸೇರಿದಂತೆ ತಗ್ಗು ಪ್ರದೇಶದ ಬಡಾವಣೆಗಳ ಹಲವಾರು ಮನೆಗಳಿಗೆ ನೀರು ನುಗ್ಗಿದೆ.

ವಿದ್ಯುತ್ ವ್ಯತ್ಯಯ: ಮಳೆ ರಭಸಕ್ಕೆ ವಿವಿ ಮೊಹಲ್ಲಾ ವ್ಯಾಪ್ತಿಯ ಬಡಾವಣೆಗಳು ಸೇರಿದಂತೆ ಹಲವೆಡೆ ವಿದ್ಯುತ್ ವ್ಯತ್ಯಯ ಉಂಟಾಗಿದೆ. ಕೆಲ ದಿನಗಳ ಹಿಂದೆ ಸುರಿದ ಭಾರೀ ಮಳೆಗೆ ಚಾಮುಂಡಿ ಬೆಟ್ಟದ ತಪ್ಪಲಿನ ಮೂರು ವಿದ್ಯುತ್ ಕಂಬಗಳು ಮುರಿದು ಬಿದ್ದಿದ್ದು, ಸೋಮವಾರ ರಾತ್ರಿ ಸುರಿದ ಮಳೆಗೂ ಕೆಲವೆಡೆ ವಿದ್ಯುತ್ ಕಂಬಗಳು ಧರೆಗುರುಳಿರುವ ಸಾಧ್ಯತೆ ಇದೆ ಎಂದು ಚೆಸ್ಕಾಂನ ಕಾರ್ಯಪಾಲಕ ಅಭಿಯಂತರ ಪೂರ್ಣಚಂದ್ರ ತೇಜಸ್ವಿ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.



ಕಾಮಗಾರಿಗಳಿಗೆ ತೊಡಕು: ಮೈಸೂರಿನಲ್ಲಿ ಸುರಿಯುತ್ತಿರುವ ನಿರಂತರ ಮಳೆಯಿಂದಾಗಿ ಯುಜಿಡಿ ಸೇರಿದಂತೆ ಇನ್ನಿತರೆ ಅಭಿವೃದ್ಧಿ ಕಾಮಗಾರಿಗಳಿಗೆ ತೊಡಕಾಗಿದೆ. ಡಿ.ದೇವರಾಜ ಅರಸು ರಸ್ತೆ (ಕೆ.ಆರ್.ವೃತ್ತ ಬಳಿ)ಯಲ್ಲಿ, ಆದಿಚುಂಚನಗಿರಿ ರಸ್ತೆ, ಶಿವರಾಂ ಪೇಟೆ ರಸ್ತೆ ಬದಿ (ಸಂಚಾರ ಪೊಲೀಸ್ ಉಪ ಆಯುಕ್ತರ ಕಚೇರಿ ಬಳಿ) ಹಾಗೂ ಹಲವೆಡೆ ಕಾಮಗಾರಿ ಹಿನ್ನೆಲೆಯಲ್ಲಿ ತೆಗೆದಿರುವ ಗುಂಡಿಗಳಿಗೆ ಮಳೆ ನೀರು ತುಂಬಿಕೊಂಡಿದ್ದು, ಮಳೆ ಬಿಡುವು ನೀಡಿದಾಗ ನೀರನ್ನು ಹೊರತೆಗೆಯುವುದೇ ಅರ್ಧ ದಿನದ ಕೆಲಸವಾಗುತ್ತಿದೆ ಎಂದು ಕೆಲವರು ಅಭಿಪ್ರಾಯಪಟ್ಟಿದ್ದಾರೆ.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಭಾರಿ ಮಳೆ; 2 ದಿನ ಭಕ್ತರ ಪ್ರವೇಶ ನಿಷೇಧ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಸೋಮವಾರ ಸುರಿದ ಧಾರಾಕಾರ ಮಳೆಯಿಂದಾಗಿ ದರ್ಪಣತೀರ್ಥ ನದಿಯು ತುಂಬಿ ಹರಿದಿದ್ದು, ಕುಕ್ಕೆಯ ಆದಿಸುಬ್ರಹ್ಮಣ್ಯ ದೇವಳದ ಒಳಗೆ ನೀರು ಪ್ರವೇಶಿಸಿದೆ.

ಹೀಗಾಗಿ ಕುಕ್ಕೆ ದೇಗುಲಕ್ಕೆ ಎರಡು ದಿನ ಭಕ್ತರಿಗೆ ಪ್ರವೇಶ ನಿಷೇಧಿಸಲಾಗಿದ್ದು, ಭಕ್ತರು ಸಹಕರಿಸುವಂತೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ. ಕೋರಿದ್ದಾರೆ.

ಕುಕ್ಕೆ ದೇವಳದ ಸಮೀಪ ಇರುವ ದರ್ಪಣತೀರ್ಥ ನದಿಯ ಸ್ನಾನ ಘಟ್ಟವು ಮುಳುಗಡೆಯಾಗಿದೆ. ಸಮೀಪದ ರುದ್ರಪಾದ ಸೇತುವೆಯು ಜಲಾವೃತಗೊಂಡಿದೆ. ಈ ಮಧ್ಯೆ ಸುಬ್ರಹ್ಮಣ್ಯ–ಪುತ್ತೂರು– ಮಂಜೇಶ್ವರ ಅಂತರರಾಜ್ಯ ಸಂಪರ್ಕ ರಸ್ತೆಯ ಸೇತುವೆಯು ಮುಳುಗಡೆಯಾಗುವ ಸಾಧ್ಯತೆ ಇದೆ. ದರ್ಪಣ ತೀರ್ಥ ನದಿಯ ತಟದಲ್ಲಿರುವ 12ಕ್ಕೂ ಅಧಿಕ ಮನೆಗಳಿಗೆ ನೀರು ನುಗ್ಗಿದೆ.

ಸುಳ್ಯ ತಾಲ್ಲೂಕಿನ ಕೊಲ್ಲಮೊಗ್ರು ಗ್ರಾಮ ಪಂಚಾಯತಿ ವ್ಯಾಪ್ತಿಯ ಕಲ್ಮಕಾರು ಎಂಬಲ್ಲಿ ಭಾನುವಾರ ತಡರಾತ್ರಿ



ಹೊಳೆಯಲ್ಲಿ ಮಣ್ಣು ಮಿಶ್ರಿತ ನೀರು ರಭಸದಿಂದ ಹರಿದ ಪರಿಣಾಮ ಹೊಳೆಬದಿಯ 35ಕ್ಕೂ ಅಧಿಕ ಬೃಹತ್ ಮರಗಳು ನೀರು ಪಾಲಾಗಿವೆ. ಮರಗಳ ಗೆಲ್ಲು, ಸಿಪ್ಪೆಗಳು ಸೀಳಿದ್ದು ನೆರೆ ಪ್ರಮಾಣದ ಭೀಕರತೆಗೆ ಸಾಕ್ಷಿಯಾಗಿವೆ. ಕಲ್ಮಕಾರಿನ ಕಡಮಕಲ್ಲು ಎಸ್ಟೇಟ್ ಮೇಲ್ಭಾಗದಲ್ಲಿ ಭೂಕುಸಿತ ಸಂಭವಿಸಿರುವ ಬಗ್ಗೆ ಶಂಕೆ ವ್ಯಕ್ತವಾಗಿದೆ. ಮೂರು ಸೇತುವೆಗಳಿಗೂ ಹಾನಿಯಾಗಿದ್ದು, ಸಂಪರ್ಕ ಕಡಿತದ ಭೀತಿ ಎದುರಾಗಿದೆ.

ಕಾಡಂಚಿನ ರೈತರಿಗೆ ಯಾವುದೇ ತೊಂದರೆ ಕೊಡಬೇಡಿ

ಅರಣ್ಯ ಇಲಾಖೆ ಅಧಿಕಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರ ಸೂಚನೆ



ಅರಣ್ಯದಂಚಿನ ರೈತರ ಅಹವಾಲುಗಳ ಹಿನ್ನೆಲೆಯಲ್ಲಿ ಸೋಮವಾರ ಮೈಸೂರು ಡಿಸಿ ಕಚೇರಿಯಲ್ಲಿ ಶಾಸಕ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಸಭೆ ನಡೆಯಿತು. ಈ ವೇಳೆ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಹಾಗೂ ಅಧಿಕಾರಿಗಳು ಉಪಸ್ಥಿತರಿದ್ದರು.

ಮೈಸೂರು, ಆ.1(ಆರ್‌ಕೆಬಿ)– ಹಲವಾರು ವರ್ಷಗಳಿಂದ ಸರ್ಕಾರಿ ಜಮೀನಿನಲ್ಲಿ ಉಳುಮೆ ಮಾಡುತ್ತಿರುವ ಮೈಸೂರು ತಾಲೂಕಿನ ಕಾಡಂಚಿನ ಹಾರೋಹಳ್ಳಿ, ಮಾವಿನಹಳ್ಳಿ, ಅರಸನಕೆರೆ, ಎಸ್.ಕಲ್ಲಹಳ್ಳಿ, ಚಿಕ್ಕಹಳ್ಳಿ, ಗುಜ್ಜೇಗೌಡನಪುರ, ಮಾರ್ಬಳ್ಳಿ ಗ್ರಾಮಗಳ ರೈತರಿಗೆ ತೊಂದರೆ ನೀಡದಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ಅರಣ್ಯ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ವ್ಯವಸಾಯ ಮಾಡಿಕೊಂಡು ಬಂದಿರುವ ರೈತರಿಗೆ ಅರಣ್ಯ ಇಲಾಖೆಯವರು ಈ ಜಮೀನು ನಮಗೆ ಸೇರಿದ್ದು ಎಂದು ಹೇಳಿ, ಅಳತೆಗೆ ಬಂದು ರೈತರಿಗೆ ತೊಂದರೆ ನೀಡುತ್ತಿದ್ದಾರೆ ಎಂಬ ರೈತರ ದೂರುಗಳ ಹಿನ್ನೆಲೆಯಲ್ಲಿ ಅವರು ಸೋಮವಾರ ಮೈಸೂರು ಡಿಸಿ ಕಚೇರಿಯಲ್ಲಿ ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್ ಅಧ್ಯಕ್ಷತೆಯಲ್ಲಿ ಅರಣ್ಯ ಅಧಿಕಾರಿಗಳೊಂದಿಗೆ ಸಭೆ ನಡೆಸಿದರು.

ಈ ವೇಳೆ ಮಾತನಾಡಿದ ಜಿ.ಟಿ.ದೇವೇಗೌಡರು, ಮೈಸೂರಿನ ರಿಂಗ್ ರಸ್ತೆಯಿಂದ 10 ಕಿ.ಮೀ. ಒಳಗಿರುವ ರೈತರಿಗೆ ಸಾಗುವಳಿ ನೀಡಲು ಸಾಧ್ಯವಿಲ್ಲವೆಂದು ಸರ್ಕಾರದ ಆದೇಶವಿದೆ. ಇದರಿಂದ ಹಲವಾರು ವರ್ಷಗಳಿಂದ ಜಮೀನು ಉಳುಮೆ ಮಾಡುತ್ತಿರುವ ರೈತರಿಗೆ ಅನ್ಯಾಯವಾಗಿದೆ, ಹಾಗೂ ಸಾಗುವಳಿ ನೀಡುವಾಗ ಗೋಮಾಳಕ್ಕೆ ಸಾಗುವಳಿ ನೀಡಬಾರದು ಎಂಬ ಸರ್ಕಾರದ ಆದೇಶವಿದ್ದು, ಇದನ್ನು ನಾನು ವಿಧಾನಸಭಾ ಅಧಿವೇಶನದಲ್ಲಿ ಈಗಾಗಲೇ ಒತ್ತಾಯಿಸಿದ್ದು, ಮತ್ತೊಮ್ಮೆ ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ ಎಂದು ತಿಳಿಸಿದರು.

ಹಾಗಾಗಿ ಹಾರೋಹಳ್ಳಿ, ಮಾವಿನಹಳ್ಳಿ, ಅರಸನಕೆರೆ, ಎಸ್.ಕಲ್ಲಹಳ್ಳಿ, ಚಿಕ್ಕಹಳ್ಳಿ, ಗ್ರಾಮಗಳ ವ್ಯಾಪ್ತಿಯ ಕಾಡಂಚಿನಲ್ಲಿ ಹಲವಾರು ವರ್ಷಗಳಿಂದ ಉಳುಮೆ ಮಾಡುತ್ತಾ ಬಂದಿರುವ ರೈತರಿಗೆ ಯಾವುದೇ ರೀತಿಯಲ್ಲಿ ತೊಂದರೆ ನೀಡಬಾರದು ಎಂದು ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಯಪುರ ಗ್ರಾಮದ ಸರ್ವೆ ನಂ. 94ರಲ್ಲಿ ಕೆಲವು ರೈತರಿಗೆ ಸಾಗುವಳಿ ನೀಡಲಾಗಿದೆ. ಇನ್ನು ಕೆಲವು ರೈತರಿಗೆ ಸಾಗುವಳಿ ನೀಡಿರುವುದಿಲ್ಲ. ಆದರೆ ಅರಣ್ಯ ಇಲಾಖೆಯ ಅಧಿಕಾರಿಗಳು ಇಲಾಖೆಗೆ ಸೇರಬೇಕು ಎಂದು ಹೇಳುತ್ತಾರೆ ಎಂದು ರೈತ ಜವರನಾಯಕ ಶಾಸಕರ ಗಮನ ಸೆಳೆದರು.

ಉಪಅರಣ್ಯ ಸಂರಕ್ಷಣಾಧಿಕಾರಿಗಳು 1924ರಲ್ಲಿ ಮೀಸಲು ಅರಣ್ಯ ಪ್ರದೇಶವೆಂದು ನೋಟಿಫಿಕೇಷನ್ ಆಗಿದೆ. ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ ಜಂಟಿಯಾಗಿ ಸರ್ವೆ ಮಾಡಿ, ಗಡಿ ಗುರುತು ಮಾಡಿದ್ದಾರೆ. ಯಾವ ಗ್ರಾಮ, ಯಾವ ಸರ್ವೆ ನಂಬರ್, ಎಷ್ಟು ಹೆಕ್ಟೇರ್ ಎಂದು ಅಧಿಸೂಚನೆಯಾಗಿದೆ. ನಮ್ಮಲ್ಲಿ ಪ್ರತಿ ವರ್ಷ ಪ್ಯಾರಮಿಟ್ ಮಾಡಲಾಗುತ್ತದೆ. ಅಂದರೆ ಮೀಸಲು ಅರಣ್ಯ ಪ್ರದೇಶದ ಗಡಿಯನ್ನು ಪ್ರತಿ ವರ್ಷ ಗುರುತು ಮಾಡಲಾಗುತ್ತದೆ. 1980ಕ್ಕೂ ಮೊದಲು ಯಾವ ರೈತರು ಮೀಸಲು ಅರಣ್ಯ ಪ್ರದೇಶದಲ್ಲಿ ವ್ಯವಸಾಯ ಮಾಡುತ್ತಿದ್ದರೆ, ಸುಪ್ರೀಂ ಕೋರ್ಟ್‌ನಲ್ಲಿ ಪ್ರಕರಣ ಇರುವುದರಿಂದ ನಾವು ಅವರನ್ನು ಖಾಲಿ ಮಾಡಿಸುವುದಿಲ್ಲ. ಆದರೆ ಪ್ರತಿ ವರ್ಷದಂತೆ ಗಡಿಯನ್ನು ಗುರುತು ಮಾಡುವ ಕೆಲಸ ಮಾತ್ರ ನಮ್ಮ ಸಿಬ್ಬಂದಿ ಮಾಡುತ್ತಾರೆ ಎಂದು ಸ್ಪಷ್ಟಪಡಿಸಿದರು.

> ❝ಅರಣ್ಯದಂಚಿನಲ್ಲಿ ರೈತರು ವ್ಯವಸಾಯ ಮಾಡುತ್ತಿರುವ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆ ಮತ್ತು ಅರಣ್ಯ ಇಲಾಖೆ ಜಂಟಿಯಾಗಿ ಸರ್ವೆ ಮಾಡಿ, ಅದು ಅರಣ್ಯ ಇಲಾಖೆ ವ್ಯಾಪ್ತಿಗೆ ಒಳಪಟ್ಟಿಲ್ಲವೆಂದು ಅದನ್ನು ಅರಣ್ಯ ಇಲಾಖೆ ಬಿಟ್ಟು ಕೊಡುತ್ತದೆ. ಯಾವುದೇ ಅನುಮಾನವಿದ್ದರು ನನ್ನ ಕಚೇರಿಗೆ ಖುದ್ದಾಗಿ ಭೇಟಿ ನೀಡಿ, ನನ್ನ ಬಳಿ ಮಾತನಾಡಬಹುದು.
> –ಜಿ.ಟಿ.ದೇವೇಗೌಡ, ಶಾಸಕರು.

ಸರ್ಕಾರಿ ಆದೇಶದನ್ವಯ ಅರಣ್ಯ ಇಲಾಖೆಯವರು ಬೌಂಡ್ರಿ ಪೆರೊಂಬೋಲೇಷನ್ (ಗಡಿ ಸರ್ವೆಯನ್ನು) ಪ್ರತಿ ತಿಂಗಳು ಎರಡು ಬಾರಿ ಅಂದರೆ ತಿಂಗಳಿನ 3ನೇ ತಾರೀಖು ಮತ್ತು 18ನೇ ತಾರೀಖು ಸಿಬ್ಬಂದಿ ಅರಣ್ಯ ಗಡಿ ಮತ್ತು ಅಕ್ಕ–ಪಕ್ಕದ ಬಾಂದು ಕಲ್ಲುಗಳನ್ನು ನಿರಂತರವಾಗಿ ಪರಿಶೀಲನೆ ಮಾಡುತ್ತಿದ್ದಾರೆ. ಇದನ್ನು ತಾವುಗಳು ತಪ್ಪಾಗಿ ಗ್ರಹಿಸದೆ, ನಿಮ್ಮ ಜಮೀನಿಗೆ ನಾವುಗಳು ಯಾವುದೇ ತೊಂದರೆ ನೀಡುವುದಿಲ್ಲವೆಂದು ತಿಳಿಸಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ಬಗಾದಿ ಗೌತಮ್, ಉಪವಿಭಾಗಾಧಿಕಾರಿ ಕಮಲ, ಡಿಡಿಎಲ್ ಸೀಮಂತಿನಿ, ತಹಶೀಲ್ದಾರ್ ಗಿರೀಶ್, ಎಡಿಎಲ್‌ಆರ್ ವಿವೇಕ್, ವಲಯ ಅರಣ್ಯಾಧಿಕಾರಿ ಸುರೇಂದ್ರ ರೈತ ಮುಖಂಡರಾದ ಬಸವರಾಜು, ಜವರನಾಯಕ ಇನ್ನಿತರ ರೈತರು ಭಾಗವಹಿಸಿದ್ದರು.



ಮೈಸೂರಿನ ಜಲದರ್ಶಿನಿ ಶಾಸಕರ ಕಚೇರಿಯಲ್ಲಿ ಶಾಸಕ ಜಿ.ಟಿ.ದೇವೇಗೌಡರು ಚಾಮುಂಡೇಶ್ವರಿ ಕ್ಷೇತ್ರದ ವ್ಯಾಪ್ತಿಯ ಗ್ರಾಮ ಪಂಚಾಯಿತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳ ಸಭೆ ನಡೆಸಿದರು. ಸಭೆಯಲ್ಲಿ ಸ್ಮಶಾನ ಅಭಿವೃದ್ಧಿ, ಆಶ್ರಯ ಮನೆಗಳ ಪ್ರಗತಿ ಕುರಿತು ಚರ್ಚಿಸಲಾಯಿತು. ಸಭೆಯಲ್ಲಿ ತಾಪಂ ಇಓ ರಮೇಶ್ ಇತರರಿದ್ದರು.

ಆಟೋ ಚಾಲಕರ ಕನ್ನಡ ಪ್ರೇಮ ಶ್ಲಾಘಿಸಿದ ಶಾಸಕ ಎಲ್.ನಾಗೇಂದ್ರ

ಆಟೋ ಸ್ಟ್ಯಾಂಡ್‌ಗೆ ಮೇಲ್ಛಾವಣಿ ಕಾಮಗಾರಿಗೆ ಚಾಲನೆ



ಮೈಸೂರು, ಆ.1– ಕೆಆರ್‌ಐಡಿಎಲ್ ವತಿಯಿಂದ ಕೈಗೊಂಡಿರುವ ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯ ಅನುದಾನದಿಂದ ನಿರ್ಮಿಸುತ್ತಿರುವ ಪಡುವಾರಹಳ್ಳಿಯ ನಾರಾಯಣಸ್ವಾಮಿ ಬ್ಲಾಕ್‌ನ ಒಂದನೇ ಮುಖ್ಯರಸ್ತೆಯಲ್ಲಿರುವ ಸಿಂಹಾದ್ರಿಯ ಸಿಂಹ ಆಟೋ ನಿಲ್ದಾಣಕ್ಕೆ ಮೇಲ್ಛಾವಣಿ ಮತ್ತು ನೆಲಹಾಸು ನಿರ್ಮಾಣದ ಐದು ಲಕ್ಷ ಮೌಲ್ಯದ ಕಾಮಗಾರಿಗೆ ಶಾಸಕ ಎಲ್.ನಾಗೇಂದ್ರ ಗುದ್ದಲಿಪೂಜೆ ನೆರವೇರಿಸಿದರು.


ನಂತರ ಮಾತನಾಡಿದ ಅವರು, ಆಟೋ ಚಾಲಕರ ಕನ್ನಡ ಪ್ರೇಮವು ನಮಗೆಲ್ಲ ಮಾದರಿ. ಕನ್ನಡ ರಾಜ್ಯೋತ್ಸವ ತಿಂಗಳಲ್ಲಿ ಪ್ರತಿಯೊಂದು ಆಟೋ ನಿಲ್ದಾಣದಲ್ಲಿ ಆಚರಣೆ ಮಾಡುತ್ತಾ ಕನ್ನಡ ತಾಯಿ ಸೇವೆ ಮಾಡುತ್ತಿದ್ದು ಅವರಿಗೆ ಮಳೆ ಬಿಸಿಲಿನಿಂದ ಆಶ್ರಯವಾಗಲು ಕ್ಷೇತ್ರದ ವ್ಯಾಪ್ತಿಯಲ್ಲಿ 15ಕ್ಕೂ ಹೆಚ್ಚು ಆಟೋ ನಿಲ್ದಾಣಗಳಿಗೆ ಶಾಸಕರ ಅನುದಾನದಿಂದ ಮೇಲ್ಛಾವಣಿ ಕಲ್ಪಿಸಿದ್ದೇವೆ. ಇದನ್ನು ಸದ್ಬಳಕೆ ಮಾಡಿಕೊಳ್ಳಿ ಎಂದರು.

ನಗರಪಾಲಿಕೆ ಸದಸ್ಯರಾದ ನಮ್ರತಾ ರಮೇಶ್, ಎಂ.ಚಿಕ್ಕವೆಂಕಟು, ಮಾಜಿ ಸದಸ್ಯ ಸಿ.ಶ್ರೀರಾಮ್, ವಾರ್ಡ್ ಅಧ್ಯಕ್ಷ ಮಂಜು, ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ಸಿಂಡಿಕೇಟ್ ಸದಸ್ಯರಾದ ಶಿವಕುಮಾರ್, ಟ್ರಸ್ಟ್ ಸದಸ್ಯರಾದ ಎಂ.ಭೈರಪ್ಪ, ರಾಮಣ್ಣ, ಮಹದೇವಸ್ವಾಮಿ, ಲೋಕೇಶ್, ಈ.ಬಸವರಾಜು, ಎಂ.ಶಿವಪ್ರಕಾಶ್, ಮೈಸೂರು ಸಿಟಿ ಕೋ ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಶಿವು, ಅಭಿ ಚಿಕನ್‌ನ ಭೈರಪ್ಪ, ಸಿ.ಡಿ.ಕುಮಾರ್, ವೇಣು, ಸುಧಾಮಣಿ, ಉಮಾ, ಸುಧಾ ರಾಮಚಂದ್ರು, ಉಮೇಶ್ ಡಾಲು, ಆಟೋ ಚಾಲಕ ಸಂಘದ ಪ್ರಕಾಶ್, ಮಧು, ಪರಮೇಶ್, ರಮೇಶ್, ಶಿವಲಿಂಗ, ಪುಟ್ಟಸ್ವಾಮಿ, ಭೈರಪ್ಪ ಇನ್ನಿತರರು ಉಪಸ್ಥಿತರಿದ್ದರು.

ಆ.5ರಂದು ಮೂರು ದಿನಗಳ ಮೆಗಾ ಮೈಸೂರು ಸ್ಟಾರ್ಟ್ ಅಪ್ ಪೆವಿಲಿಯನ್‌ಗೆ ಪ್ರಧಾನಿ ಮೋದಿ ವರ್ಚುಯಲ್ ಮೂಲಕ ಚಾಲನೆ

ಮೈಸೂರು, ಆ.1 (ಆರ್‌ಕೆ)– ಆಗಸ್ಟ್ 5ರಂದು ಬೆಳಗ್ಗೆ 10 ಗಂಟೆಗೆ ಪ್ರಧಾನಮಂತ್ರಿ ನರೇಂದ್ರಮೋದಿ ಅವರು ಮೂರು ದಿನಗಳ ಮೆಗಾ ಮೈಸೂರು ಸ್ಟಾರ್ಟ್ ಅಪ್ ಪೆವಿಲಿಯನ್ ಮತ್ತು ಕಾಂಕ್ಲೇವ್ ವರ್ಚುಯಲ್ ಮೂಲಕ ಚಾಲನೆ ನೀಡುವರು.

ಮೈಸೂರು ಎಕೋಸಿಸ್ಟಂ ಪಾರ್ಟನರ್ಸ್ ಎಸ್‌ಜೆಸಿಇ ಸ್ಟೆಪ್, ಟಿಐಇ ಮೈಸೂರು, ಸಿಐಐಎಲ್, ವೈಐ ಮೈಸೂರು, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (KDEM), ಸ್ಟಾರ್ಟ್ ಅಪ್ ಇಂಡಿಯಾ, ಸ್ಟಾರ್ಟ್ ಅಪ್ ಕರ್ನಾಟಕ, ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಎಕ್ಸೆಲ್ ಸಾಫ್ಟ್ ಹಾಗೂ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಸಂಯುಕ್ತಾಶ್ರಯದಲ್ಲಿ ಆಗಸ್ಟ್ 5ರಿಂದ 7ರವರೆಗೆ ಮೈಸೂರಿನ ಎಸ್‌ಜೆಸಿಇ ಆವರಣದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ಸುತ್ತೂರು ಮಠಾಧೀಶ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅಧ್ಯಕ್ಷತೆ ವಹಿಸಲಿರುವ ಪೆವಿಲಿಯನ್‌ನಲ್ಲಿ ರಾಜವಂಶಸ್ಥ ಯದುವೀರ



ಕೃಷ್ಣದತ್ತ ಚಾಮರಾಜ ಒಡೆಯರ್ 'ಮೈಸೂರು ವಿಷನ್' ಕುರಿತು ಮಾತನಾಡುವರು. ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಡಾ.ಸಿ.ಎನ್. ಅಶ್ವಥ್ ನಾರಾಯಣ ವಸ್ತು ಪ್ರದರ್ಶನ ಉದ್ಘಾಟಿಸುವರು. ವಿದ್ಯಾರ್ಥಿಗಳು, ಅನ್ವೇಷಣಾಗಾರರು, ಸಂಶೋಧಕರು, ಶಿಕ್ಷಣ ತಜ್ಞರು, ಕೈಗಾರಿಕೋದ್ಯಮಿಗಳು, ಹೂಡಿಕೆದಾರರು, ಇನ್‌ಕುಬಿಲೇಟರ್‌ಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಒಂದೇ ಸೂರಿನಡಿ ವೃತ್ತಿನಿರತರು ಸೇರಿ 'ಮೈಸೂರು ವಿಷನ್' ಕುರಿತು ಚರ್ಚೆ ನಡೆಸುವರು. ಗೋಷ್ಠಿಗಳು, ಚರ್ಚೆ, ನವ ಉದ್ದಿಮೆ ಆಕಾಂಕ್ಷಿಗಳೊಂದಿಗೆ ಸಂವಾದ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಎಲೆಕ್ಟ್ರಾನಿಕ್ಸ್, ಟೆಕ್ನಾಲಜಿ ಡೇಟಾ ಬೇಸ್ಡ್ ಮಾಹಿತಿಗಳನ್ನು ಸ್ಟಾರ್ಟ್‌ಅಪ್ ಭಾಗವಾಗಿ ನೀಡಲಿದ್ದು, ಐಓಟಿ, ಕ್ಲೌಡ್ ಟೆಕ್ನಾಲಜಿ, ಫಿನ್ ಟೆಕ್, ಅಗ್ರಿಟೆಕ್, ಹೆಲ್ತ್‌ಕೇರ್ ಸಂಸ್ಥೆಗಳು ಭಾಗವಹಿಸಿ ತಮ್ಮ ಅನುಭವಗಳನ್ನು ಹಂಚಿಕೊಳ್ಳಲಿವೆ ಎಂದು ಎಸ್‌ಜೆಸಿಇ ಸ್ಟೆಪ್ ಚೀಫ್ ಎಕ್ಸಿಕ್ಯೂಟಿವ್ ಬಿ.ಶಿವಶಂಕರ್ ತಿಳಿಸಿದ್ದಾರೆ.

ಅಜಾದಿ ಕಾ ಅಮೃತ ಮಹೋತ್ಸವ ಮತ್ತು ಆತ್ಮನಿರ್ಭರ ಭಾರತ ವರ್ಷದ ಅಂಗವಾಗಿ ನಡೆಯುತ್ತಿರುವ ಪೆವಿಲಿಯನ್‌ನಲ್ಲಿ ಉದ್ಯೋಗಾಕಾಂಕ್ಷಿಗಳು, ಉದ್ಯೋಗದಾತರಿಗೆ ಪ್ರೋತ್ಸಾಹ ನೀಡಲಿದ್ದು, ಮೆಂಟರಿಂಗ್, ಎಜುಕೇಷನ್, ನೆಟ್‌ವರ್ಕಿಂಗ್ ಮತ್ತು ಫಂಡಿಂಗ್ ಕುರಿತಂತೆ ಮಾಹಿತಿ ಹಂಚಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ ಎಂದು ತಿಳಿಸಿದ್ದಾರೆ. ಆಸಕ್ತರು ಉಚಿತ ಪಾಸ್ ಪಡೆಯಲು ಹೆಸರು ನೋಂದಣಿಗಾಗಿ https://mysurustartuppavilion.in ಅಥವಾ ಮಹೇಶ್ ಕಟ್ಟಲೆ (94481–54063) ಅಥವಾ ಬಿ.ಶಿವಶಂಕರ್ (70225–97794) ಅವರನ್ನು ಸಂಪರ್ಕಿಸಲು ಕೋರಲಾಗಿದೆ.

ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ: ಬೆಂಗಳೂರಿನಲ್ಲಿ ಮೂವರು ವಶಕ್ಕೆ

ಬೆಂಗಳೂರು ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯದ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ ಸಂಬಂಧ ಇಲ್ಲಿನ ನಾಗರಬಾವಿ ಬಳಿಯ ಹೋಟೆಲ್ ಹಾಗೂ ಬೇಕರಿಯಲ್ಲಿ ಕೆಲಸ ಮಾಡಿಕೊಂಡಿದ್ದ ಮೂವರನ್ನು ಪೊಲೀಸರು ಸೋಮವಾರ ವಶಕ್ಕೆ ಪಡೆದಿದ್ದಾರೆ.

ಸೈಯದ್ ಇರ್ಫಾನ್, ಅಲ್ತಾಫ್ ಹುಸೇನ್ ಎಂದು ಗುರುತಿಸಲಾಗಿದೆ. ಮತ್ತೊಬ್ಬನ ಹೆಸರು ತಿಳಿದುಬಂದಿಲ್ಲ. ಮೂವರನ್ನು ಮಂಗಳೂರಿಗೆ ತನಿಖಾಧಿಕಾರಿಗಳು ಕರೆದೊಯ್ದಿದ್ದಾರೆ. ಮೊಬೈಲ್ ಲೊಕೇಷನ್ ಆಧರಿಸಿ ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

ಕೆ.ಆರ್.ಕ್ಷೇತ್ರದಲ್ಲಿ ರಾಷ್ಟ್ರಧ್ವಜ ಹಾರಿಸುವ ಅಭಿಯಾನಕ್ಕೆ ಚಾಲನೆ



ಮೈಸೂರು,ಆ.1(ಎಂಟಿವೈ)– ಸ್ವಾತಂತ್ರ್ಯೋತ್ಸವದ ಅಮೃತೋತ್ಸವದ ಹಿನ್ನೆಲೆಯಲ್ಲಿ ಮೈಸೂರಿನ ಕೆ.ಆರ್.ವಿಧಾನಸಭಾ ಕ್ಷೇತ್ರದಲ್ಲಿ ಶಾಸಕ ಎಸ್.ಎ.ರಾಮದಾಸ್ ಪಾಕ್ಷಿಕ ರಾಷ್ಟ್ರಧ್ವಜ ಹಾರಿಸುವ ಅಭಿಯಾನಕ್ಕೆ ಸೋಮವಾರ ಚಾಲನೆ ನೀಡಿದರು.

ಆಜಾದಿ ಕಾ ಅಮೃತ ಮಹೋತ್ಸವದ ಅಂಗವಾಗಿ ಕೇಂದ್ರ ಸರ್ಕಾರ ಹರ್ ಘರ್ ತಿರಂಗಾ ಅಭಿಯಾನಕ್ಕೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಕೆ.ಆರ್.ಕ್ಷೇತ್ರದಲ್ಲಿ ಸತತ 15 ದಿನಗಳ ತ್ರಿವರ್ಣ ಧ್ವಜ ಹಾರಿಸುವ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ನಗರಪಾಲಿಕೆ 47ನೇ ವಾರ್ಡ್ ವ್ಯಾಪ್ತಿಯ ಕುವೆಂಪುನಗರದಲ್ಲಿ ವಿವಿಧ ಬೂತ್ ಅಧ್ಯಕ್ಷರ ಮನೆ ಮೇಲೆ ತ್ರಿವರ್ಣ ಧ್ವಜ ಹಾರಿಸಲಾಯಿತು.

ಈ ವೇಳೆ ಶಾಸಕ ಎಸ್.ಎ.ರಾಮದಾಸ್ ಮಾತನಾಡಿ, ದೇಶಕ್ಕೆ ಸ್ವಾತಂತ್ರ್ಯ ಬಂದು 75 ವರ್ಷ ಪೂರ್ಣಗೊಂಡಿದೆ. ಅಮೃತ ಮಹೋತ್ಸವ ಹಿನ್ನೆಲೆಯಲ್ಲಿ ದೇಶವೇ ಸಂಭ್ರಮಿಸುತ್ತಿದೆ. ದೇಶದ ಜನರಲ್ಲಿ ದೇಶಭಕ್ತಿ ಹೆಚ್ಚಿಸುವುದಕ್ಕಾಗಿ ಇಂದಿನಿಂದ ಕೆ.ಆರ್.ಕ್ಷೇತ್ರದಲ್ಲಿ ಪಾಕ್ಷಿಕ ರಾಷ್ಟ್ರಧ್ವಜ ಹಾರಿಸುವ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಕೆ.ಆರ್.ಕ್ಷೇತ್ರದ ಎಲ್ಲಾ ಬೂತ್‌ಗಳ ಅಧ್ಯಕ್ಷರ ಮನೆಗಳ ಮೇಲೂ ಧ್ವಜ ಹಾರಿಸಲಾಗಿದೆ. ಮುಂದಿನ ದಿನಗಳಲ್ಲಿ ಕ್ಷೇತ್ರದ ಎಲ್ಲಾ ಮನೆಗಳ ಮೇಲೂ ಬಾವುಟ ಹರಿಸಲು ಕ್ರಮ ಕೈಗೊಳ್ಳಲಾಗುತ್ತದೆ. 75ನೇ ವರ್ಷದ ಸಂಭ್ರಮಾಚರಣೆ ಹಿನ್ನೆಲೆಯಲ್ಲಿ ವಿವಿಧ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು. ಈ ಸಂದರ್ಭದಲ್ಲಿ ಪಾಲಿಕೆ ಸದಸ್ಯ ಶಿವಕುಮಾರ್ ಸೇರಿದಂತೆ ಇನ್ನಿತರರು ಇದ್ದರು.

ಆ.4ರವರೆಗೆ ಭಾರೀ ರಿಯಾಯ್ತಿ ಮಾರಾಟ



ಮೈಸೂರು,ಆ.1–ಬ್ರಾಂಡೆಡ್ ಕಂಪನಿಗಳ ರೆಡಿಮೇಡ್ ಗಾರ್ಮೆಂಟ್ಸ್ ಮತ್ತು ಫುಟ್‌ವೇರ್ಸ್‌ಗಳ ಮೇಲೆ ಭಾರಿ ರಿಯಾಯಿತಿ ಮಾರಾಟವನ್ನು ಮೈಸೂರು ನಗರದ ಕುವೆಂಪುನಗರದ ಉದಯರವಿ ರಸ್ತೆಯಲ್ಲಿರುವ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಏರ್ಪಡಿಸಲಾಗಿದೆ. ಬ್ರಾಂಡೆಡ್ ಫುಟ್‌ವೇರ್, ಪುರುಷರ ಮತ್ತು ಮಹಿಳೆಯರ ಸ್ಪೋರ್ಟ್ಸ್ ಶೂಸ್, ಫಾರ್ಮಲ್ ಶೂಸ್, ಲೂಫರ್ಸ್, ಫ್ಲಿಫ್‌ಪ್ಲಾಸ್ಟ್, ಸ್ಲಿಪರ್ಸ್ ಎಲ್ಲಾ ರೀತಿಯ ಪಾದರಕ್ಷೆಗಳು ಅಲ್ಲದೆ, ಪುರುಷರ ಬ್ರಾಂಡೆಡ್ ಶರ್ಟ್ಸ್, ಪ್ಯಾಂಟ್ಸ್, ಟೀ–ಶರ್ಟ್ಸ್, ಜಾಕೆಟ್ಸ್, ಸ್ವೆಟರ್ಸ್, ಸ್ವೆಟ್ ಶರ್ಟ್ಸ್, ಟ್ರಾಕ್ ಪ್ಯಾಂಟ್, ಲೋವರ್ ಶರ್ಟ್ಸ್, ಬೆಲ್ಟ್‌ಗಳು ಲಭ್ಯವಿದೆ.

ಮಹಿಳೆಯರ ಬ್ರಾಂಡೆಡ್ ಕುರ್ತಿಗಳು ಲೇಡಿಸ್ ಟಾಪ್ಸ್, ಜಾಕೆಟ್ಸ್, ಸ್ವೆಟರ್ಸ್, ಟ್ರ್ಯಾಕ್ ಪ್ಯಾಂಟ್ಸ್, ಟೀ ಶರ್ಟ್ಸ್, ಟೈಟ್ಸ್, ಪ್ಲಾಜೋ, ಲೆಗ್ಗಿನ್ಸ್ ಸಹಿತ ಅನೇಕ ಬ್ರಾಂಡೆಡ್ ಉತ್ಪನ್ನಗಳು ಆಫರ್ ದರದಲ್ಲಿ ಲಭ್ಯವಿದೆ. ಬ್ರಾಂಡೆಡ್ ಅಡಿದಾಸ್, ನೈಕಿ, ಪೂಮಾ, ಫಿಲಾಸ್ಪೋರ್ಟ್ಸ್, ಕೂಕ ಕಿಚ್, ಡಬ್ಲ್ಯೂಡಿ ರೋಡ್ ಸ್ಟಾರ್, ರೀಬಾಕ್, ಸ್ಟ್ರಂಡಿ, ಎಚ್‌ಆರ್‌ಎಕ್ಸ್ ವಾನ್ಸ್, ಯುಸಿಬಿ, ಮಸ್ತ್ ಅಂಡ್ ಹರ್ಬರ್, ಕಾನ್‌ವೆರ್ಸ್, ಲೊಟ್ಟೊ, ಯು.ಎಸ್. ಪೋಲೋ, ಒರೆಲಿಯಾ, ಕ್ಯಾಟ್ ವಾಕ್, ಫ್ಲೈಯಿಂಗ್ ಮಿಷನ್ ಸಹಿತ ವಿವಿಧ ಕಂಪನಿಗಳ ಉತ್ಪನ್ನಗಳು ಆಷಾಡದ ಪ್ರಯುಕ್ತ ಭಾರೀ ರಿಯಾಯಿತಿ ದರದಲ್ಲಿ ಮಾರಾಟವಾಗುತ್ತಿವೆ.

ಪೂನಂ ಸೀರೆಗಳು, ಪ್ಲೇನ್ ಸೀರೆಗಳು, ಜಾರ್ಜೆಟ್ ಸೀರೆಗಳು, ಝರಿ ಬಾರ್ಡರ್ ಸೀರೆಗಳು, ಕ್ರೇಪ್ ಸಿಲ್ಕ್ ಸೀರೆಗಳು, ಪುರುಷರ ಹಾಗೂ ಮಹಿಳೆಯರ ಒಳ ಉಡುಪುಗಳು ಮತ್ತು ಹುಟ್ಟಿದ ಮಕ್ಕಳ ಉಡುಪುಗಳು ಸಹ ದೊರೆಯುತ್ತವೆ. ಆಗಸ್ಟ್ 4ರವರೆಗೆ ಪ್ರತಿದಿನ ಬೆಳಗ್ಗೆ 10.30ರಿಂದ ರಾತ್ರಿ 9.30ರವರೆಗೆ ಈ ಅವಕಾಶ.

ಸೇವಾ ಕಾರ್ಯಗಳ ಮೂಲಕ ರೈತ ಬಂಧು

ಚಂದನ್‌ಗೌಡರ ಹುಟ್ಟುಹಬ್ಬ ಆಚರಣೆ



ಮೈಸೂರು,ಆ.1–ವಿವಿಧ ಸೇವಾ ಕಾರ್ಯಗಳ ಮೂಲಕ ಸರಳವಾಗಿ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್‌ಗೌಡರ ಹುಟ್ಟುಹಬ್ಬ ಆಚರಿಸಲಾಯಿತು.

ಇಲ್ಲಿನ ತಿಲಕ್‌ನಗರದಲ್ಲಿರುವ ವಿಶೇಷಚೇತನ ಸರ್ಕಾರಿ ಶಾಲಾ ಮಕ್ಕಳಿಗೆ ಬೆಳಗ್ಗಿನ ಉಪಾಹಾರದ ಜೊತೆಗೆ ದಿನಬಳಕೆಗೆ ಅಗತ್ಯವಿರುವ ವಿವಿಧ ಪದಾರ್ಥಗಳು ಸೇರಿದಂತೆ ಔಷಧಗಳುಳ್ಳ ಮೆಡಿಕಲ್ ಕಿಟ್ ಅನ್ನು ಚಂದನ್‌ಗೌಡರು ವಿತರಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ವಿಶೇಷಚೇತನ ಮಕ್ಕಳು ದೇವರ ಸಮಾನ. ಇಂದು ಅವರುಗಳ ಜೊತೆ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವುದು ನಿಜಕ್ಕೂ ಸಂತೋಷದ ಕ್ಷಣವಾಗಿದೆ. ಇಂದಿನ ದಿನ ನನ್ನ ಜೀವನದಲ್ಲಿ ಅವಿಸ್ಮರಣೀಯ ಎಂದರು.

ರೈತ ಕಲ್ಯಾಣ ಸಂಘದ ವತಿಯಿಂದ ಸೇವಾ ಕಾರ್ಯಗಳು ಮುಂದುವರೆಯಲಿದ್ದು, ಈ ಸರ್ಕಾರಿ ಶಾಲೆಗೆ ಅಗತ್ಯವಿರುವ ನೆರವು ನೀಡಲಾಗುವುದು ಹಾಗೂ ಇಲ್ಲಿನ ಮಕ್ಕಳ ಶಿಕ್ಷಣ ಮತ್ತು ಇನ್ನಿತರೆ ಸೌಲಭ್ಯಗಳನ್ನು ಒದಗಿಸುವುದಾಗಿ ಇದೇ ವೇಳೆ ನೀಡಿದರು.

ಬಳಿಕ ರೋಗಿಗಳಿಗೆ ಹಣ್ಣು–ಹಂಪಲು ವಿತರಣೆ ಸೇರಿದಂತೆ ಇನ್ನಿತರ ಸೇವಾ ಕಾರ್ಯಗಳಲ್ಲಿ ಅವರು ಪಾಲ್ಗೊಂಡರು. ಶಾಲೆಯ ವ್ಯವಸ್ಥಾಪಕರಾದ ಸತೀಶ್, ಹೇಮಂತ್ ಗೌಡ, ಅಭಿ, ಸಂಜಯ್, ವೇಣು, ವಿದ್ಯಾ, ರಾಜು, ಹರೀಶ್ ಗೌಡ, ಚಂದ್ರು, ಮೂರ್ತಿ, ನವೀನ್ ಗೌಡ, ಮೋಸಿನ್, ಈರಣ್ಣ, ದಾಸೇಗೌಡ, ಸಿದ್ದಲಿಂಗು, ವಸಂತ, ನಾಗರಾಜು, ನಾಗೇಶ್, ಪುನೀತ್, ಬೇಬಿ, ಅಜ್ಗರ್, ಶಿವಶಂಕರ, ಚಂದ್ರು, ಲೋಕಿ, ಚನ್ನಮಾದನಾಯಕ, ರಘು, ಶಿವು, ಸುರೇಶ್, ಮೃತ್ಯುಂಜಯ, ಮಹೇಶ್, ಮಂಜುನಾಥ್, ಮಹದೇವು, ಶೇಖರ್, ಕುಮಾರ್, ಪುಟ್ಟರಾಜು, ಮಂಜು, ನಂಜುಂಡಸ್ವಾಮಿ, ಸದಾನಂದ್, ಲೋಕೇಶ್, ರಾಜೇಶ ಮತ್ತಿತರರು ಇದ್ದರು.



ಮೈಸೂರು ಆರ್.ಟಿ.ನಗರದ 'ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್' ಶಿಕ್ಷಣ ಸಂಸ್ಥೆಯಲ್ಲಿ ಆಯೋಜಿಸಿದ್ದ ಗಾಳಿಪಟ ಉತ್ಸವವನ್ನು ಮೇಯರ್ ಸುನಂದಾ ಪಾಲನೇತ್ರ ಉದ್ಘಾಟಿಸಿದರು. ನೂರಾರು ಮಕ್ಕಳು ವಿವಿಧ ಮಾದರಿ ಗಾಳಿಪಟ ಹಾರಿಸಿ, ಸಂಭ್ರಮಿಸಿದರು. ಸಂಸ್ಥೆಯ ಅಧ್ಯಕ್ಷ ಆರ್.ರಘು, ಪ್ರಾಂಶುಪಾಲೆ ಶಿಲ್ಪ ಪ್ರಶಾಂತ್, ಕಾರ್ಯದರ್ಶಿ ಕೌಟಿಲ್ಯ ಹಾಗೂ ಅಧ್ಯಾಪಕರು ಉಪಸ್ಥಿತರಿದ್ದರು.




ನಂಜನಗೂಡು ತಾಲೂಕು ಯುವಜನತಾ ದಳದ ನೂತನ ಅಧ್ಯಕ್ಷರಾಗಿ ಪುನೀತ್ ಅವರನ್ನು ಆಯ್ಕೆ ಮಾಡಿ, ನೇಮಕಾತಿ ಪತ್ರ ವಿತರಿಸಲಾಯಿತು. ಈ ವೇಳೆ ಜಿಲ್ಲಾಧ್ಯಕ್ಷ ಗಂಗಾಧರಗೌಡ, ಸತೀಶ, ಖಾಲಿದ್, ಯೋಗೇಶ್, ಆನಂದಕುಮಾರ್, ಶಿವಕುಮಾರ, ಅಖಿಲ್, ನಾಯರ್, ಸ್ವಾಮಿ, ಚಂದ್ರು ಕಂಬಾರ, ನಿತಿನ್‌ಗೌಡ, ಸಿದ್ದೇಶ್ ಇನ್ನಿತರರಿದ್ದರು.

ಹುಲಿ ಜಾಡು ಪತ್ತೆಗೆ 30 ಕ್ಯಾಮರಾ, ಎರಡು ಸಾಕಾನೆ ಬಳಕೆ







ಮೈಸೂರು,ಆ.1(ಎಂಟಿವೈ)– ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ ಹೆಡಿಯಾಲ ವಲಯದ ಬಳ್ಳೂರು ಹುಂಡಿ ಗಸ್ತು ವ್ಯಾಪ್ತಿಗೆ ಒಳಪಡುವ ಒಡೆಯನಪುರ ಗ್ರಾಮದ ಜಮೀನಲ್ಲಿ ದಾಳಿ ನಡೆಸಿ ದನಗಾಹಿಯೊಬ್ಬರನ್ನು ಕೊಂದು ಹಾಕಿರುವ ಹುಲಿ ಜಾಡು ಪತ್ತೆಗಾಗಿ ಅರಣ್ಯ ಇಲಾಖೆ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಿದೆ.

ಅರಣ್ಯ ಪ್ರದೇಶದ ಗಡಿಯಿಂದ 50 ಮೀಟರ್ ಅಂತರದಲ್ಲೇ ಜಮೀನಿನಲ್ಲಿ ಹಸು ಮೇಯಿಸುತ್ತಿದ್ದ ಪುಟ್ಟೇಗೌಡ ಎಂಬುವರ ಮೇಲೆ ದಾಳಿ ನಡೆಸಿ ಕೊಂದು ಹಾಕಿದ್ದ ಹುಲಿ ಪತ್ತೆಗಾಗಿ ಅರಣ್ಯ ಇಲಾಖೆ ಕಾರ್ಯಾಚರಣೆ ಆರಂಭಿಸಿದೆ. ರಾಮಾಪುರದ ಆನೆ ಕ್ಯಾಂಪ್‌ನಿಂದ ರೋಹಿತ ಹಾಗೂ ಪಾರ್ಥಸಾರಥಿ ಆನೆಯನ್ನು ಕರೆತರಲಾಗಿದ್ದು, ಹಸು ಕೊಂದಿದ್ದ

ಕಾಡಂಚಿನಲ್ಲಿ ಜಾನುವಾರು ಮೇಯಿಸದಂತೆ ಸೂಚನೆ

ಸ್ಥಳದಲ್ಲಿ ಬೋನ್ ಇರಿಸಲಾಗಿದೆ. ಇದರ ಜೊತೆಗೆ ಕಾಡಂಚಿನ ಆಯ್ದ ಭಾಗದಲ್ಲಿ ಹುಲಿಯನ್ನು ಪತ್ತೆ ಹಚ್ಚುವುದಕ್ಕಾಗಿ ಅತ್ಯಾಧುನಿಕ ತಂತ್ರಜ್ಞಾನ ಹೊಂದಿರುವ 30 ಕ್ಯಾಮರಾ ಅಳವಡಿಸಲಾಗಿದೆ. ಸೋಮವಾರ ರಾತ್ರಿ ವೇಳೆ ಯಾವುದಾದರೂ ಕ್ಯಾಮರಾ ಟ್ರಾಪ್‌ನಲ್ಲಿ ಹುಲಿಯ ಚಹರೆ ದಾಖಲಾದರೆ, ಆ ಹುಲಿ ಯಾವ ಕಾರಣಕ್ಕೆ ಕಾಡಿಂದ ಗ್ರಾಮದತ್ತ ಬಂದಿತ್ತು ಎಂಬ ಕಾರಣ ಪತ್ತೆಯಾಗಲಿದೆ. ಅಲ್ಲದೆ, ಅದರ ಮೈಮೇಲಿನ ಪಟ್ಟೆಯ ಗುರುತಿನಿಂದ ಅದಕ್ಕೆ ಎಷ್ಟು ವಯಸ್ಸಾಗಿದೆ. ಈ ಹಿಂದೆ ಆ ಹುಲಿ ಎಲ್ಲಿ ನೆಲೆಸಿತ್ತು ಎಂಬ ಮಾಹಿತಿ ಪತ್ತೆಯಾಗುವುದರಿಂದ ಮುಂದಿನ ಕಾರ್ಯಾಚರಣೆಗೆ ಅಗತ್ಯ ದಾಖಲೆ ಕ್ರೋಢೀಕರಿಸಲು ಇಲಾಖೆ ಮುಂದಾಗಿದೆ. ಒಂದು ವೇಳೆ ಅದಕ್ಕೆ 9 ವರ್ಷ ವಯಸ್ಸಾಗಿದ್ದರೆ ಬೇಟೆಯಾಡುವ ಶಕ್ತಿ ಕಳೆದುಕೊಂಡಿರುವುದು ದೃಢಪಡುವುದರಿಂದ ಸೆರೆ ಹಿಡಿಯಲು ಅನುಮತಿ ದೊರೆಯಲಿದೆ. ಈ ಹಿನ್ನೆಲೆಯಲ್ಲಿ ಹುಲಿ ಜಾಡು ಪತ್ತೆ ಹಚ್ಚಲು ಸೋಮವಾರ ಕೂಂಬಿಂಗ್ ಕಾರ್ಯಾಚರಣೆ ಆರಂಭಿಸಲಾಗಿದೆ. ಹುಲಿ ಜಾಡು ಪತ್ತೆಯಾಗುವವರೆಗೂ ಒಡೆಯನಪುರ ಸೇರಿದಂತೆ ಸುತ್ತಮುತ್ತಲಿನ ಗ್ರಾಮಗಳ ಗ್ರಾಮಸ್ಥರು ಕಾಡಂಚಿನಲ್ಲಿ ಜಾನುವಾರುಗಳನ್ನು ಮೇಯಿಸದಂತೆ ಸೂಚನೆ ನೀಡಲಾಗಿದೆ. ಅಲ್ಲದೆ, ಕಾಡಂಚಿನ ಹೊಲಗಳತ್ತ ಓಡಾಡುವಾಗ ಎಚ್ಚರದಿಂದ ಇರುವಂತೆ ಸಲಹೆ ನೀಡಲಾಗಿದೆ.

ಲಾರಿ ಹರಿದು ಮಹಿಳೆ ಸಾವು

ಮೈಸೂರು, ಆ.1(ಆರ್‌ಕೆ)– ದ್ವಿಚಕ್ರ ವಾಹನಕ್ಕೆ ಲಾರಿ ಡಿಕ್ಕಿ ಹೊಡೆದು ಮಹಿಳೆ ಸಾವನ್ನಪ್ಪಿರುವ ಘಟನೆ ಮೈಸೂರಿನ ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಸಮೀಪ ರಿಂಗ್ ರಸ್ತೆಯ ರೈಲ್ವೆ ಅಂಡರ್‌ಬ್ರಿಡ್ಜ್ ಬಳಿ ಸೋಮವಾರ ಮಧ್ಯಾಹ್ನ ಸಂಭವಿಸಿದೆ.

ಮೈಸೂರಿನ ಜೆಕೆ ಟೈರ್ಸ್ ಎದುರಿನ ಜಾಜಿ ಲೇಔಟ್ ನಿವಾಸಿ ಬಾಬುರಾಜ್ ಅವರ ಪತ್ನಿ ಸ್ವರ್ಣ (54) ದುರಂತ ಸಾವಿಗೀಡಾದವರು. ಜಿಆರ್‌ಎಸ್ ಫ್ಯಾಂಟಸಿ ಪಾರ್ಕ್ ಕಡೆಯಿಂದ ರಿಂಗ್ ರೋಡ್ ಸರ್ವೀಸ್ ರಸ್ತೆಯಲ್ಲಿ ಕೆಆರ್‌ಎಸ್ ರಸ್ತೆ ಕಡೆಗೆ ದ್ವಿಚಕ್ರ ವಾಹನದಲ್ಲಿ ತೆರಳುತ್ತಿದ್ದ ಸ್ವರ್ಣ ಅವರಿಗೆ ಅಲ್ಲಿನ ರೈಲ್ವೆ ಅಂಡರ್ ಬ್ರಿಡ್ಜ್ ಸಮೀಪ ಸರ್ವಿಸ್ ರಸ್ತೆಯಿಂದ ರಿಂಗ್‌ರೋಡ್ ಮುಖ್ಯಪಥಕ್ಕೆ ಬೆಂಗಳೂರು ಕಡೆಗೆ ಹೋಗಲು ತಿರುವು ತೆಗೆದುಕೊಳ್ಳುತ್ತಿದ್ದ 18 ಚಕ್ರದ ಭಾರೀ ಲಾರಿಗೆ ಸಿಲುಕಿ ಸೋಮವಾರ ಮಧ್ಯಾಹ್ನ 3.50 ಗಂಟೆ ವೇಳೆಗೆ ಅವರು ಸ್ಥಳದಲ್ಲೇ ಸಾವನ್ನಪ್ಪಿದರು. ಘಟನಾ ಸ್ಥಳಕ್ಕೆ ಧಾವಿಸಿದ ವಿವಿಪುರಂ ಸಂಚಾರ ಠಾಣೆ ಇನ್ಸ್‌ಪೆಕ್ಟರ್ ಪ್ರಸನ್ನ ಹಾಗೂ ಸಿಬ್ಬಂದಿ ಮಹಜರು ನಡೆಸಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ವೀರಶೈವ-ಲಿಂಗಾಯತ ಪಂಗಡಗಳನ್ನು ಓಬಿಸಿ ಪಟ್ಟಿಗೆ ಸೇರಿಸಲು ಆಗ್ರಹಿಸಿ ಪ್ರತಿಭಟನೆ



ಮಡಿಕೇರಿ,ಆ.1– ವೀರಶೈವ–ಲಿಂಗಾಯತ ಪಂಗಡಗಳನ್ನು ಕೇಂದ್ರ ಸರಕಾರ ಹಿಂದುಳಿದ ವರ್ಗಗಳ(ಓಬಿಸಿ) ಪಟ್ಟಿಗೆ ಸೇರ್ಪಡೆ ಮಾಡಬೇಕು ಎಂದು ಆಗ್ರಹಿಸಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಕೊಡಗು ಜಿಲ್ಲಾ ಘಟಕ ಮಡಿಕೇರಿಯಲ್ಲಿ ಪ್ರತಿಭಟನೆ ನಡೆಸಿತು.

ನಗರದ ಗಾಂಧಿ ಮೈದಾನದಿಂದ ಜಿಲ್ಲಾಧಿಕಾರ ಕಚೇರಿವರೆಗೆ ಪ್ರತಿಭಟನಾ ಜಾಥಾ ನಡೆಸಿ ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸರಕಾರವನ್ನು ಆಗ್ರಹಿಸಲಾಯಿತು.

ಮಹಾಸಭಾದ ಜಿಲ್ಲಾ ಘಟಕದ ಅಧ್ಯಕ್ಷ ಎಚ್.ವಿ.ಶಿವಪ್ಪ ಮಾತನಾಡಿ, ಜಾತಿ, ಧರ್ಮ ಭೇದವಿಲ್ಲದೇ ಎಲ್ಲ ವರ್ಗದವರ ಸರ್ವಾಂಗೀಣ ಅಭಿವೃದ್ಧಿಗಾಗಿ ಶ್ರಮಿಸಿದ ವೀರಶೈವ–ಲಿಂಗಾಯತ ಸಮುದಾಯವು ಇಂದು ಸಾಮಾಜಿಕ ನ್ಯಾಯಕ್ಕಾಗಿ ಹೋರಾಟ ಮಾಡಬೇಕಾದ ಅನಿವಾರ್ಯತೆಗೆ ಸಿಲುಕಿದೆ. ಕಳೆದ 60 ವರ್ಷಗಳಿಂದ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿದ್ದರೂ ಈ ವರ್ಗವನ್ನು ಕೇಂದ್ರದ ಹಿಂದುಳಿದ ವರ್ಗಗಳ(ಓಬಿಸಿ) ಪಟ್ಟಿಗೆ ಸೇರಿಸದೇ ಇರುವುದು ದುರದೃಷ್ಟಕರ. ಸರ್ಕಾರ ತಕ್ಷಣವೇ ಎಚ್ಚೆತ್ತುಕೊಂಡು ಓಬಿಸಿ ಪಟ್ಟಿಗೆ ಸೇರ್ಪಡೆಗೊಳಿಸದಿದ್ದಲ್ಲಿ ಜಿಲ್ಲೆಯಾದ್ಯಂತ ಹೋರಾಟ ರೂಪಿಸಲಾಗುತ್ತದೆ ಎಂದು ಎಚ್ಚರಿಸಿದರು.

ಕೇಂದ್ರದ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಲ್ಲಿ ತಿಗಳ, ಈಡಿಗ, ಒಕ್ಕಲಿಗ, ದೇವಾಂಗ ಮತ್ತು ಬಲಿಜ ಸಮುದಾಯಗಳನ್ನು ಸೇರಿಸಲಾಗಿದೆ. ವೀರಶೈವ–ಲಿಂಗಾಯತ ಸಮುದಾಯವನ್ನು ಕೇಂದ್ರ ಓಬಿಸಿ ಪಟ್ಟಿಯಿಂದ ಹೊರಗಿಟ್ಟಿರುವುದಕ್ಕೆ ಯಾವುದೇ ಕಾರಣಗಳನ್ನು ನೀಡಿಲ್ಲ. ಹೀಗಾಗಿ ಸಮುದಾಯ ಪ್ರತಿಭಾವಂತರು ಅವಕಾಶಗಳಿಂದ ವಂಚಿತರಾಗಿದ್ದಾರೆ ಎಂದು ಆರೋಪಿಸಿದರು.

ಮಹಾಸಭಾದ ಗೌರವಾಧ್ಯಕ್ಷ ಕೊಡ್ಲಿಪೇಟೆ ಕಿರಿಕೊಡ್ಲಿ ಮಠದ ಸದಾಶಿವ ಸ್ವಾಮೀಜಿ ಮಾತನಾಡಿ, ರಾಜ್ಯದ ಹಿಂದುಳಿದ ಪಟ್ಟಿಯಲ್ಲಿರುವ ಜಾತಿ–ಪಂಗಡಗಳನ್ನು ಕೇಂದ್ರದ ವರ್ಗಗಳ ಪಟ್ಟಿಗೆ ಸೇರಿಸಲಾಗುತ್ತದೆ. ಈ ಕುರಿತು ಕೇಂದ್ರ ಸರ್ಕಾರ ಎಚ್ಚೆತ್ತುಕೊಂಡು ಸಮುದಾಯ ಬಾಂಧವರಿಗೆ ನ್ಯಾಯ ಒದಗಿಸಿ ಕೊಡಬೇಕು ಎಂದು ಒತ್ತಾಯಿಸಿದರು.

ಬಳಿಕ ಜಿಲ್ಲಾಧಿಕಾರಿ ಡಾ. ಬಿ.ಸಿ.ಸತೀಶ ಅವರ ಮೂಲಕ ರಾಜ್ಯ ಮತ್ತು ಕೇಂದ್ರ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಿದರು.

ಕಲ್ಲುಮಠದ ಮಹಾಂತ ಸ್ವಾಮೀಜಿ, ಉದ್ದಿನಕಟ್ಟೆ ಮಠದ ಅಭಿನವ ಸಿದ್ಧಲಿಂಗ ಶಿವಾಚಾರ್ಯ ಸ್ವಾಮೀಜಿ, ಕೊಡಗು ಘಟಕದ ಪ್ರಧಾನ ಕಾರ್ಯದರ್ಶಿ ಶಾಂಭ ಶಿವಮೂರ್ತಿ, ಮಡಿಕೇರಿ ತಾಲೂಕು ಅಧ್ಯಕ್ಷ ರುದ್ರಪ್ರಸನ್ನ, ಸೋಮವಾರಪೇಟೆ ತಾಲೂಕು ಅಧ್ಯಕ್ಷ ಮದುಸೂಧನ್, ವಿರಾಜಪೇಟೆ ತಾಲೂಕು ಉಪಾಧ್ಯಕ್ಷ ಸುರೇಶ್ ಸೇರಿದಂತೆ ಸಮುದಾಯದ ಪ್ರಮುಖರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಬೇಡಿಕೆ ಈಡೇರದಿದ್ದರೆ ಮೈಸೂರು ದಸರಾಗೆ ಬಹಿಷ್ಕಾರ

ಮಾವುತ, ಕಾವಾಡಿಗರ ಸಭೆ ತೀರ್ಮಾನ

ಕುಶಾಲನಗರ, ಆ.1– ಕೊಡಗಿನ ದುಬಾರೆ ಸಾಕಾನೆ ಶಿಬಿರದ ಮಾವುತರು ಹಾಗೂ ಕಾವಾಡಿಗರು ತಮ್ಮ ವಿವಿಧ ಬೇಡಿಕೆಗಳನ್ನು ಈಡೇರಿಸಲು ಒತ್ತಾಯಿಸಿ ಈ ಬಾರಿಯ ಮೈಸೂರು ದಸರಾ ಮಹೋತ್ಸವಕ್ಕೆ ಹೋಗದೆ ಬಹಿಷ್ಕರಿಸಲು ಭಾನುವಾರ ನಡೆದ ಆನೆ ಮಾವುತ ಮತ್ತು ಕಾವಾಡಿಗರ ಸಂಘದ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ದುಬಾರೆ ಪ್ರವಾಸಿ ಮಂದಿರದಲ್ಲಿ ನಡೆದ ಸಭೆಯಲ್ಲಿ ವೇತನದಲ್ಲಿ ತಾರತಮ್ಯ ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಹಲವು ವರ್ಷಗಳಿಂದ ಮನವಿ ಮಾಡಿದರೂ ಸಹ ಇದುವರೆಗೂ ಯಾವುದೇ ಬೇಡಿಕೆ ಈಡೇರಿಲ್ಲ. ಈ ಹಿನ್ನೆಲೆಯಲ್ಲಿ ನಾವು ಬಹಿಷ್ಕರಿಸಲು ನಿರ್ಧಾರ ಮಾಡಿದ್ದೇವೆ ಎಂದು ಕುಶಾಲನಗರ ವಲಯ ದುಬಾರೆ ಸಂಘದ ಅಧ್ಯಕ್ಷ ಅಣ್ಣಯ್ಯ ದೊರೆಯಪ್ಪ ಹೇಳಿದರು.

ಶಿಬಿರಗಳಲ್ಲಿ ಆನೆಗಳ ನಿರ್ವಹಣೆ ಜೊತೆಗೆ ಹುಲಿ ಹಿಡಿಯುವುದು, ಕಾಡಾನೆ ಹಿಡಿಯುವುದು ಸೇರಿದಂತೆ ದಸರಾಗೆ ಆನೆಗಳನ್ನು ಕಳುಹಿಸುವ ಕಾರ್ಯವನ್ನು ನಾವು ಬಹಿಷ್ಕರಿಸಿ ಪ್ರತಿಭಟನೆಯನ್ನು ನಡೆಸಲು ಒಮ್ಮತದ ತೀರ್ಮಾನ ಕೈಗೊಂಡಿದ್ದಾರೆ. ನಮ್ಮ ಬೇಡಿಕೆಗಳ ಈಡೇರಿಕೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಲಿಖಿತ ರೂಪದಲ್ಲಿ ಭರವಸೆ ನೀಡಿದಾಗ ಮಾತ್ರ ನಾವು



ಹೆಚ್ಚುವರಿ ಕೆಲಸ ನಿರ್ವಹಿಸಲು ಸಾಧ್ಯ ಎಂದು ಸಂಘದ ಪ್ರಮುಖ ಮೇಘರಾಜ್ ಅವರು ತಿಳಿಸಿದ್ದಾರೆ.

ಸಭೆಯಲ್ಲಿ ಸಂಘದ ರಾಜ್ಯ ಅಧ್ಯಕ್ಷ ಗೌಸ್ ಖಾನ್, ಉಪಾಧ್ಯಕ್ಷ ಜೆ.ಕೆ.ಡೋಬಿ, ಪ್ರಧಾನ ಕಾರ್ಯದರ್ಶಿ ಪರ್ವೀನ್ ಪಾಷಾ, ಮತ್ತಿಗೋಡಿನ ಜೆ.ಕೆ.ವಸಂತ, ರಾಂಪುರದ ನಾಗೇಶ್, ಜೈವಾಲ್ ಹಾಗೂ ಮತ್ತಿಗೋಡು, ದುಬಾರೆ, ಸಕ್ರೆ ಬೈಲು, ಕೆ. ಗುಡಿ, ರಾಂಪುರ ಶಿಬಿರಗಳ ಮಾವುತರು, ಕವಾಡಿಗರು ಪಾಲ್ಗೊಂಡಿದ್ದರು.

ಸರ್ಕಾರದಿಂದ ಕೋಮು ದ್ವೇಷದ ರಾಜಕಾರಣ

ಕೆಪಿಸಿಸಿ ವಕ್ತಾರರಾದ ಸರಿತಾ ಪೂಣಚ್ಚ ಆರೋಪ



ಮಡಿಕೇರಿ,ಆ.1– ಭ್ರಷ್ಟಾಚಾರದ ಆರೋಪವನ್ನು ಮರೆಮಾಚಲು ಮತ್ತು ಬೆಲೆ ಏರಿಕೆಯಿಂದ ತತ್ತರಿಸಿ ಹೋಗಿರುವ ಜನಸಾಮಾನ್ಯರ ಹಾದಿ ತಪ್ಪಿಸಲು ರಾಜ್ಯ ಬಿಜೆಪಿ ಸರ್ಕಾರ ಕೋಮು ದ್ವೇಷದ ರಾಜಕಾರಣ ಮಾಡುತ್ತಿದೆ ಎಂದು ಜಿಲ್ಲಾ ಕಾಂಗ್ರೆಸ್ ವಕ್ತಾರೆ ಕೇಚಮಾಡ ಸರಿತಾ ಪೂಣಚ್ಚ ಆರೋಪಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ಜಾತಿ ರಾಜಕಾರಣದ ಹಿಡನ್ ಅಜೆಂಡಾದ ಮೂಲಕ ಆಡಳಿತ ನಡೆಸುತ್ತಿರುವ ಬಿಜೆಪಿ ಸರ್ಕಾರದ ವಿರುದ್ಧ ಆಕ್ರೋಶಗೊಂಡಿರುವ ಜನರು ಮುಂಬರುವ ಚುನಾವಣೆಯಲ್ಲಿ ಸರಿಯಾದ ಪಾಠವನ್ನೇ ಕಲಿಸಲಿದ್ದಾರೆ ಎಂದು ಭವಿಷ್ಯ ನುಡಿದಿದ್ದಾರೆ. ಅಭಿವೃದ್ಧಿ ಬಗ್ಗೆ ಚಿಂತಿಸದೆ ಕೋಮು ಭಾವನೆ ಕೆರಳಿಸಲಾಗುತ್ತಿದೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮೂವರು ಅಮಾಯಕ ಯುವಕರು ಬಲಿಯಾಗಿದ್ದಾರೆ. ಪರಿಹಾರ ವಿತರಣೆಯಲ್ಲೂ ಸರ್ಕಾರ ತಾರತಮ್ಯ ನೀತಿ ಅನುಸರಿಸುತ್ತಿದೆ. ರಾಜ್ಯದ ಎಲ್ಲಾ ಪ್ರಜೆಗಳನ್ನು ಪ್ರತಿನಿಧಿಸಬೇಕಾದ ಮುಖ್ಯಮಂತ್ರಿಗಳು ಒಂದು ಪಕ್ಷ ಅಥವಾ ವರ್ಗಕ್ಕೆ ಸೀಮಿತವಾದಂತೆ ವರ್ತಿಸುತ್ತಿದ್ದಾರೆ. ಸಾಮರಸ್ಯದ ಜೀವನಕ್ಕೆ ಆದ್ಯತೆ ನೀಡಿ ಕಾನೂನು ಸುವ್ಯವಸ್ಥೆ ಕಾಪಾಡಬೇಕಾದ ಬಿಜೆಪಿ ಜನಪ್ರತಿನಿಧಿಗಳು ಮತ್ತಷ್ಟು ಪ್ರಚೋದನಾಕಾರಿ ಹೇಳಿಕೆ ನೀಡಿ ಅಶಾಂತಿ ಸೃಷ್ಟಿಗೆ ಕಾರಣಕರ್ತರಾಗುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಕೊಡಗು ಜಿಲ್ಲೆ ಮಹಾಮಳೆ, ಪ್ರಾಕೃತಿಕ ವಿಕೋಪ ಮತ್ತು ವನ್ಯ ಜೀವಿಗಳ ದಾಳಿಯಿಂದ ನಲುಗಿ ಹೋಗಿದ್ದರೂ ಈ ಬಗ್ಗೆ ಚಿಂತಿಸದೆ ಮುಂಬರುವ ಚುನಾವಣೆಯಲ್ಲಿ ಜಾತಿ ರಾಜಕಾರಣದಲ್ಲೇ ಕಾಲ ಕಳೆಯುತ್ತಿದ್ದಾರೆ ಎಂದು ಆರೋಪಿಸಿದ್ದಾರೆ.

ಬಿ.ಹೆಚ್.ಗುಂಡೂರಾವ್ ನಿಧನ

ಕುಶಾಲನಗರ, ಆ.1– ಕಾಂಗ್ರೆಸ್ ಮುಖಂಡ ಬಿ.ಹೆಚ್.ಗುಂಡೂರಾವ್(82) ಸೋಮವಾರ ನಿಧನರಾದರು. ಮೃತರು ಮೂವರು ಪುತ್ರರು, ಓರ್ವ ಪುತ್ರಿ ವೀಣಾ ಸೇರಿದಂತೆ ಅಪಾರ ಬಂಧು ವರ್ಗವನ್ನು ಅಗಲಿದ್ದಾರೆ.

ಮೃತರ ಅಂತ್ಯಸಂಸ್ಕಾರವನ್ನು ಮಂಗಳವಾರ ಹಿಂದೂ ರುದ್ರಭೂಮಿಯಲ್ಲಿ ನೆರವೇರಿಸಲಾಗುತ್ತದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಚುನಾವಣಾ ಗುರುತಿನ ಚೀಟಿಗೆ ಆಧಾರ್ ಲಿಂಕ್ ಮಾಡುವ ಕಾರ್ಯಕ್ಕೆ ಜಿಲ್ಲಾಧಿಕಾರಿ ಚಾಲನೆ



ಮಡಿಕೇರಿ, ಆ.1– ಚುನಾವಣಾ ಗುರುತಿನ ಚೀಟಿಗೆ ಆಧಾರ್ ಲಿಂಕ್ ಮಾಡುವ ಕಾರ್ಯಕ್ಕೆ ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಹಾಗೂ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಅವರು ಸೋಮವಾರ ಚಾಲನೆ ನೀಡಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ 'ಆಧಾರ್ ಅನ್ನು ವೋಟರ್ ಐಡಿಯೊಂದಿಗೆ ಲಿಂಕ್ ಮಾಡುವ' ಭಿತ್ತಿಪತ್ರ ಬಿಡುಗಡೆ ಮಾತನಾಡಿದ ಅವರು, ಪ್ರಜಾ ಪ್ರತಿನಿಧಿ ಕಾಯಿದೆ, 1950ರ ಸೆಕ್ಷನ್ 14ಕ್ಕೆ ತಿದ್ದುಪಡಿ ಮಾಡಲಾಗಿದ್ದು, 1 ಜನವರಿ ಅರ್ಹತಾ ದಿನಾಂಕವನ್ನು ಬಹು ಅರ್ಹತಾ ದಿನಾಂಕಗಳು ಅಂದರೆ 1 ಜನವರಿ, 1 ಏಪ್ರಿಲ್, 1 ಜುಲೈ ಮತ್ತು 1 ಅಕ್ಟೋಬರ್ ಎಂದು ತಿದ್ದುಪಡಿ ಅವಕಾಶ ಕಲ್ಪಿಸಲಾಗಿದೆ ಎಂದು ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ಹೇಳಿದರು.

ಪ್ರಜಾ ಪ್ರತಿನಿಧಿ ಕಾಯಿದೆ, 1950ರ ಸೆಕ್ಷನ್ 23ಕ್ಕೆ ತಿದ್ದುಪಡಿ ಮಾಡಲಾಗಿದ್ದು, ಮತದಾರರ ಪಟ್ಟಿಯಲ್ಲಿ ಯಾರ ಹೆಸರನ್ನು ನೋಂದಣಿ ಮಾಡಲಾಗಿದೆಯೋ ಆ ವ್ಯಕ್ತಿಯು ತನ್ನ ಆಧಾರ್ ಸಂಖ್ಯೆಯನ್ನು ಮತದಾರರ ನೋಂದಣಾಧಿಕಾರಿಗೆ ನಮೂನೆ 6ಬಿ ಯಲ್ಲಿ ಸಲ್ಲಿಸುವಂತೆ ತಿಳಿಸಿದ್ದಾರೆ.

ಆಧಾರ್ ಜೋಡಣೆ ಕಾರ್ಯವು 1ನೇ ಆಗಸ್ಟ್ 2022 ರಿಂದ ಜಾರಿಗೆ ಬಂದಿದ್ದು, ಆನ್‌ಲೈನ್ ಮೂಲಕ ಮತದಾರರು https://www.nvsp.in, https://voterportal.eci.gov.in ವೆಬ್‌ಸೈಟ್‌ನಲ್ಲಿ ಆನ್‌ಲೈನ್ ಮೂಲಕ ಮತ್ತು VHA ಮೊಬೈಲ್ ಆ್ಯಪ್ ಮೂಲಕ ನಮೂನೆ 6ಬಿ ಅನ್ನು ಭರ್ತಿ ಮಾಡಿ ಆಧಾರ್ ಅನ್ನು ದೃಢೀಕರಿಸಬಹುದಾಗಿದೆ ಎಂದರು.

ಬೂತ್ ಮಟ್ಟದ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಮತದಾರರಿಂದ ನಮೂನೆ 6 ಬಿ ಪ್ರತಿಯಲ್ಲಿ ಆಧಾರ್ ಸಂಖ್ಯೆಯನ್ನು ಸಂಗ್ರಹಿಸುವರು ಎಂದು ಜಿಲ್ಲಾಧಿಕಾರಿ ತಿಳಿಸಿದರು. ಆಧಾರ್ ಸಂಖ್ಯೆಯನ್ನು ಹೊಂದಿರದ ಮತದಾರರು ನಮೂನೆ–6 ಬಿ ಯೊಂದಿಗೆ ನರೇಗಾ ಜಾಬ್ ಕಾರ್ಡ್, ಬ್ಯಾಂಕ್/ ಅಂಚೆ ಕಚೇರಿಯಲ್ಲಿ ನೀಡಿದ ಭಾವಚಿತ್ರವಿರುವ ಪಾಸ್ ಬುಕ್, ಕಾರ್ಮಿಕ ಸಚಿವಾಲಯದ ಯೋಜನೆಯಡಿ ನೀಡಲಾದ ಆರೋಗ್ಯ ವಿಮಾ ಸ್ಮಾರ್ಟ್ ಕಾರ್ಡ್, ಚಾಲನಾ ಪರವಾನಗಿ, ಪ್ಯಾನ್ ಕಾರ್ಡ್, ಎನ್‌ಪಿಆರ್ ಅಡಿಯಲ್ಲಿ ಆರ್‌ಜಿಐ ನೀಡಿದ ಸ್ಮಾರ್ಟ್ ಕಾರ್ಡ್, ಭಾರತೀಯ ಪಾಸ್‌ಪೋರ್ಟ್, ಭಾವಚಿತ್ರವಿರುವ ಪಿಂಚಣಿ ದಾಖಲೆ, ಕೇಂದ್ರ/ ರಾಜ್ಯ ಸರ್ಕಾರ/ ಪಿ.ಎಸ್.ಯು/ ಪಬ್ಲಿಕ್ ಲಿಮಿಟೆಡ್ ಕಂಪನಿಗಳಿಂದ ಉದ್ಯೋಗಿಗಳಿಗೆ ನೀಡಿರುವ ಭಾವಚಿತ್ರ ವಿರುವ ಸೇವಾ ಗುರುತಿನ ಚೀಟಿ, ಸಂಸದರು/ ಶಾಸಕರು/ ಎಂಎಲ್‌ಸಿಗಳಿಗೆ ನೀಡಿದ ಅಧಿಕೃತ ಗುರುತಿನ ಚೀಟಿ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಇಲಾಖೆ, ಭಾರತ ಸರಕಾರದಿಂದ ನೀಡಲಾದ ವಿಶಿಷ್ಟ ಗುರುತಿನ ಚೀಟಿ, ಯಾವುದಾದರೂ ಒಂದು ಪರ್ಯಾಯ ದಾಖಲೆಗಳನ್ನು ಸಲ್ಲಿಸಬಹುದು ಎಂದರು.

ಮತದಾರರ ನೋಂದಣಿ ನಿಯಮಗಳು 1960ರ ನಿಯಮ 13 ಮತ್ತು 26ಕ್ಕೆ ತಿದ್ದುಪಡಿ ಮಾಡಲಾಗಿದ್ದು, ಹೊಸ ಮತದಾರರ ನೋಂದಣಿಗಾಗಿ ನಮೂನೆ 6, ಹಾಲಿ ಇರುವ ಮತದಾರರ ಪಟ್ಟಿಯಲ್ಲಿ ಹೆಸರು ಸೇರಿಸಲು/ ಕೈಬಿಡಲು ಆಕ್ಷೇಪಣೆಗಾಗಿ ನಮೂನೆ 7 ಮತ್ತು ನಿವಾಸ ಸ್ಥಳಾಂತರ, ಹಾಲಿ ಇರುವ ಮತದಾರರ ಪಟ್ಟಿಯಲ್ಲಿ ನಮೂದುಗಳ ತಿದ್ದುಪಡಿ, ಬದಲಿ ಎಪಿಕ್ ಗಾಗಿ ಮತ್ತು ವಿಕಲಚೇತನ ಹೊಂದಿರುವ ವ್ಯಕ್ತಿಯ ಗುರುತು ಮಾಡಲು ನಮೂನೆ 8 ಅನ್ನು ಹೊಸದಾಗಿ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಪರಿಷ್ಕೃತ ನಮೂನೆಗಳು 1 ಆಗಸ್ಟ್ 2022 ರಿಂದ ಜಾರಿಗೆ ಬರುತ್ತಿದ್ದು ಆನ್‌ಲೈನ್‌ನಲ್ಲಿಯೂ ಸಹ ಆ.1 ರಿಂದ ಜಾರಿಗೆ ಬರುತ್ತದೆ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು. ಉಪ ವಿಭಾಗಾಧಿಕಾರಿ ಯತೀಶ್ ಉಳ್ಳಾಲ್, ತಹಸೀಲ್ದಾರ್ ಪಿ.ಎಸ್.ಮಹೇಶ್, ಶಿರಸ್ತೇದಾರರು ಇತರರು ಇದ್ದರು.

ಪಡಿತರ ಚೀಟಿದಾರರು ಇ–ಕೆವೈಸಿ ನೋಂದಾಯಿಸಿ

ಮಡಿಕೇರಿ, ಆ.1–ಪಡಿತರ ಚೀಟಿ ಕುಟುಂಬದ ಸದಸ್ಯರುಗಳ ಇ–ಕೆವೈಸಿ (ಜೀವ ಮಾಪಕ ಮರು ದೃಢೀಕರಣ) ಕಾರ್ಯ ಮಾಡಲು ಸರ್ಕಾರ ಕೊನೆ ಅವಕಾಶ ಕಲ್ಪಿಸಿದೆ. ಪ್ರಸ್ತುತ ಸರ್ಕಾರದ ಆದೇಶದಂತೆ ಇ–ಕೆವೈಸಿ ಕಾರ್ಯವನ್ನು ಮತ್ತೆ ಪ್ರಾರಂಭಿಸಲಾಗಿದ್ದು, ಈ ಹಿಂದೆ ಇ–ಕೈವೈಸಿ ಮಾಡಿಸಿರದ ಅಂತ್ಯೋದಯ ಅನ್ನಯೋಜನೆ, (ಎಎವೈ) ಆದ್ಯತಾ ಪಡಿತರ ಚೀಟಿ) ಬಿಪಿಎಲ್ ಮತ್ತು ಆದ್ಯತೇತರ ಪಡಿತರ ಚೀಟಿಗಳಲ್ಲಿ (ಎಪಿಎಲ್) ಸೇರ್ಪಡೆಗೊಂಡಿರುವ ಸದಸ್ಯರುಗಳು ಕೂಡಲೆ ತಮ್ಮ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗೆ ತೆರಳಿ ತಮ್ಮ ಬೆರಳಚ್ಚನ್ನು ನೀಡಿ ಇ–ಕೆವೈಸಿಯನ್ನು ಮಾಡಿಸಲು ಕೋರಿದೆ.

ಎಎವೈ, ಆದ್ಯತಾ, ಆದ್ಯತೇತರ ಪಡಿತರ ಚೀಟಿಗಳಲ್ಲಿ ಸೇರ್ಪಡೆಗೊಂಡಿರುವ ಎಲ್ಲಾ ಸದಸ್ಯರು ಈ ರೀತಿ ಇ–ಕೆವೈಸಿಯನ್ನು ಕಡ್ಡಾಯವಾಗಿ ಮಾಡಿಸುವುದು. ಉದ್ಯೋಗ/ ವಿದ್ಯಾಭ್ಯಾಸದ ಸಲುವಾಗಿ ಹಾಗೂ ಇತರೆ ಕಾರಣಗಳಿಂದ ಜಿಲ್ಲೆಯಿಂದ ಹೊರಗೆ ನೆಲೆಸಿರುವ ಪಡಿತರ ಚೀಟಿ ಸದಸ್ಯರು ಅವರು ನೆಲೆಸಿರುವ ವ್ಯಾಪ್ತಿಯಲ್ಲಿರುವ ನ್ಯಾಯಬೆಲೆ ಅಂಗಡಿಗೆ ತೆರಳಿ ಇ–ಕೆವೈಸಿ ಮಾಡಿಸುವುದು.

6 ವರ್ಷದೊಳಗಿನ ಮಕ್ಕಳ ಆಧಾರ್ ಕಾರ್ಡ್ ಮಾಡಿಸಿದ್ದಲ್ಲಿ ಅಂತಹ ಮಕ್ಕಳ ಬೆರಳಚ್ಚು ಅಪ್‌ಡೇಟ್ ಆಗಿರುವುದಿಲ್ಲ. ಇದರಿಂದಾಗಿ ಇ–ಕೆವೈಸಿ ಮಾಡಿಸಲು ಸಾಧ್ಯವಾಗುವುದಿಲ್ಲ. ಆದ್ದರಿಂದ ಬೆರಳಚ್ಚು ಅಪ್‌ಡೇಟ್ ಆಗದಂತಹ ಮಕ್ಕಳನ್ನು ಆಧಾರ್ ಸೆಂಟರ್‌ನಲ್ಲಿ ಬೆರಳಚ್ಚು ಅಪ್‌ಡೇಟ್ ಮಾಡಬೇಕು. ನಂತರವೇ ಪಡಿತರ ಚೀಟಿಯ ಇ–ಕೆವೈಸಿ ಮಾಡಿಸುವುದು.

ಈ ರೀತಿ ಬೆರಳಚ್ಚು ನೀಡಿ ಇ–ಕೆವೈಸಿ ಮಾಡಿಸಲು ಯಾವುದೇ ಶುಲ್ಕ ಇರುವುದಿಲ್ಲ. ಪಡಿತರ ಚೀಟಿದಾರರು ಯಾವುದೇ ಹಣ ನೀಡುವಂತಿಲ್ಲ. ಹಣ ತೆಗೆದುಕೊಂಡಲ್ಲಿ ತಾಲೂಕು ಆಹಾರ ಕಚೇರಿ/ ಉಪ ನಿರ್ದೇಶಕರ ಕಚೇರಿಗೆ ದೂರು ನೀಡಬಹುದು. ಆದ್ದರಿಂದ ಜಿಲ್ಲೆಯ ಎಲ್ಲಾ ವರ್ಗದ ಪಡಿತರ ಚೀಟಿಗಳ ಕುಟುಂಬದ ಸದಸ್ಯರುಗಳು ಕಡ್ಡಾಯವಾಗಿ ತಮ್ಮ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗೆ ತೆರಳಿ ಬೆರಳಚ್ಚನ್ನು ನೀಡಿ ಇ–ಕೆವೈಸಿ ಕಾರ್ಯವನ್ನು ಮಾಡಲು ಕೋರಿದೆ.

ಅಂತರರಾಜ್ಯ ಪಡಿತರ ಚೀಟಿದಾರರಿಗೆ ಜಿಲ್ಲೆಯ ನ್ಯಾಯಬೆಲೆ ಅಂಗಡಿಗಳಿಂದ ಪಡಿತರ ವಿತರಿಸುವ ಕುರಿತು. ಕೇಂದ್ರ ಸರ್ಕಾರ 'ಒಂದು ರಾಷ್ಟ್ರ ಒಂದು ಪಡಿತರ ಚೀಟಿ' ಯೋಜನೆಯಡಿಯಲ್ಲಿ ಹೊರ ರಾಜ್ಯದ ಜನರು ಜಿಲ್ಲೆಯಲ್ಲಿ ವಾಸಿಸುತ್ತಿರುವ ನ್ಯಾಯಬೆಲೆ ಅಂಗಡಿಗಳ ಮೂಲಕ 'ಪೋರ್ಟಬಿಲಿಟಿ' ಅಡಿ ಪಡಿತರ ವಿತರಣೆ ಮಾಡಲು ಅಗತ್ಯವಿರುವ ದತ್ತಾಂಶವನ್ನು ಒದಗಿಸಲಾಗಿದೆ. ಆದ್ದರಿಂದ ಜಿಲ್ಲೆಯಲ್ಲಿ ವಾಸಿಸುತ್ತಿರುವ ಹೊರ ರಾಜ್ಯದ ಆದ್ಯತಾ ಪಡಿತರ ಚೀಟಿದಾರರು ಅವರು ವಾಸಿಸುತ್ತಿರುವ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗಳಲ್ಲಿ ತಮ್ಮ ಪಡಿತರ ಚೀಟಿ ಅಥವಾ ಆಧಾರ್ ಕಾರ್ಡ್‌ನ್ನು ತೋರಿಸಿ ಬೆರಳಚ್ಚನ್ನು ನೀಡಿ ಆಹಾರ ಧಾನ್ಯವನ್ನು ಪಡೆದುಕೊಳ್ಳುವಂತೆ ಜಿಲ್ಲಾಧಿಕಾರಿ ಡಾ.ಬಿ.ಸಿ.ಸತೀಶ ತಿಳಿಸಿದ್ದಾರೆ.

ಮತದಾರರ ಗುರುತಿಗೆ ಆಧಾರ್ ಜೋಡಣೆ ಕಾರ್ಯಕ್ರಮಕ್ಕೆ ಡಿಸಿ ಚಾಲನೆ



ಚಾಮರಾಜನಗರ, ಆ.1– ಭಾರತ ಚುನಾವಣಾ ಆಯೋಗದ ಮಹತ್ತರ ಕಾರ್ಯಕ್ರಮವಾದ ಮತದಾರರ ಪಟ್ಟಿಗೆ ಆಧಾರ್ ಸಂಖ್ಯೆಯ ಜೋಡಣೆ ಪ್ರಕ್ರಿಯೆಗೆ ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಇಂದು ಚಾಲನೆ ನೀಡಿದರು.

ಮತದಾರರ ಪಟ್ಟಿಯಲ್ಲಿನ ನಮೂದನ್ನು ಅಧಿಕೃತ, ದೃಢೀಕರಿಸುವ ಸಲುವಾಗಿ ಜಿಲ್ಲಾ ಕಚೇರಿ ಸಭಾಂಗಣದಲ್ಲಿಂದು ಆಯೋಸಿದ್ದ ಸರಳ ಕಾರ್ಯಕ್ರಮ ದೀಪ ಬೆಳಗಿಸುವ ಮೂಲಕ ಜಿಲ್ಲಾಧಿಕಾರಿ ಉದ್ಘಾಟಿಸಿ, ಮಾತನಾಡಿದರು.

ಇಂದಿನಿಂದ ಮತದಾರರ ಪಟ್ಟಿಗೆ ಆಧಾರ್ ಸಂಖ್ಯೆ ಜೋಡಣೆ ಪ್ರಕ್ರಿಯೆ ಆರಂಭವಾಗಲಿದೆ. ಜಿಲ್ಲೆಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿ ಮತದಾರರ ಪಟ್ಟಿಯಲ್ಲಿ ನೋಂದಾಯಿತರಾಗಿರುವ ಎಲ್ಲಾ ಮತದಾರರಿಂದ ನಮೂನೆ 6'ಬಿ' ರಲ್ಲಿ ಆಧಾರ್ ಸಂಖ್ಯೆಯನ್ನು ಪಡೆದು ಮತದಾರರ ಪಟ್ಟಿಯಲ್ಲಿ ಆಧಾರ್ ಡಾಟಾವನ್ನು ಲಿಂಕ್ ಮಾಡಲಾಗುತ್ತದೆ ಎಂದರು.

ಮತದಾರರು ಸ್ವತಃ ತಾವೇ, ಆನ್‌ಲೈನ್ ಮೂಲಕ ತಮ್ಮ ಮತದಾರರ ಗುರುತಿನ ಚೀಟಿಯೊಂದಿಗೆ ಆಧಾರ್ ನಂಬರ್ ಅನ್ನು ಎನ್‌ವಿಎಸ್‌ಪಿ(NVSP) ಪೋರ್ಟಲ್ ಅಥವಾ ವೋಟರ್ ಹೆಲ್ಪ್‌ಲೈನ್ ಆ್ಯಪ್ ಮೂಲಕ ಲಿಂಕ್ ಮಾಡಿಕೊಂಡು ಸಹ ದೃಢೀಕರಿಸಿಕೊಳ್ಳಬಹುದಾಗಿದೆ. ಆಧಾರ್ ಸಂಖ್ಯೆ ಹೊಂದಿಲ್ಲದಿದ್ದರೆ ನರೇಗಾ ಉದ್ಯೋಗ ಕಾರ್ಡ್, ಬ್ಯಾಂಕ್ ಅಂಚೆ ಕಚೇರಿಯಿಂದ ನೀಡಲಾದ ಭಾವಚಿತ್ರವಿರುವ ಪಾಸ್ ಪುಸ್ತಕ, ಡ್ರೈವಿಂಗ್ ಲೈಸೆನ್ಸ್, ಆರೋಗ್ಯ ವಿಮೆ, ಸ್ಮಾರ್ಟ್ ಕಾರ್ಡ್, ಪಾನ್‌ಕಾರ್ಡ್, ಪಾಸ್‌ಪೋರ್ಟ್, ಪಿಂಚಣಿ ದಾಖಲೆ, ಸರ್ಕಾರಿ, ಸಾರ್ವಜನಿಕ ವಲಯ, ಕಂಪನಿ ಉದ್ಯೋಗಿಗಳಿಗೆ ನೀಡಲಾದ ಗುರುತಿನ ಚೀಟಿಯಂತಹ ಇನ್ನಿತರ ನಿಗದಿತ ದಾಖಲೆಗಳನ್ನು ಸಲ್ಲಿಸಿ ಮತದಾರರ ಪಟ್ಟಿಯಲ್ಲಿ ಹೆಸರು ದೃಢೀಕರಿಸಿಕೊಳ್ಳಲು ಅವಕಾಶವಿದೆ ಎಂದು ಜಿಲ್ಲಾಧಿಕಾರಿ ಮಾಹಿತಿ ನೀಡಿದರು.

ಚುನಾವಣಾ ತಹಸೀಲ್ದಾರ್ ವಿನೋದ, ರಾಜಕೀಯ ಪಕ್ಷಗಳ ಪ್ರತಿನಿಧಿಗಳಾದ ಬ್ಯಾಡಮೂಡ್ಲು ಬಸವಣ್ಣ, ಎಂ.ಸ್ವಾಮಿ, ಮಹೇಶ್ ಇತರರು ಕಾರ್ಯಕ್ರಮದಲ್ಲಿದ್ದರು.

ಕೇಂದ್ರದ ಓಬಿಸಿ ಪಟ್ಟಿಗೆ ಸಮುದಾಯದ ಪಂಗಡಗಳನ್ನು ಸೇರಿಸಲು ಆಗ್ರಹಿಸಿ

ವೀರಶೈವ–ಲಿಂಗಾಯತರ ಭಾರೀ ಪ್ರತಿಭಟನೆ



ಚಾಮರಾಜನಗರ, ಆ.1–ವೀರಶೈವ–ಲಿಂಗಾಯತ ಸಮುದಾಯದ ಎಲ್ಲಾ ಪಂಗಡಗಳನ್ನು ಕೇಂದ್ರ ಹಿಂದುಳಿದ ವರ್ಗಗಳ (ಓಬಿಸಿ)ಪಟ್ಟಿಗೆ ಸೇರಿಸುವಂತೆ ಒತ್ತಾಯಿಸಿ ನಗರದಲ್ಲಿ ಸೋಮವಾರ ಭಾರೀ ಪ್ರತಿಭಟನೆ ನಡೆಸಲಾಯಿತು.

ನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದ ಮುಂಭಾಗ ಸಾವಿರಾರು ಜನರು ಜಮಾಯಿಸಿದರು. ನಂತರ ಅಲ್ಲಿಂದ ಮೆರವಣಿಗೆ ಆರಂಭಿಸಿದ ವೀರಶೈವ–ಲಿಂಗಾಯತರು. ಭುವನೇಶ್ವರಿ ವೃತ್ತದಲ್ಲಿ ಕೆಲ ಸಮಯ ನಿಂತರು. ಇದರಿಂದ ಸಗಮ ಸಂಚಾರ ವ್ಯತ್ಯಯವಾಯಿತು. ನಂತರ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಸ್ವಲ್ಪ ಹೊತ್ತು ಪ್ರತಿಭಟನೆ ನಡೆಸಿದರು. ಜಿಲ್ಲಾಧಿಕಾರಿ ಚಾರುಲತಾ ಸೋಮಲ್ ಅವರ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಿದರು.

ಕರ್ನಾಟಕ ರಾಜ್ಯದಲ್ಲಿ ಕಳೆದ 60 ವರ್ಷಗಳಿಂದ ವೀರಶೈವ–ಲಿಂಗಾಯತ ಸಮುದಾಯವು ರಾಜ್ಯದ ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿದ್ದರೂ ಈ ವರ್ಗವನ್ನು ಕೇಂದ್ರದ ಹಿಂದುಳಿದ ವರ್ಗಗಳ(ಓಬಿಸಿ) ಪಟ್ಟಿಯಿಂದ ನಮ್ಮ ಸಮುದಾಯವನ್ನು ಹೊರಗಿಡಲಾಗಿದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ವೀರಶೈವ–ಲಿಂಗಾಯತ ಸಮುದಾಯ ಪ್ರತಿಭಾವಂತರು ದಶಕಗಳಿಂದ ಹತ್ತು ಹಲವು, ಅವಕಾಶಗಳಿಂದ ವಂಚಿತರಾಗಿದ್ದಾರೆ. ಇದರಿಂದಾಗಿ ಕೇಂದ್ರ ಸರ್ಕಾರದ ಅಖಿಲ ಭಾರತ ಸೇವೆಗಳಾದ ಐಎಎಸ್, ಐಪಿಎಸ್, ಐಆರ್‌ಎಸ್, ಐಎಫ್‌ಎಸ್ ಹಾಗೂ ಕೇಂದ್ರದ ಸಾರ್ವಜನಿಕ ಉದ್ಯಮಗಳಾದ ರಾಷ್ಟ್ರೀಕೃತ ಬ್ಯಾಂಕ್‌ಗಳು, ಯುಪಿಎಸ್‌ಸಿ, ಎಸ್‌ಎಸ್‌ಸಿಆರ್ ಆರ್‌ಬಿ ಮುಖಾಂತರ ನಡೆಸುವ ಉದ್ಯೋಗವಕಾಶಗಳಲ್ಲಿ ವೀರಶೈವ–ಲಿಂಗಾಯತ ಸಮುದಾಯದವರು ಬೆರಳೆಣಿಕೆಯಷ್ಟು ಮಾತ್ರ ಇದ್ದಾರೆ. ಅದೇ ರೀತಿ ಕೇಂದ್ರ ಸ್ವಾಮ್ಯದ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳಾದ ಐಐಟಿ, ಐಐಎಂ, ಎನ್‌ಐಟಿ, ಎನ್‌ಇಇಟಿ, ಎಐಐಎಂಎಸ್, ಕೇಂದ್ರೀಯ ವಿಶ್ವವಿದ್ಯಾಲಯಗಳು, ಕೇಂದ್ರೀಯ ವಿದ್ಯಾಲಯ, ನವೋದಯ ಶಾಲೆಗಳು ಸೇರಿದಂತೆ ಹತ್ತು ಹಲವಾರು ಸಂಸ್ಥೆಗಳಿಗೆ ನಮ್ಮ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶ ಸಿಗುತ್ತಿರುವುದು ಅತ್ಯಂತ ವಿರಳ. ಆದ್ದರಿಂದ ಈ ಸವಲತ್ತುಗಳನ್ನು ಪಡೆಯುವ ಸಲುವಾಗಿ ವೀರಶೈವ–ಲಿಂಗಾಯತ ಸಮುದಾಯದ ಎಲ್ಲಾ ಪಂಗಡಗಳನ್ನು ಓಬಿಸಿ ಪಟ್ಟಿಯಲ್ಲಿ ಸೇರಿಸುವಂತೆ ಪ್ರತಿಭಟನಾಕಾರರು ಒಕ್ಕೊರಲಿನಿಂದ ಒತ್ತಾಯಿಸಿದರು.

ಪ್ರತಿಭಟನಾಕಾರರ ಮೇಲೆ ಜೇನು ದಾಳಿ

ಚಾಮರಾಜನಗರ: ಅಖಿಲ ಭಾರತ ಲಿಂಗಾಯತ ಮಹಾಸಭಾವು ಜಿಲ್ಲಾಡಳಿತ ಭವನದಲ್ಲಿ ಪ್ರತಿಭಟಿಸುವ ವೇಳೆ ಜೇನು ನೊಣಗಳು ದಾಳಿ ನಡೆಸಿದ ಘಟನೆ ನಡೆಯಿತು.

ಪ್ರತಿಭಟನಾ ಮೆರವಣಿಗೆ ಜಿಲ್ಲಾಡಳಿತ ಭವನ ತಲುಪಿ ಭವನದ ಮುಖ್ಯದ್ವಾರದಲ್ಲಿ ಪ್ರತಿಭಟನೆ ನಡೆಸಲಾಗುತ್ತಿತ್ತು. ಈ ವೇಳೆ ಭವನದ ಮುಂಭಾಗ ಕಟ್ಟಿದ್ದ ಜೇನುಗೂಡಿನಿಂದ ಜೇನುನೊಣಗಳು ಹೊರಬಂದು ಪ್ರತಿಭಟನಾಕಾರರ ಮೇಲೆರಗಿವೆ. ದಿಢೀರ್ ಜೇನು ದಾಳಿಯಿಂದ ಪ್ರತಿಭಟನಾಕಾರರು ಚೆಲ್ಲಾಪಿಲ್ಲಿಯಾಗಿ ಓಡಿದರು. ನ್ಯೂಸ್ ಪೇಪರ್, ಟವೆಲ್, ಹೆಲ್ಮೆಟ್ ಮೊರೆ ಹೋಗಿ ಅಪಾಯದಿಂದ ಪಾರಾದರು.

ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷೆ ಡಾ.ಗೀತಾ ಮಹದೇವಪ್ರಸಾದ್, ಮಹಾಸಭಾದ ಜಿಲ್ಲಾ ಅಧ್ಯಕ್ಷ ಮೂಡ್ಲುಪುರ ನಂದೀಶ್, ಪ್ರಧಾನ ಕಾರ್ಯದರ್ಶಿ ಡಿ.ನಾಗೇಂದ್ರ ಮಾಜಿ ಶಾಸಕರಾದ ಪ್ರೊ.ಕೆ.ಆರ್.ಮಲ್ಲಿಕಾರ್ಜುನಪ್ಪ, ಪರಿಮಳಾ ನಾಗಪ್ಪ, ತಾಲೂಕು ಅಧ್ಯಕ್ಷರಾದ ನಂಜಪ್ಪ, ನಟೇಶ್, ಬಸವಣ್ಣ ಮಹದೇವ ಪ್ರಸಾದ್, ಪುಟ್ಟಸುಬ್ಬಪ್ಪ, ಚಾಮುಲ್ ಅಧ್ಯಕ್ಷ ವೈ.ಸಿ.ನಾಗೇಂದ್ರ, ಮುಖಂಡರಾದ ಪಿ.ಮರಿಸ್ವಾಮಿ, ಸದಾಶಿವಮೂರ್ತಿ, ಕೊಡಸೋಗೆ ಶಿವಬಸವಪ್ಪ, ವೃಷಬೇಂದ್ರಪ್ಪ, ಬಿ.ಕೆ.ರವಿಕುಮಾರ್, ರತ್ನಮ್ಮ, ಪುರುಷೋತ್ತಮ್, ಕೆರೆಹಳ್ಳಿ ನವೀನ್, ಮಧು, ಎಂಆರ್‌ಎಫ್ ಮಹೇಶ್, ಎನ್.ಹೆಚ್.ಮಹದೇವಸ್ವಾಮಿ, ಕಬ್ಬಳ್ಳಿ ಮಹೇಶ್, ಗಿರೀಶ್, ಬಸವರಾಜು, ಪುಟ್ಟಣ್ಣ, ಸುಜೇಂದ್ರ, ಇಂದ್ರ, ಗಾಯತ್ರಿ, ರತ್ನಮ್ಮ, ಸುನಂದ, ಗಾಯತ್ರಿ, ರೇಣುಕಾ, ರೇಖಾ, ಜ್ಯೋತಿ ಸೇರಿದಂತೆ ಸಹಸ್ರಾರು ಜನರ ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಕೆಸರುಗದ್ದೆಯಾದ ಅಂಬೇಡ್ಕರ್ ಕ್ರೀಡಾಂಗಣ

ನಾಟಿ ಮಾಡಿ ಕ್ರೀಡಾರ್ಥಿಗಳಿಂದ ಆಕ್ರೋಶ



ಚಾಮರಾಜನಗರ,ಆ.1– ನಗರದಲ್ಲಿ ಭಾನುವಾರ ರಾತ್ರಿ ಸುರಿದ ನಿರಂತರ ಮಳೆಗೆ ಡಾ.ಬಿ.ಆರ್.ಅಂಬೇಡ್ಕರ್ ಕ್ರೀಡಾಂಗಣ ಕೆಸರುಗದ್ದೆಯಾಗಿದ್ದಲ್ಲದೆ, ಸಿಂಥೆಟಿಕ್ ಟ್ರ್ಯಾಕ್‌ಗೆ ಹೋಗುವ ದಾರಿ ಕೆಸರುಮಯವಾಯಿತು. ಇದರಿಂದ ಕೋಪಗೊಂಡ ಕ್ರೀಡಾಳುಗಳು ಸಿಂಥೆಟಿಕ್ ಟ್ರ್ಯಾಕ್ ಸಮೀಪ ನಾಟಿ ಮಾಡಿ ಆಕ್ರೋಶ ವ್ಯಕ್ತಪಡಿಸಿದರು.

ಕ್ರೀಡಾಂಗಣದಲ್ಲಿರುವ ಸಿಂಥಟಿಕ್ ಟ್ರ್ಯಾಕ್‌ನಲ್ಲಿ ಅಭ್ಯಾಸ ಮಾಡಲು ಕ್ರೀಡಾಳುಗಳು ಪ್ರತಿದಿನ ಆಗಮಿಸುತ್ತಾರೆ. ಅದರಂತೆ ಸೋಮವಾರ ಬೆಳಗ್ಗೆಯೂ ಸಹ ಆಗಮಿಸಿದ್ದರು. ಆದರೆ ಸಿಂಥೆಟಿಕ್ ಟ್ರ್ಯಾಕ್‌ಗೆ ತೆರಳುವ ರಸ್ತೆ ತುಂಬಾ ಹದಗೆಟ್ಟು ನೀರು ನಿಂತಿತ್ತು. ಇದರಿಂದ ಬೇಸರಗೊಂಡ ಕ್ರೀಡಾರ್ಥಿಗಳು ನಾಟಿ ಮಾಡುವ ಮೂಲಕ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳ ಕಾರ್ಯವೈಖರಿಗೆ ಅಸಮಾಧಾನ ವ್ಯಕ್ತಪಡಿಸಿದರು. ಕಳೆದ ಮೂರು–ನಾಲ್ಕು ವರ್ಷದಿಂದಲೂ ಸಿಂಥೆಟಿಕ್ ಟ್ರ್ಯಾಕ್ ಸಮೀಪ ರಸ್ತೆ ನಿರ್ಮಿಸಿ, ಕ್ರೀಡಾಂಗಣದಲ್ಲಿ ನೀರು ನಿಂತು ಕೆಸರಾಗುವುದನ್ನು ತಪ್ಪಿಸಿ ಎಂದು ಮನವಿ ಮಾಡಿದರೂ ಪ್ರಯೋಜನ ಆಗಿಲ್ಲ. ಕ್ರೀಡಾಂಗಣದಲ್ಲಿ ಕನಿಷ್ಠ ಸೌಲಭ್ಯ ಕಲ್ಪಿಸಲು ಕ್ರೀಡಾ ಇಲಾಖೆ ವಿಫಲವಾಗಿದೆ ಎಂದು ಆರೋಪಿಸಿದರಲ್ಲದೆ, ಶೀಘ್ರವೇ ಕ್ರೀಡಾಂಗಣದ ಅವ್ಯವಸ್ಥೆ ಸರಿಪಡಿಸಬೇಕು ಎಂದು ಕ್ರೀಡಾರ್ಥಿಗಳು ಹಾಗೂ ನಾಗರಿಕರು ಆಗ್ರಹಿಸಿದರು.

ಹೊಗೇನಕಲ್ ಜಲಪಾತದ ಅಭಿವೃದ್ಧಿಗೆ ಆಗ್ರಹಿಸಿ ಪ್ರತಿಭಟನೆ

ಕೊಳ್ಳೇಗಾಲ, ಆ.1–ಪ್ರವಾಸೋದ್ಯಮ ಅಭಿವೃದ್ಧಿ ನಿಟ್ಟಿನಲ್ಲಿ ಹನೂರು ತಾಲೂಕು ಹೊಗೇನಕಲ್ ಜಲಪಾತದ ಅಭಿವೃದ್ಧಿ ಹಾಗೂ ಮೇಕೆದಾಟು ಯೋಜನೆ ವಿಚಾರದಲ್ಲಿ ಕೇಂದ್ರ, ರಾಜ್ಯ ಸರ್ಕಾರಗಳು ನಿರ್ಲಕ್ಷ್ಯ ವಹಿಸಿವೆ ಎಂದು ಆರೋಪಿಸಿ ಜಲಪಾತದ ಮುಂಭಾಗ ಮೈಸೂರು ಕನ್ನಡ ವೇದಿಕೆಯಿಂದ ಪ್ರತಿಭಟಿಸಲಾಯಿತು.

ಈಗಾಗಲೇ ಕೇಂದ್ರ ಸರ್ಕಾರ ಕರ್ನಾಟಕದಲ್ಲಿ ಮೇಕೆದಾಟು ಯೋಜನೆ ಪ್ರಾರಂಭಕ್ಕೆ ಹಸಿರು ನಿಶಾನೆಯ ಭರವಸೆ ನೀಡಿದರೂ ಸಹ ಕಾರ್ಯರೂಪಕ್ಕೆ ಬರುತ್ತಿಲ್ಲ. ಪಕ್ಕದ ರಾಜ್ಯ ತಮಿಳುನಾಡಿನಲ್ಲಿ 20 ವರ್ಷಗಳ ಹಿಂದೆಯೇ ಅಲ್ಲಿನ ಅಂದಿನ ಮುಖ್ಯಮಂತ್ರಿ ಕರುಣಾನಿಧಿ ಕೇಂದ್ರದ ಅನುಮತಿ ಪಡೆಯದೇ ಅಣೆಕಟ್ಟು ನಿರ್ಮಿಸಿದ್ದಾರೆ. ಅಲ್ಲದೆ ಅನೇಕ ಅಭಿವೃದ್ಧಿ ಕಾರ್ಯಗಳು ನಡೆದಿವೆ. ಆದರೆ ನಮ್ಮ ರಾಜ್ಯ ಸರ್ಕಾರ ಕೇಂದ್ರದ ಕೈ ಗೊಂಬೆಯಂತೆ ವರ್ತಿಸುತ್ತಿದ್ದು, ನೀರಾವರಿ ಹಾಗೂ ಪ್ರವಾಸೋದ್ಯಮ ಅಭಿವೃದ್ಧಿಯಲ್ಲಿ ನಿರ್ಲಕ್ಷ್ಯ ತಾಳಿವೆ ಎಂದು ಪ್ರತಿಭಟನಾಕಾರರು ಅಸಮಾಧಾನ ವ್ಯಕ್ತಪಡಿಸಿದರು.



ಮೈಸೂರು ಕನ್ನಡ ವೇದಿಕೆ ಅಧ್ಯಕ್ಷ ಎಸ್.ಬಾಲಕೃಷ್ಣ, ಸಿದ್ದಪ್ಪ, ಕಾರ್ಯದರ್ಶಿಗಳಾದ ಗೋವಿಂದರಾಜು, ಹೆಚ್.ಸ್ವಾಮಿ, ಬೋಗಾದಿ ಸಿದ್ದೇಗೌಡ, ಪ್ರಕಾಶ್, ಕೃಷ್ಣೇಗೌಡ, ಲೋಕೇಶ್, ನಾರಾಯಣ್, ಶ್ರೀಧರ್ ಇನ್ನಿತರರಿದ್ದರು.

ಭಾರೀ ಮಳೆ; ಅಪಾರ ಬೆಳೆ ಹಾನಿ

ತುಂಬಿ ಹರಿಯುತ್ತಿರುವ ಕೆರೆ–ಕಟ್ಟೆಗಳು

ಹನೂರು, ಆ.1–ಬಿಆರ್‌ಟಿ ಅರಣ್ಯ ಪ್ರದೇಶ ವ್ಯಾಪ್ತಿಯಲ್ಲಿ ಭಾರೀ ಮಳೆಯಿಂದ ತಾಲೂಕಿನ ವಿವಿಧ ಗ್ರಾಮಗಳಲ್ಲಿ ರೈತರ ಬೆಳೆ ನಾಶವಾಗಿದ್ದು, ಪಿ.ಜಿ.ಪಾಳ್ಯ ಸಮೀಪದ ಮಸ್ಕತಿ ಹಳ್ಳ ತುಂಬಿ ಹರಿದ ಪರಿಣಾಮ ಗಂಟೆಗೂ ಹೆಚ್ಚುಕಾಲ ವಾಹನ ಸವಾರರು ಪರದಾಡುವಂತಹ ಸ್ಥಿತಿ ನಿರ್ಮಾಣವಾಯಿತು.

ಹನೂರು ತಾಲೂಕು ವ್ಯಾಪ್ತಿಯ ಬಿಆರ್‌ಟಿ ಅರಣ್ಯ ಪ್ರದೇಶ, ಬೈಲೂರು, ಹೊನ ಮೇಟಿ ಎಸ್ಟೇಟ್, ಕೆರೆದಿಂಬ ಗ್ರಾಮಗಳಲ್ಲಿ ಸೋಮವಾರ ಸಂಜೆ 5 ಗಂಟೆಗೆ ಆರಂಭವಾದ ಮಳೆ ಸತತ 2 ಗಂಟೆಗಳ ಸುರಿಯಿತು. ಪರಿಣಾಮ ಕೆರೆ–ಕಟ್ಟೆಗಳೆಲ್ಲ ತುಂಬಿ ಹರಿದವು. ಇದರಿಂದ ಅಂತಾರಾಜ್ಯ ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ಕೊರಮನಕತ್ತರಿ ಸೇತುವೆ, ಲೊಕ್ಕನಹಳ್ಳಿ ಸಮೀಪದ ಹಳ್ಳ, ಪಿ.ಜಿ.ಪಾಳ್ಯ ಸಮೀಪದ ಮಸ್ಕತಿ ಹಳ್ಳ ತುಂಬಿ ಸೇತುವೆಯ ಮೇಲೆ ಮಳೆಯ ನೀರು ಹರಿಯಿತು. ಪರಿಣಾಮ ವಾಹನ ಸವಾರರು ಹಾಗೂ ರೈತರು ತೊಂದರೆಗೊಳಗಾದರು.

ಮೇಲ್ಸೇತುವೆ ನಿರ್ಮಾಣಕ್ಕೆ ಒತ್ತಾಯ: ಲೊಕ್ಕನಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿ ಸುಮಾರು ಹತ್ತಕ್ಕೂ ಹೆಚ್ಚು ಮುಳುಗು ಸೇತುವೆಗಳಿವೆ. ಮಳೆಗಾಲದಲ್ಲಿ ಈ ಸೇತುವೆಗಳ ಮೇಲೆ ನೀರು ಯಥೇಚ್ಛವಾಗಿ ಹರಿದು ಬರುವುದರಿಂದ ವಾಹನ ಸವಾರರು ಪರದಾಡುವಂತಾಗುತ್ತದೆ. ಮೇಲ್ಸೇತುವೆ ನಿರ್ಮಾಣಕ್ಕೆ ಹತ್ತಾರು ಬಾರಿ ಶಾಸಕರಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿ ಸ್ಥಳೀಯ ಗ್ರಾಮಸ್ಥರು ಇನ್ನು ಮುಂದಾದರೂ ಸೂಕ್ತ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿದರು.



ಅಪಾರ ಪ್ರಮಾಣದ ಬೆಳೆ ನಾಶ: ಲೊಕ್ಕನಹಳ್ಳಿ ಹೋಬಳಿ ವ್ಯಾಪ್ತಿಯಲ್ಲಿರುವ ಮುಳುಗು ಸೇತುವೆಗಳಲ್ಲಿನ ಪೈಪ್‌ಗಳು ಕಿರಿದಾಗಿದ್ದು, ತ್ಯಾಜ್ಯ ತುಂಬಿಕೊಂಡಿರುವುದರಿಂದ ನೀರು ಸರಾಗವಾಗಿ ಹರಿಯದೆ ಅಕ್ಕಪಕ್ಕದ ಜಮೀನುಗಳಿಗೆ ನುಗ್ಗಿದೆ. ಇದರಿಂದ ಜೋಳ ಹಾಗೂ ಆಲೂಗೆಡ್ಡೆ ಬೆಳೆ ನಾಶವಾಗಿದೆ.

ಮಳೆಗಾಲ ಸಂದರ್ಭದಲ್ಲಿ ಹಳ್ಳಗಳಲ್ಲಿನ ತ್ಯಾಜ್ಯ ತೆರವು ಮಾಡುವಂತೆ ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ಲಿಖಿತ ಮನವಿ ನೀಡಿದ್ದರೂ ಅಧಿಕಾರಿಗಳ ಬೇಜವಾಬ್ದಾರಿತನದಿಂದ ರೈತರ ಫಸಲು ಹಾನಿಯಾಗಿ ಲಕ್ಷಾಂತರ ರೂ. ನಷ್ಟವಾಗಿದೆ. ಈ ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಸೂಕ್ತ ಪರಿಹಾರ ನೀಡುವಂತೆ ಪಿ.ಜಿ. ಪಾಳ್ಯ ಗ್ರಾಪಂ ಮಾಜಿ ಅಧ್ಯಕ್ಷ ಎನ್.ಕೃಷ್ಣಮೂರ್ತಿ ಆಗ್ರಹಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಬಾಸ್ : (ಆಫೀಸ್‌ಗೆ ತಡವಾಗಿ ಬಂದಾಗ) ಯಾಕೆ ಲೇಟು?
ಆತ : 44ನೇ ನಂಬರಿನ ಬಸ್ ಮಿಸ್ ಆಯ್ತು
ಬಾಸ್ : ಮತ್ತೆ ಹೇಗೆ ಬಂದೆ?
ಆತ : 22ನೇ ನಂಬರಿನ ಬಸ್ ಅನ್ನು ಎರಡು ಸಾರಿ ಹತ್ತಿ ಬಂದೆ?

ಮೈಸೂರು ಮಿತ್ರ
ಮಂಗಳವಾರ, 2 ಆಗಸ್ಟ್ 2022
ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ. ಗೋವಿಂದೇಗೌಡ M.A.

ಅಮೃತವಾಹಿನಿ

ದುಡಿಯಲು ಕಲಿಯಬೇಕು ಹಾಗೂ ಫಲಕ್ಕಾಗಿ ಕಾಯಬೇಕು –ಲಾಂಗ್ ಫೆಲೊ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಜೇನು ತುಪ್ಪ ಬೇಕೆಂದರೆ ಜೇನು ನೊಣಕ್ಕೆ ಹೆದರುವುದೇ

ನಿಮ್ಮ ಪತ್ರಗಳು

ಮೈಸೂರಿನ ಸಮಸ್ಯೆ ಕೇಳುವವರು ಯಾರು!

ಮಾನ್ಯರೆ,

ಮೈಸೂರು ನಗರದಲ್ಲಿ ಈ ವರ್ಷ ದಸರಾವನ್ನು ಅದ್ಧೂರಿಯಾಗಿ ಆಚರಿಸುವುದಾಗಿ ಸರ್ಕಾರ ತಿಳಿಸಿದೆ. ಈ ಎರಡು ವರ್ಷಗಳಲ್ಲಿ ದಸರಾ ಕಾರ್ಯಕ್ರಮ ನಿಂತು ದಸರಾ ವೀಕ್ಷಿಸಲು ಬರುತ್ತಿದ್ದ ಪ್ರವಾಸಿಗರಿಗೆ ತುಂಬಾ ನಿರಾಸೆ ಆಗಿತ್ತು.

ಆದರೆ ಇನ್ನು 2 ತಿಂಗಳು ಮಾತ್ರ ನವರಾತ್ರಿ ಹಾಗೂ ದಸರಾ ಉತ್ಸವಕ್ಕೆ ಉಳಿದಿವೆ. ಸರಕಾರ ಕೋಟಿ ಕೋಟಿ ಹಣವನ್ನು ಇದಕ್ಕೆ ವಿನಿಯೋಗಿಸುತ್ತದೆ. ಆದರೆ ಇಡೀ ಮೈಸೂರಿನ ಎಲ್ಲಾ ರಸ್ತೆಗಳು ಗುಂಡಿ ಬಿದ್ದು ಸಂಚಾರಕ್ಕೆ ತೊಂದರೆಯಾಗುತ್ತಿದೆ. ಮೈಸೂರಿನ ಪ್ರತಿಯೊಬ್ಬ ಪ್ರಜೆಯೂ ಸರಕಾರಕ್ಕೆ ತೆರಿಗೆಯಾಗಿ ಹಣ ಪಾವತಿಸುತ್ತಿದ್ದಾರೆ. ಆದರೆ ಸರ್ಕಾರ ಇದರ ಶೇ.25ರಷ್ಟು ಹಣವನ್ನೂ ಸಹ ರಸ್ತೆ ರಿಪೇರಿಗೆ ಖರ್ಚು ಮಾಡುತ್ತಿಲ್ಲ. ಅನವಶ್ಯಕವಾಗಿ ಹಣವನ್ನು ಖರ್ಚು ಮಾಡುತ್ತಿದೆ. ಈ ಒಂದು ವಾರದಲ್ಲಿ ಹೊಸ ಯುಜಿಡಿ ಪೈಪುಗಳನ್ನು ಶಿವರಾಂ ಪೇಟೆ, ದೇವರಾಜ ಅರಸು ರಸ್ತೆ, ಸಂತೇಪೇಟೆಯಲ್ಲಿ ಕಾಮಗಾರಿ ಆರಂಭಿಸಿದೆ. ಇದರಿಂದಾಗಿ ಶಿವರಾಂಪೇಟೆ, ದೇವರಾಜ ಅರಸು ರಸ್ತೆ ಸಂಚಾರಕ್ಕೆ ಅಡಚಣೆಯಾಗಿದೆ. ಪರ ಊರಿನಿಂದ ಬಂದ ವಾಹನಗಳಿಗೆ ದಾರಿ ಕಾಣದೆ ಅವಘಡಗಳು ಹೆಚ್ಚುತ್ತಿವೆ. ವಾಹನ ನಿಲ್ಲಿಸಲು ಜಾಗವಿಲ್ಲದೆ ಪರದಾಡಬೇಕಿದೆ. ಇನ್ನು ಟೌನ್‌ಹಾಲ್ ಸುತ್ತ ಸುಮಾರು 12 ವರ್ಷಗಳಿಂದ ಕಾಮಗಾರಿ ನಡೆಯುತ್ತಿದೆ. ಕೆಲವು ಮೇಯರ್‌ಗಳು ಹಾಗೂ ಕಮೀಷನರ್‌ಗಳು ಬದಲಾದರೂ ಈ ಸಮಸ್ಯೆಯನ್ನು ಬಗೆಹರಿಸಲಾಗಲಿಲ್ಲ. ದಸರಾ ಸಮಯದಲ್ಲಿ ಕಾಮಗಾರಿಗಳು ಅರ್ಧದಲ್ಲಿ ಉಳಿದರೆ ಗುಂಡಿಗಳನ್ನು ನೋಡಿ ಸಂತೋಷ ಪಡಬೇಕಿದೆ.

ಇನ್ನು ದೇವರಾಜ ಮಾರುಕಟ್ಟೆಯನ್ನು ಉರುಳಿಸಿ ಹೊಸದಾಗಿ ಮಾರುಕಟ್ಟೆಯನ್ನು ಕಟ್ಟುವ ಆಲೋಚನೆ ಮಾಡುತ್ತಿರುವ ಜನಪ್ರತಿನಿಧಿಗಳು ಇರುವ ಜಾಗವನ್ನು ಅಚ್ಚುಕಟ್ಟಾಗಿ ಇಡಲು ಏಕೆ ಪ್ರಯತ್ನಿಸುತ್ತಿಲ್ಲ. ವಿಶ್ವೇಶ್ವರ ಕಟ್ಟಡ ಹಿಂಭಾಗ ಇರುವ ಖಾಲಿ ಜಾಗದಲ್ಲಿ ತಾತ್ಕಾಲಿಕ ವಾಹನ ನಿಲ್ದಾಣವನ್ನು ಮಾಡಿದರೆ ಪ್ರವಾಸಿಗರಿಗೆ ಅನುಕೂಲವಾಗುತ್ತಿತ್ತು. ಆದರೆ ಇದಕ್ಕೆ ಇಚ್ಛಾಶಕ್ತಿ ನಮ್ಮ ಜನಪ್ರತಿನಿಧಿಗಳಿಗೆ ಬೇಕಿದೆ. ಯಾವ ಸರ್ಕಾರ ಬಂದರೂ ಕುಂತಿ ಮಕ್ಕಳಿಗೆ ವನವಾಸ ತಪ್ಪಲಿಲ್ಲ ಅನ್ನುವಂತೆ ಮೈಸೂರಿನ ನಾಗರಿಕರು ಅನುದಿನ ತೊಂದರೆ ಅನುಭವಿಸಬೇಕಿದೆ. ಇದಕ್ಕೆಲ್ಲಾ ಪರಿಹಾರ ಹೇಳುವವರು ಯಾರು? – **ಶ್ರೀಪಾದರಾವ್, ಸಿದ್ಧಾರ್ಥನಗರ, ಮೈಸೂರು.**

ಜನಸಂಖ್ಯೆ ಮಾರಕವೋ ಪೂರಕವೋ?

ಮಾನ್ಯರೆ,

ನಮ್ಮ ದೇಶ ಜನಸಂಖ್ಯೆಯಲ್ಲಿ ಎರಡನೇ ಸ್ಥಾನದಲ್ಲಿದೆ. ಇನ್ನು ಕೆಲವೇ ವರ್ಷಗಳಲ್ಲಿ ಚೀನಾ ದೇಶವನ್ನು ಹಿಂದಿಕ್ಕಿ ಮೊದಲನೇ ಸ್ಥಾನಕ್ಕೆ ಬರುವ ನಿರೀಕ್ಷೆ ಇದೆ. ಮಳೆಯಾದರೂ, ಮಕ್ಕಳಾದರೂ ಕೇಡಿಲ್ಲ ಅನ್ನೋ ಗಾದೆ. ಆದರೆ ಅತಿಯಾದರೆ ಅಮೃತವೂ ವಿಷವೇ. ಮನೆಯಲ್ಲೊಬ್ಬರನ್ನು ಸೈನ್ಯಕ್ಕೆ ಕಳುಹಿಸಿ ಎಂಬಂತೆ ಮನೆಯಲ್ಲೊಬ್ಬರನ್ನು ಹೊರ ದೇಶಕ್ಕೆ ಕಳುಹಿಸಿ ಎನ್ನುವುದು ಸೂಕ್ತ ಎಂದೆನ್ನಿಸುತ್ತದೆ. ಈಗಾಗಲೇ ಭಾರತ ಮಾತೆಯ ಮಕ್ಕಳು ಪ್ರಪಂಚದ ಬಹುತೇಕ ರಾಷ್ಟ್ರಗಳಲ್ಲಿ ಅತ್ಯುನ್ನತ ಸ್ಥಾನಗಳಲ್ಲಿ ಗುರುತಿಸಿಕೊಂಡಿದ್ದಾರೆ. ದೊಡ್ಡ ದೊಡ್ಡ ಉದ್ದಿಮೆಯನ್ನು ಸ್ಥಾಪಿಸಿ ಸಾಕಷ್ಟು ಜನರಿಗೆ ಉದ್ಯೋಗವನ್ನು ಕಲ್ಪಿಸಿಕೊಟ್ಟಿದ್ದಾರೆ.

ಪ್ರಪಂಚದಲ್ಲಿ ಅಜ್ಞಾನಕ್ಕೆ ಹಲವು ದೇಶಗಳು, ವಿಜ್ಞಾನಕ್ಕೆ ಕೆಲವು ದೇಶಗಳು. ಆದರೆ ಸುಜ್ಞಾನಕ್ಕೆ ಇರುವುದೊಂದೇ ದೇಶ ಅದುವೇ ಭಾರತ. ಸುಸಂಸ್ಕೃತ ಭಾರತೀಯರು ಹೋದಲ್ಲೆಲ್ಲಾ ನಮ್ಮ ಸಂಸ್ಕೃತಿಯನ್ನು ಬೆಳಗಿಸಬೇಕು. ಇತ್ತೀಚಿನ ದಿನಗಳಲ್ಲಿ ನಮ್ಮ ಪ್ರಜೆಗಳು ಆಡಳಿತ ವ್ಯವಸ್ಥೆಯಲ್ಲಿ ಮುಂಚೂಣಿಯಲ್ಲಿದ್ದಾರೆ. ಇದೊಂದು ಶುಭಸೂಚಕ. ಇನ್ನೂರು ವರ್ಷಗಳ ಕಾಲ ಪರಕೀಯರ ಆಡಳಿತದಲ್ಲಿದ್ದ ನಾವು ಮುಂದಿನ ಶತಮಾನಗಳಲ್ಲಿ ನಮ್ಮ ಆಧಿಪತ್ಯವನ್ನು ಸ್ಥಾಪಿಸಬೇಕಿದೆ. 'ವಸುದೈವ ಕುಟುಂಬಕಂ' ಪ್ರಪಂಚವೇ ಒಂದು ಕುಟುಂಬವಾಗಿ ಆ ಕುಟುಂಬದ ಯಜಮಾನಿ ಭಾರತ ಮಾತೆಯಾಗಬೇಕೆಂಬುದು ನನ್ನ ಆಸೆ. ಇದು ಪ್ರತಿಯೊಬ್ಬ ಭಾರತೀಯನ ಆಸೆಯಾಗಿರಲಿ ಎಂದು ಆಶಿಸುತ್ತೇನೆ.

–ಗಾಯತ್ರಿ ರಮೇಶ್, ಕೂರ್ಗಳ್ಳಿ, ಮೈಸೂರು.

ಕತ್ತಲೆಯಲ್ಲಿರುವ ಮುತ್ತಿನ ಮುಳುಸೋಗೆ ಗ್ರಾಮ

ಮಾನ್ಯರೆ,

ಪಿರಿಯಾಪಟ್ಟಣ ತಾಲೂಕಿನ ಮುತ್ತಿನ ಮುಳುಸೋಗೆ ಗ್ರಾಮದಲ್ಲಿ ನಿರಂತರ ಜ್ಯೋತಿ ಇದ್ದರೂ ಕೆಲವು ಗ್ರಾಮಗಳು ಹಾಗೂ ಊರಿನ ಹೊರಭಾಗದಲ್ಲಿ ಕರೆಂಟ್ ಇಲ್ಲದೆ ಜನತೆ ಬಹಳ ತೊಂದರೆ ಅನುಭವಿಸುವಂತಾಗಿದೆ. ಈ ಸಂಬಂಧ ಹಲವಾರು ಬಾರಿ ಬೈಲಕುಪ್ಪೆ ಹಾಗೂ ಕೊಪ್ಪ ಶಾಖಾ ಅಧಿಕಾರಿಗಳಿಗೆ ದೂರು ನೀಡಿದ್ದರೂ ಇದುವರೆಗೂ ಯಾವುದೇ ಪ್ರಯೋಜನವಾಗಿಲ್ಲ. ಅಲ್ಲದೆ ಈ ವಿಷಯವನ್ನು ಶಾಸಕರ ಗಮನಕ್ಕೆ ತಂದರೂ ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಕೂಡಲೇ ಸಂಬಂಧಪಟ್ಟ ವಿದ್ಯುತ್ ಇಲಾಖೆ ಅಧಿಕಾರಿಗಳು ನಿರಂತರ ಜ್ಯೋತಿಯನ್ನು ನೀಡದಿದ್ದರೆ ಹಲವಾರು ಕುಟುಂಬಗಳು ಕತ್ತಲೆಯಲ್ಲಿ ಕಾಲ ಕಳೆಯಬೇಕಾಗಿದೆ ಎಂದು ತಮ್ಮ ಅಳಲು ತೋಡಿಕೊಂಡಿದ್ದಾರೆ. ತಕ್ಷಣವೇ ಊರ ಹೊರ ಭಾಗದ ಗ್ರಾಮಗಳಿಗೆ ನಿರಂತರ ಜ್ಯೋತಿ ಕಲ್ಪಿಸಬೇಕೆಂದು ಈ ಮೂಲಕ ಮನವಿ.

– ಶಿವಕುಮಾರ್, ಮುತ್ತಿನ ಮುಳಸೋಗೆ, ಪಿರಿಯಾಪಟ್ಟಣ ತಾ.

ಶಿಕ್ಷಕರ ಬಡಾವಣೆಯಲ್ಲಿ ಎಟಿಎಂ ಕೇಂದ್ರ ತೆರೆಯಿರಿ

ಮಾನ್ಯರೆ,

ಮೈಸೂರಿನ ಡಾ. ರಾಧಾಕೃಷ್ಣನ್ ನಗರದ ಶಿಕ್ಷಕರ ಬಡಾವಣೆಯಲ್ಲಿ ಯಾವುದೇ ಎಟಿಎಂ ಕೇಂದ್ರ ಇಲ್ಲ. ಇದರಿಂದ ಬಡಾವಣೆಯಲ್ಲಿರುವ ನಿವೃತ್ತ ಶಿಕ್ಷಕರು, ಅಂಗವಿಕಲರು, ವಯೋವೃದ್ಧರು, ಪಿಂಚಣಿ ಹಣ ಪಡೆದುಕೊಳ್ಳುವವರಿಗೆ ತುಂಬಾ ತೊಂದರೆಯಾಗುತ್ತಿದೆ. ಬಡಾವಣೆಯ ಹತ್ತಿರದಲ್ಲೂ ಯಾವುದೇ ಎಟಿಎಂ ಕೇಂದ್ರಗಳು ಇರುವುದಿಲ್ಲ. ಆದ್ದರಿಂದ ಎಸ್‌ಬಿಐ, ಸಿಂಡಿಕೇಟ್ ಬ್ಯಾಂಕ್, ಕೆನರಾ ಬ್ಯಾಂಕ್, ಆಕ್ಸಿಸ್ ಬ್ಯಾಂಕ್ ಸೇರಿದಂತೆ ಯಾವುದಾದರೂ ಬ್ಯಾಂಕಿನ ಎಟಿಎಂ ಕೇಂದ್ರವನ್ನು ತೆರೆದು ಇಲ್ಲಿನ ನಿವಾಸಿಗಳಿಗೆ ಅನುಕೂಲ ಮಾಡಿಕೊಡಬೇಕೆಂದು ಮನವಿ.

– ವಿ. ರಾಜೇಂದ್ರ, ಶಿಕ್ಷಕರ ಬಡಾವಣೆ, ರಾಧಾಕೃಷ್ಣನಗರ, ಮೈಸೂರು.


ಸ್ಫೋಟ!

ಮಾನ್ಯರೆ,

ಇದು ನಾನಾ ಬಗೆಯ ಸ್ಫೋಟಗಳ ಕಾಲ. ಜಲಸ್ಫೋಟ, ಮೇಘ ಸ್ಫೋಟ, ಬಾಂಬು ಸ್ಫೋಟ, ಘಟಸ್ಫೋಟ (ವಿವಾಹ ವಿಚ್ಛೇದನ) ಇತ್ಯಾದಿ. ಬಾಹ್ಯ ಜಗತ್ತಿರಲಿ, ಕಾವ್ಯ ಜಗತ್ತನ್ನು ನೋಡೋಣ. 'ಧ್ವನಿ' ಕಾವ್ಯದ ಜೀವಾಳ ಎನ್ನಲಾಗಿದೆ. ಧ್ವನಿತತ್ವಕ್ಕೆ ಪ್ರೇರಣೆ ವ್ಯಾಕರಣದ ಸ್ಫೋಟದತ್ತ ಎನ್ನುತ್ತಾರೆ, ವಿದ್ವಾಂಸರು.

ಬದುಕಿನಲ್ಲಿ ಬೇಡ ಸ್ಫೋಟ; ಕಾವ್ಯದಲ್ಲಿ ಮಾತ್ರ ಇರಲಿ ! (ಬಿರುಕು, ಒಡಕು ಎಲ್ಲಿಯೂ ಸಲ್ಲವು). **–ಸಿಪಿಕೆ, ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.**

ಶ್ರಾವಣ ಬಂತೆಂದರೆ ಸಂಭ್ರಮವೋ ಸಂಭ್ರಮ







■ **ಪುಷ್ಪಲತಾ ಫಣಿರಾಜ್**, ಮೈಸೂರು.

ಆಷಾಢದ ಜಡತೆ ಮರೆಸಿ, ಮನಕ್ಕೆ ಮುದ ನೀಡುವ ಚಿತ್ತಕ್ಕೆ ಭಕ್ತಿ ಮೂಡಿಸಿ, ಅಭಿರುಚಿಯ ಅನನ್ಯತೆಗೆ ಜೀವನೋತ್ಸಾಹ ಜೀವನರಾಗದ ಜೊತೆಗೆ ಸಂಪ್ರದಾಯ ಸಂಸ್ಕೃತಿಗಳ ಅನಾವರಣದ ರೂಪಕ ಈ ಶ್ರಾವಣ ಮಾಸ.

ಸೂರ್ಯನ ಹೊಂಬಿಸಿಲು ನಡು ನಡುವೆ ವರುಣನ ತುಂತುರು ಹನಿಗಳ ಸಿಂಚನ, ನದಿ ತೊರೆಗಳ ಜುಳು ಜುಳು ಕಲರವದ ನಿನಾದ, ಸಂಪಿಗೆ ಕೇದಿಗೆ ಜಾಜಿ ಮಲ್ಲಿಗೆ ಸೇವಂತಿಗೆ ಹೂವುಗಳ ಸುವಾಸನೆ, ಹಸಿರುಡುಗೆ ಉಟ್ಟು ಸಂಭ್ರಮಿಸುವ ನಿಸರ್ಗ ರಮಣೀಯ ಹಾಡಿ ಕುಪ್ಪಳಿಸುವ ಮನೋಹರ ದೃಶ್ಯಕಾವ್ಯದ ಕನ್ನಡಿಯೇ ಶ್ರಾವಣ!!!

ಸೃಷ್ಟಿಯು ಸೌಂದರ್ಯದೊಡನೆ ನವವಧುವಿನಂತೆ ನಲಿದರೆ.. ನವ ದಂಪತಿಗಳಿಗೆ ಆಷಾಢದ ವಿರಹ ಕಳೆದು ಶ್ರಾವಣದ ಸಂತಸದಲ್ಲಿ ಮಿಂದೇಳುವ ಪ್ರಣಯಕಾವ್ಯ. ನಿಸರ್ಗದ ಜೊತೆ ಜೊತೆಗೆ ಬದುಕುವ ಜನಪದರಲ್ಲೂ ಶ್ರಾವಣ ವೈವಿಧ್ಯಮಯ ಹಾಗೂ ವೈಶಿಷ್ಟ್ಯಪೂರ್ಣ.. ಕೃಷಿಕರಿಗೆ ವರುಣನ ಕೃಪೆ ಸೂರ್ಯನ ಹೊಂಬಿಸಿಲು ಬೇಸಾಯಕ್ಕೆ ತೊಡಗಲು ಅನುಕೂಲಕರವಾದರೆ...

ಸನ್ಯಾಸಿಗಳಿಗೆ ಅಧ್ಯಯನಕ್ಕೆ ಆಧ್ಯಾತ್ಮಿಕ ಚಿಂತನೆಗೆ ಪರ್ವಕಾಲ..

ಭಕ್ತರಿಗೆ.. ಹಬ್ಬ ಹರಿದಿನ ಪೂಜೆ ಪುನಸ್ಕಾರ ಆಚರಣೆ ಆಚಾರಗಳ ನಿತ್ಯೋತ್ಸವ. ಏಕೆಂದರೆ ದೇವಾನುದೇವತೆಗಳು ವರಗಳನ್ನು ನೀಡಲು ಸಾಲು ಸಾಲಾಗಿ ಬರುತ್ತಾರೆ...ಈ ಮಾಸದಲ್ಲಿ.!!!

ಇನ್ನು ಹೆಂಗಳೆಯರ ಸಡಗರ ಹೇಳತೀರದು, ಮುಂಬಾಗಿಲಿಗೆ ಹಸಿರು ತೋರಣ ಕಟ್ಟಿ ಬಣ್ಣ ಬಣ್ಣದ ರಂಗವಲ್ಲಿ ಬಿಡಿಸಿ, ಪೂಜೆಯ ಜೊತೆಗೆ ತಾವು ಜರತಾರಿ ಸೀರೆಯುಟ್ಟು, ಬಳೆಗಳ ಸಪ್ಪಳ, ಮಲ್ಲಿಗೆ ಹೂ ಘಮದೊಂದಿಗೆ ಮಿರುಗುವ ಒಡವೆಗಳನ್ನು ಧರಿಸಿ ಕಾಲ್ಗೆಜ್ಜೆಯ ಝೇಂಕಾರದಿಂದ ಶ್ರಾವಣವನ್ನು ರಂಗೇರಿಸುತ್ತಾರೆ.

ಶ್ರಾವಣ ಮಾಸದ ಪ್ರಕೃತಿಯ ನಯನ ಮನೋಹರತೆಗೆ ಮನ ಸೋತ ಕವಿಗಳಿಗೆ ಇದೊಂದು ಋತು ವಿಲಾಸ. ಗೀತ ಗಾರುಡಿಗ ಶಬ್ದ ಬ್ರಹ್ಮ ವರಕವಿ ದ.ರಾ.ಬೇಂದ್ರೆಗೂ ಶ್ರಾವಣಕ್ಕೂ ಅವಿನಾಭಾವ ಸಂಬಂಧ. ಬೇಂದ್ರೆಯವರು ತಮ್ಮ ದುಗುಡ ದುಮ್ಮಾನಗಳನ್ನು ಸಹ ಅನನ್ಯ ಕವಿತೆಯಾಗಿ, ಹಾಡಾಗಿ ಅಸೀಮ ಸೃಜನಶೀಲತೆಯಿಂದ ಅಭಿವ್ಯಕ್ತಿಗೊಳಿಸಿದ ರೀತಿ ಅವರನ್ನು "ಶ್ರಾವಣದ ಕವಿ" ಎಂದು ಕರೆಯಲು ಕಾರಣವಾಯ್ತು..

ಕಲಾವಿದರಿಗೂ ಕೂಡ ಶ್ರಾವಣ ಸಂಭ್ರಮದ ಮೆರವಣಿಗೆಯನ್ನೇ ತರುತ್ತದೆ.. ಗೀತ ನೃತ್ಯ ನಾಟಕ ಹರಿಕಥೆ ಯಕ್ಷಗಾನ ಶನಿಕಥೆ ಭಜನೆ ಮನರಂಜನೆ ಕಾರ್ಯಕ್ರಮಗಳು ಬೀದಿ ಬೀದಿಗಳಲ್ಲಿ ಬಡಾವಣೆಗಳಲ್ಲಿ ನಡೆಯುತ್ತಿರುತ್ತದೆ. ಇನ್ನು ವ್ಯಾಪಾರಿಗಳಿಗೆ ವ್ಯಾಪಾರ ಜೋರೋ ಜೋರು ಹೂವು ಹಣ್ಣು ತರಕಾರಿಗಳ ಬೆಲೆ ಗಗನಕ್ಕೇರಿಸಿ ಅವರುಗಳು ಹೆಚ್ಚಿನ ಲಾಭ ಪಡೆವ ಸುಗ್ಗಿ ಕಾಲ!!.

ಗಂಡಸರಿಗೂ ಮಕ್ಕಳಿಗೂ ಶ್ರಾವಣ ಎಂದರೆ ಪರಮಾನಂದ!! ಯಾಕೆ ಅಂತೀರಾ....ಭಕ್ಷ್ಯ ಭೋಜನದ ಸವಿಯ ಪರಿಮಳ..

ನಾಗರ ಪಂಚಮಿ ಎಂದು...ತಂಬಿಟ್ಟು ಉಂಡೆ ಸಿಹಿ ಮತ್ತು ಖಾರದ ಕಡುಬು ಸವಿದರೆ ಹಿಂದೆಯೇ ಸಿರಿಯಾಳ ಷಷ್ಠಿಯ ಬಗೆ ಬಗೆಯ ಕಲಸಿದ ಅನ್ನಗಳು, ಚಿತ್ರಾನ್ನ ಪುಳಿಯೋಗರೆ, ಕಾಯಿ ಸಾಸಿವೆ ಅನ್ನ, ಹುಗ್ಗಿ, ಮೊಸರನ್ನ, ಆಮೇಲೆ...ವರಮಹಾಲಕ್ಷ್ಮಿ ಎಂದು ಮಾಡಿದ ಹೋಳಿಗೆ ಪಾಯಸ

ಅಂಬೋಡೆ ಶಾಲ್ಯನ್ನ ಸವಿದರೆ...ಶ್ರೀ ಗುರು ರಾಘವೇಂದ್ರರಿಗೆ ಎಂದು ಸಮರ್ಪಿಸಿ, ಹಯಗ್ರೀವ ಗೊಜ್ಜವಲಕ್ಕಿ ಮೊಸರವಲಕ್ಕಿಯ ಸೇವನೆ...ಇಷ್ಟಕ್ಕೇ ನಿಂತೀತೆ.....ಖಂಡಿತ ಇಲ್ಲ ಶ್ರೀ ಕೃಷ್ಣನ ಅವತಾರ ಅವನಿಗೆ ನೈವೇದ್ಯಕ್ಕೆ ಎಂದು ಮಾಡಿದ ಕೊಡುಬಳೆ ನಿಪ್ಪಟ್ಟು ವಿವಿಧ ಬಗೆಯ ಅವಲಕ್ಕಿಗಳು, ಉಂಡೆಗಳು ಸಿಹಿ ತಿನಿಸುಗಳು ಬಿಡಲಾದೀತೆ!! ಉಹುಂ... ಇವೆಲ್ಲದರ ಜೊತೆಗೆ ಕೋಸಂಬರಿಗಳು, ಪಲ್ಯಗಳು, ಹುಳಿ, ರಸಂ,ಹಪ್ಪಳ,ತೊವ್ವೆ,ಉಪ್ಪಿನಕಾಯಿ, ಕೂಟು, ಮಜ್ಜಿಗೆಹುಳಿ ಬೋಂಡ ತಮ್ಮ ತಮ್ಮ ಸ್ಥಾನಗಳನ್ನು ಕಾಪಾಡಿಕೊಂಡಿರುತ್ತವೆ!!!.??

ಇಷ್ಟೆಲ್ಲ ಸವಿದ ಮೇಲೆ ತಾಂಬೂಲ ಹಾಕಿಕೊಂಡರೆ ಇನ್ನೂ ಚೆಂದ ಇದು ಶ್ರಾವಣದ ಮೃಷ್ಟಾನ್ನ ಭೋಜನದ ಸವಿ.

ಹಬ್ಬ ಎಂಬುದು ನಮ್ಮ ಸಂಸ್ಕಾರ ಸಂಪ್ರದಾಯ. ಇವುಗಳಿಲ್ಲದೆ ಹೋದಲ್ಲಿ ನಮ್ಮ ಬದುಕು ಕೇವಲ ವ್ಯವಹಾರಿಕವಾಗಿ ಯಾಂತ್ರೀಕೃತವಾಗಿ ಬಿಡುತ್ತಿತ್ತು. ಮನುಷ್ಯ ಮನುಷ್ಯನ ನಡುವೆ ಸಂಬಂಧ ಬೆಸೆಯಲು ಗಟ್ಟಿಗೊಳಿಸಲು ಈ ಹಬ್ಬಗಳು ಅತ್ಯಾವಶ್ಯಕ.

ಇತ್ತೀಚಿನ ದಿನಗಳಲ್ಲಿ ಹಬ್ಬಗಳು ಆಚರಣೆಗಿಂತ ಹೆಚ್ಚಾಗಿ ಆಡಂಬರ ಹಾಗೂ ವೈಭವದ ಪ್ರದರ್ಶನ ಎನಿಸಿಕೊಳ್ಳುತ್ತಿದೆ.. ಹಬ್ಬಗಳ ಹಿಂದಿನ ವೈಚಾರಿಕತೆ, ವೈಜ್ಞಾನಿಕತೆ ಅರಿತು ಶ್ರದ್ಧಾ ಭಕ್ತಿ ಪ್ರಾಮಾಣಿಕತೆಯಿಂದ ನಂಬಿಕೆಯಿಂದ ಆಚರಿಸಿದರೆ ಮಾತ್ರ ನಮ್ಮ ಸಾಂಪ್ರದಾಯಿಕ ಸಂಭ್ರಮವನ್ನು ಉಳಿಸಿದಂತೆ...

ಯುವ ಪೀಳಿಗೆಯವರು ದಿನಕ್ಕೊಂದು ಡೇಗಳನ್ನು ಆಚರಿಸುವುದರ ಬದಲು ನಮ್ಮ ಹಬ್ಬಗಳತ್ತ ಒಮ್ಮೆ ಗಮನ ಹರಿಸಿದರೆ...ಅಲ್ಲಿ ಎಲ್ಲವೂ ಲಭ್ಯ. ಶ್ರಾವಣ ಸಂಭ್ರಮ ಮನೆ ಮನಗಳನ್ನು ಬೆಳಗಲಿ, ಸಡಗರ ಹೆಚ್ಚಲಿ, ನಮ್ಮ ಸಂಸ್ಕೃತಿ ಸಂಸ್ಕಾರ ಹಸಿರಾಗಿರಲಿ. ■

ಹಿಂದುಳಿದ ವರ್ಗಕ್ಕೆ ಸೇರ್ಪಡೆಗೊಳಿಸಲು ಆಗ್ರಹಿಸಿ

ವೀರಶೈವ–ಲಿಂಗಾಯತರ ಭಾರೀ ಮೆರವಣಿಗೆ



ಮೈಸೂರು, ಆ.1(ಆರ್‌ಕೆಬಿ)– ವೀರಶೈವ ಲಿಂಗಾಯತ ಸಮುದಾಯವನ್ನು ಕೇಂದ್ರ ಸರ್ಕಾರದ ಇತರೆ ಹಿಂದುಳಿದ ವರ್ಗಗಳ (ಒಬಿಸಿ) ಪಟ್ಟಿಯಲ್ಲಿ ಸೇರ್ಪಡೆ ಮಾಡುವಂತೆ ಆಗ್ರಹಿಸಿ, ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾ ಘಟಕದ ಆಶಯದಲ್ಲಿ ಸೋಮವಾರ ನೂರಾರು ಮಂದಿ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಿದರು.

ಮಹಾಸಭಾದ ಮೈಸೂರು ಜಿಲ್ಲಾಧ್ಯಕ್ಷ ಎಸ್.ಶಿವಮೂರ್ತಿ ಕಾನ್ಯ, ಪ್ರಧಾನ ಕಾರ್ಯದರ್ಶಿ ಹೆಚ್.ಕೆ.ಚನ್ನಪ್ಪ, ಉಸ್ತುವಾರಿ ವರುಣಾ ಮಹೇಶ್ ನೇತೃತ್ವದಲ್ಲಿ ವೀರಶೈವ–ಲಿಂಗಾಯತ ಸಮುದಾಯದ ನೂರಾರು ಮಂದಿ ಮೆರವಣಿಗೆಯಲ್ಲಿ ಭಾಗವಹಿಸಿ, ತಮ್ಮ ಸಮುದಾಯದ ಎಲ್ಲಾ ಪಂಗಡಗಳನ್ನು ಒಳಗೊಂಡಂತೆ ಕೇಂದ್ರದ ಹಿಂದುಳಿದ ವರ್ಗಗಳ (ಓಬಿಸಿ) ಪಟ್ಟಿಯಲ್ಲಿ ಸೇರ್ಪಡೆ ಮಾಡಬೇಕು ಎಂದು ಒಕ್ಕೊರಲಿನಿಂದ ಆಗ್ರಹಿಸಿದರು.

ಗನ್ ಹೌಸ್ ಸಮೀಪದ ಬಸವೇಶ್ವರ ಪುತ್ಥಳಿಗೆ ಮಾಲಾರ್ಪಣೆ ಮಾಡಿ, ಮೆರವಣಿಗೆ ಆರಂಭಿಸಿ, ಚಾಮರಾಜ ಜೋಡಿ ರಸ್ತೆ, ರಾಮಸ್ವಾಮಿ ವೃತ್ತ, ಜೆಎಲ್‌ಬಿ ರಸ್ತೆ, ಫೀಲ್ಡ್ ಮಾರ್ಷಲ್ ಕೆ.ಎಂ.ಕಾರಿಯಪ್ಪ ವೃತ್ತ, ವಿನೋಬ ರಸ್ತೆ ಮೂಲಕ ಮೆರವಣಿಗೆ ಜಿಲ್ಲಾಧಿಕಾರಿ ಕಚೇರಿ ತಲುಪಿತು.

ಈ ಸಂದರ್ಭದಲ್ಲಿ ವಿವಿಧ ಮುಖಂಡರು ಮಾತನಾಡಿ, ಸಂವಿಧಾನ 14(4) ಮತ್ತು 16(4) ಅನುಚ್ಛೇದಗಳು ಇತರೆ ಹಿಂದುಳಿದ ವರ್ಗಗಳ ಮೀಸಲಾತಿಗೆ ಅವಕಾಶ ಕಲ್ಪಿಸಿಕೊಡುತ್ತವೆ. ಇದಕ್ಕೆ ಅನುಗುಣವಾಗಿ 1990ರ ದಶಕದಿಂದ ಕೇಂದ್ರ ಸರ್ಕಾರದ ಶಿಕ್ಷಣ ಸಮಸ್ಯೆಗಳು ಮತ್ತು ಉದ್ಯೋಗಗಳಲ್ಲಿ ಇತರೆ ಹಿಂದುಳಿದ ವರ್ಗಗಳಿಗೆ (ಓಬಿಸಿ) ಅವಕಾಶ ಕಲ್ಪಿಸಲಾಗಿದೆ. ಸಾಮಾನ್ಯವಾಗಿ ರಾಜ್ಯ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿರುವ ಜಾತಿ, ಪಂಗಡಗಳನ್ನು ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಲಾಗುತ್ತದೆ. ರಾಜ್ಯದಲ್ಲಿ ಕಳೆದ 60 ವರ್ಷಗಳಿಂದ ವೀರಶೈವ–ಲಿಂಗಾಯತ ಸಮುದಾಯವು ರಾಜ್ಯದ ಇತರೆ ಹಿಂದುಳಿದ ವರ್ಗಗಳ ಪಟ್ಟಿಯಲ್ಲಿ ಸೇರಿದ್ದರೂ, ಈ ವರ್ಗವನ್ನು ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಗೆ ಸೇರಿಸಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು. 3ನೇ ಹಿಂದುಳಿದ ವರ್ಗಗಳ ಚಿನ್ನಪ್ಪರೆಡ್ಡಿ ಆಯೋಗ ವೀರಶೈವ–ಲಿಂಗಾಯತ ಸಮುದಾಯವು ಈಗಾಗಲೇ ರಾಜ್ಯ ಮತ್ತು ಕೇಂದ್ರದ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿಯಲ್ಲಿ ಸೇರಿರುವ ತಿಗಳ, ಈಡಿಗ, ಒಕ್ಕಲಿಗ, ದೇವಾಂಗ ಮತ್ತು ಬಲಿಜ ಸಮುದಾಯಗಳಿಗಿಂತ ಹಿಂದುಳಿದಿದ್ದರೂ ಕೇಂದ್ರದ ಹಿಂದುಳಿದ ವರ್ಗಗಳ ಪಟ್ಟಿಯಿಂದ ನಮ್ಮ ಸಮುದಾಯವನ್ನು ಹೊರಗಿಟ್ಟಿರುವುದಕ್ಕೆ ಕಾರಣಗಳಿರುವುದಿಲ್ಲ. ವೀರಶೈವ–ಲಿಂಗಾಯತ ಸಮುದಾಯದ ಪ್ರತಿಭಾವಂತರು ದಶಕಗಳಿಂದ ಹತ್ತು ಹಲವಾರು ಅವಕಾಶಗಳಿಂದ ವಂಚಿತರಾಗಿದ್ದಾರೆ. ಇದರಿಂದಾಗಿ ಕೇಂದ್ರ ಸರ್ಕಾರದ ಅಖಿಲ ಭಾರತ ಸೇವೆಗಳಲ್ಲಿ ಅಂದರೆ ಐಎಎಸ್, ಐಪಿಎಸ್, ಐಆರ್‌ಎಸ್ ಉದ್ಯೋಗಾವಕಾಶಗಳಲ್ಲಿ ವೀರಶೈವ – ಲಿಂಗಾಯತ ಸಮುದಾಯದವರು ಬೆರಳೆಣಿಕೆಯಷ್ಟು ಮಾತ್ರ ಇರುತ್ತಾರೆ. ಅದೇ ರೀತಿ ಕೇಂದ್ರ ಸ್ವಾಮ್ಯದ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳಾದ ಐಐಟಿ, ಐಐಎಂ, ನೀಟ್, ಎಐಎಂಎಸ್, ಕೇಂದ್ರೀಯ ವಿಶ್ವವಿದ್ಯಾಲಯಗಳು, ಕೇಂದ್ರೀಯ ವಿದ್ಯಾಲಯ, ನವೋದಯ ಶಾಲೆಗಳು ಹೀಗೆ ಹಲವಾರು ಸಂಸ್ಥೆಗಳಿಗೆ ನಮ್ಮ ಸಮಾಜದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವಕಾಶ ಸಿಗುತ್ತಿರುವುದು ಅತ್ಯಂತ ವಿರಳ ಎಂದು ಬೇಸರ ವ್ಯಕ್ತಪಡಿಸಿದರು.

ವೀರಶೈವ–ಲಿಂಗಾಯತ ಸಮುದಾಯವು ಬಹುತೇಕ ಕೃಷಿ, ಕೃಷಿ ಆಧಾರಿತ ಕಸುಬುಗಳನ್ನು ಅವಲಂಬಿಸಿದೆ. ಆರ್ಥಿಕ, ಸಾಮಾಜಿಕ ಹಾಗೂ ಶೈಕ್ಷಣಿಕವಾಗಿ ಹಿಂದುಳಿದ ಸಮುದಾಯವಾಗಿದೆ. ಕೇಂದ್ರದ ಓಬಿಸಿ ಪಟ್ಟಿಯಲ್ಲಿ ಸೇರದಿರುವುದರಿಂದ ನಮ್ಮ ಸಮುದಾಯದ ಜನರು ದಶಕಗಳಿಂದ ಕೇಂದ್ರ ಸರ್ಕಾರದ ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ಕೇಂದ್ರದ ನೇಮಕಾತಿ ಅವಕಾಶಗಳಿಂದ ವಂಚಿತರಾಗಿದ್ದಾರೆ ಎಂದು ದೂರಿದರು. ನಂತರ ಜಿಲ್ಲಾಧಿಕಾರಿ ಕಚೇರಿಗೆ ಮನವಿ ಸಲ್ಲಿಸಿದರು. ನಮ್ಮ ಮನವಿಯನ್ನು ಸರ್ಕಾರ ಪುರಸ್ಕರಿಸದಿದ್ದರೆ ರಾಜ್ಯಾದ್ಯಂತ ವೀರಶೈವ–ಲಿಂಗಾಯತರು ಬೃಹತ್ ಪ್ರತಿಭಟನೆ ಹಮ್ಮಿಕೊಳ್ಳಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಪ್ರತಿಭಟನಾ ಮೆರವಣಿಗೆಯಲ್ಲಿ ಕೋಶಾಧ್ಯಕ್ಷ ವರುಣಾ ಮಹೇಶ, ರಾಜ್ಯ ಘಟಕದ ಉಸ್ತುವಾರಿ ಪದಾಧಿಕಾರಿ ಹಾಗೂ ಜಿಲ್ಲಾಧ್ಯಕ್ಷ ಕಾನ್ಯ ಶಿವಮೂರ್ತಿ, ಪ್ರಧಾನ ಕಾರ್ಯದರ್ಶಿ ಚನ್ನಪ್ಪ, ಪದಾಧಿಕಾರಿಗಳಾದ ಎಸ್.ಬಿ.ಸುರೇಶ್, ಚಂದ್ರು, ಕೆಂಪಣ್ಣ, ಕುರಹಟ್ಟಿ ಮಹೇಶ್, ಧರ್ಮ ಮಂಜುನಾಥ್, ನಗರ ಘಟಕದ ಅಧ್ಯಕ್ಷ ಎಂ.ಹೆಚ್.ಚಂದ್ರಶೇಖರ್, ಪ್ರಧಾನ ಕಾರ್ಯದರ್ಶಿ ಪ್ರಕಾಶ್, ರಾಜ್ಯ ಸಮಿತಿಯ ಸೋಮಶೇಖರ್ ಹಂದನಹಳ್ಳಿ, ಗುರುಸ್ವಾಮಿ, ಹಿನಕಲ್ ಬಸವರಾಜು, ತುಂಬಲ ಲೋಕೇಶ್, ಐ ಲೈಫ್ ಅಧ್ಯಕ್ಷ ವೀರೇಶ್, ಪದಾಧಿಕಾರಿಗಳಾದ ಕುಮಾರ್ ಜಿ.ಮಲ್ಲೇಶ್, ಸರ್ವೆ ಸ್ವಾಮಿ, ರಾಜು, ಅರುಣ್ ಸೋಲಾರ್, ಜಿಲ್ಲಾ ಯುವ ಘಟಕದ ಮಾರ್ಬಳ್ಳಿ ಮೂರ್ತಿ, ಪ್ರಧಾನ ಕಾರ್ಯದರ್ಶಿ ನಟರಾಜ್, ಪ್ರತಿಧ್ವನಿ ಪ್ರಸಾದ್, ಮಹಿಳಾ ಘಟಕದ ಅಧ್ಯಕ್ಷೆ ಸುನಂದಾ ಪಾಲನೇತ್ರ ಮತ್ತು ತಾಲೂಕು ಘಟಕದ ಅಧ್ಯಕ್ಷರಾದ ಶಿವರಾಜು, (ಸರಗೂರು) ಬಿ.ಕೆ.ನಾಗರಾಜು, (ಮೈಸೂರು) ತಾಲ್ಲೂಕು ಮೊತ್ತ ಬಸವರಾಜು, (ಎಚ್.ಡಿ.ಕೋಟೆ) ಚಂದ್ರಶೇಖರಪ್ಪ, (ಪಿರಿಯಾಪಟ್ಟಣ) ಕೆಂಪರಾಜು, (ಕೆಆರ್ ನಗರ) ರಮೇಶ್‌ಕುಮಾರ್, (ಹುಣಸೂರು) ಮಹಾದೇವಸ್ವಾಮಿ (ಟಿ.ನರಸೀಪುರ) ಮತ್ತು ಶ್ರೀಕಂಠನ್ ಮೂರ್ತಿ ಜೀಮಾರಳ್ಳಿ ಪುಟ್ಟರಾಜು, ಗೌರಿಶಂಕರನಗರ ಶಿವಕುಮಾರ್, ಆಯರಹಳ್ಳಿ ವಿರೂಪಾಕ್ಷ, ಕೆ.ವಿ.ಮಲ್ಲೇಶ್, ಬೆಮೆಲ್, ಬೋಗಾದಿ, ವಿಜಯನಗರ, ಜೆಪಿನಗರ, ಜೆಎಸ್‌ಎಸ್ ನಗರ, ಸಿದ್ಧಾರ್ಥನಗರ ಬಸವ ಬಳಗಗಳ ಒಕ್ಕೂಟ ಪದಾಧಿಕಾರಿಗಳು, ಸಂಘ ಸಂಸ್ಥೆಗಳು ಭಾಗವಹಿಸಿದ್ದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

02.08.2022 ಮಂಗಳವಾರ, ಮಳೆ ನಕ್ಷತ್ರ : ಪುಷ್ಯ, 20.07.2022 ರಿಂದ 02.08.2022
ಶ್ರೀ ಶುಭಕೃತುನಾಮ ಸಂವತ್ಸರ, ದಕ್ಷಿಣಾಯನ, ಶುಭಕೃತು ಋತು, ಶ್ರಾವಣ ಮಾಸ, ಶುಕ್ಲ ಪಕ್ಷ
ತಿಥಿ: ಪಂಚಮೀ, ನಕ್ಷತ್ರ : ಉಫ, ರಾಹುಕಾಲ: ಮಧ್ಯಾಹ್ನ 3 ರಿಂದ 4.30 ರವರೆಗೆ

■ **ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ:** ಶ್ರೀ ಶ್ರೀ ದತ್ತ ವಿಜಯಾನಂದತೀರ್ಥ ಸ್ವಾಮೀಜಿಯವರ 19ನೇ ಚಾತುರ್ಮಾಸ್ಯ ವ್ರತದೀಕ್ಷಾ ಮಹೋತ್ಸವ, ನಾಗಪಂಚಮಿ, ಗರುಡಪಂಚಮಿ, ಸ್ಥಳ: ಶ್ರೀ ಗಣಪತಿ ಸಚ್ಚಿದಾನಂದ ಆಶ್ರಮ, ನಂಜನಗೂಡು ರಸ್ತೆ ದತ್ತನಗರ.

■ **ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತ್ಯೋತ್ಸವ ಸಮಿತಿ:** ಶಿವಶರಣೆ ಹೇಮರೆಡ್ಡಿ ಮಲ್ಲಮ್ಮ ಜಯಂತಿ, ಉದ್ಘಾಟನೆ: ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ. ಸೋಮಶೇಖರ್, ಅಧ್ಯಕ್ಷತೆ: ಶಾಸಕ ಎಲ್.ನಾಗೇಂದ್ರ, ಮುಖ್ಯ ಅತಿಥಿಗಳು: ಹಂಗಾಮಿ ಮೇಯರ್ ಸುನಂದ ಪಾಲನೇತ್ರ, ಸಂಸದರಾದ ಪ್ರತಾಪ್ ಸಿಂಹ, ವಿ.ಶ್ರೀನಿವಾಸ ಪ್ರಸಾದ್, ಸುಮಲತಾ ಅಂಬರೀಷ್, ಸ್ಥಳ:ಕಿರು ರಂಗಮಂದಿರ, ಕಲಾಮಂದಿರ ಆವರಣ, ಬೆಳಗ್ಗೆ 11ಕ್ಕೆ.

■ **ರಾಗ ಮ್ಯೂಸಿಕ್ ಅಕಾಡೆಮಿ:** ಶ್ರೀಮದ್ ಭಾಗವತ ಸಪ್ತಾಹ, ವಿದುಷಿ ಸಿ.ಎಸ್.ಲಕ್ಷ್ಮೀ ಅವರಿಂದ ಶ್ರೀ ಪುರಂದರದಾಸರು ಮತ್ತು ಕನಕದಾಸರ ಕೃತಿಗಳ ಹಾಡುಗಾರಿಕೆ, ವಿದುಷಿ ಸಿ.ವಿ.ಶ್ರುತಿ–ವಯೋಲಿನ್, ವಿದ್ವಾನ್ ನಂದನ್ ಕಶ್ಯಪ್–ಮೃದಂಗ, ಸ್ಥಳ: ಮೈಸೂರು ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6ರಿಂದ.

■ **ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿಶ್ರಾಂತ ಪ್ರಾಧ್ಯಾಪಕ ಡಾ.ಕೆ ಅನಂತರಾಮು ಅವರಿಂದ ಭಾರತೀಯ ಸಂಸ್ಕೃತಿ ಕುರಿತು ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

■ **ರಾಘವೇಂದ್ರಸ್ವಾಮಿ ಮಠ :** ಪಂಡಿತ್ ಕೃಷ್ಣಾಚಾರ್ಯ ನಾಗಸಂಪಿಗೆ ಅವರಿಂದ ರಾಮಾಚಾರಿತ್ರ್ಯ ಮಂಜರಿಯ ಪ್ರವಚನ, ಸ್ಥಳ: ಮಠದ ಆವರಣ, ಜಯಲಕ್ಷ್ಮಿಪುರಂ, ಸಂಜೆ 6.30 ರಿಂದ.

ಸುತ್ತೂರಿನಲ್ಲಿಂದು

■ **ಶ್ರೀ ವೀರ ಸಿಂಹಾಸನ ಮಹಾ ಸಂಸ್ಥಾನ ಮಠ :** ಶ್ರಾವಣ ಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ಪ್ರೊ. ಹೆಚ್.ಬಿ. ದೇವಣ್ಣ ಅವರಿಂದ ಸುರಂಗ ಕವಿಕೃತ ತ್ರಿಷಷ್ಟಿ ಪುರಾತನ ಚಾರಿತ್ರಂ ಕುರಿತು ಪ್ರವಚನ, ಡಿ.ಎಂ. ಸಿದ್ದಲಿಂಗಸ್ವಾಮಿ ಅವರಿಂದ ವಾಚನ, ಸ್ಥಳ: ಸುತ್ತೂರು ಮಠ, ಬೆಳಗ್ಗೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.35 ಶ್ರದ್ಧೆಯ ಶಿಲ್ಪ–ಮೈಸೂರು ಸುತ್ತಲಿನ ದೇಗುಲಗಳ ಪರಿಚಯ, ಪ್ರಸ್ತುತಿ– ಡಾ. ಟಿ.ಎಸ್. ಗೋಪಾಲ್, 6.40 ಭಾವಗೀತೆ, 6.45 ರೈತರಿಗೆ ಸಲಹೆ, 6.50 ವನ ಮಹೋತ್ಸವ–ಅರಣ್ಯ ಇಲಾಖೆ ಪ್ರಾಯೋಜಿತ ಕಾರ್ಯಕ್ರಮ,7.15 ಕಾದಂಬರಿ ವಿಹಾರ–ದೂರ ಸರಿದರು ಕಾದಂಬರಿಯ ಪ್ರಸ್ತುತಿ– ಉಮೇಶ್.ಎಸ್., 9.30 ವೃತ್ತಿ ಮಾರ್ಗದರ್ಶನ–ಆಟೋ ಮೊಬೈಲ್ ಇಂಜಿನಿಯರಿಂಗ್ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಡಾ. ವಿಕ್ರಮ್ ಆತ್ರೇಯ ಅವರೊಂದಿಗೆ ಮಾತುಕತೆ, 10.00 ಗಾನ ರಸೋತ್ತುಂಗ ಶ್ರೀ ಶ್ಯಾಮಕೃಷ್ಣ–ಶ್ರೀ ಶ್ಯಾಮಾಶಾಸ್ತ್ರಿಗಳ ಕೃತಿಗಳನ್ನಾಧರಿಸಿದ ಕಾರ್ಯಕ್ರಮ

ಮಧ್ಯಾಹ್ನ: 12.30 ದೇವರನಾಮ–ಡಾ. ಸುಶ್ಮಾ ಆನಂದ್, 1.20 ಭಾವಗೀತೆ – ಕೆ.ಬಿ. ಸುನೀತಾ ಆಚಾರ್ಯ, 3.00 ಬಿ.ಡಿ. ವೇಣುಗೋಪಾಲ್–ಜಲತರಂಗ ವಾದನ, 4.00 ಕಥಾ ಕಾಲಕ್ಷೇಪ "ಭಕ್ತ ಕುಂಬಾರ", ಪ್ರಸ್ತುತಿ– ವಿದ್ವಾನ್ ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ–ಕಿಸಾನ್ ವಾಣಿ, ಹೈನುರಾಸುಗಳಲ್ಲಿ ಕೆಚ್ಚಲ ಬಾವು ಮತ್ತು ನಿರ್ವಹಣೆ ಕುರಿತು ಸವಿತಾ ಎಸ್.ಟಿ. ಅವರೊಂದಿಗೆ ಸಂದರ್ಶನ, 9.30 ಬಾಂಬೆ ಎಸ್. ಜಯಶ್ರೀ–ಹಾಡುಗಾರಿಕೆ, 10.00 ಕಾವ್ಯ ವಾಚನ, ವಾಚನ– ಬಿ.ಹೆಚ್. ನಾಗರತ್ನಮ್ಮ, ವ್ಯಾಖ್ಯಾನ– ಕೃ.ಪಾ. ಮಂಜುನಾಥ್, 10.30 ಸಂಸತ್ತಿನ ಪ್ರಶ್ನೋತ್ತರ ಕಲಾಪಗಳ ಧ್ವನಿ ಮುದ್ರಣ

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೋದಿಯೇ 2024ರ ಪ್ರಧಾನಿ ಅಭ್ಯರ್ಥಿ

ಗೃಹ ಸಚಿವ ಅಮಿತ್ ಶಾ ಘೋಷಣೆ



ಪಾಟ್ನಾ: ಬಿಜೆಪಿ ಮತ್ತು ಜೆಡಿಯು ಮೈತ್ರಿಯು 2024ರ ಲೋಕಸಭಾ ಚುನಾವಣೆಯಲ್ಲಿಯೂ ಮುಂದುವರಿಯುತ್ತದೆ. ನರೇಂದ್ರ ಮೋದಿ ಅವರೇ ಮುಂದಿನ ಪ್ರಧಾನಿ ಅಭ್ಯರ್ಥಿಯಾಗಿರುತ್ತಾರೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು. ಬಿಹಾರ ರಾಜಧಾನಿ ಪಾಟ್ನಾದಲ್ಲಿ ನಡೆದ ಭಾರತೀಯ ಜನತಾ ಪಕ್ಷದ ವಿವಿಧ ಮೋರ್ಚಾಗಳ ಜಂಟಿ ರಾಷ್ಟ್ರೀಯ ಕಾರ್ಯಕಾರಿಣಿ ಸಭೆಯ ಸಮಾರೋಪ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

2024ರ ಲೋಕಸಭಾ ಚುನಾವಣೆಯಲ್ಲಿ ನಮ್ಮ ಪ್ರಧಾನಿ ಅಭ್ಯರ್ಥಿ ಯಾರಾಗಿರಬೇಕು ಎನ್ನುವುದು ಬಿಸಿಬಿಸಿ ಚರ್ಚೆಯ ವಿಚಾರವಾಗಿತ್ತು. ಹೊಸಬರಿಗೆ ಅವಕಾಶ ನೀಡಿ, ನರೇಂದ್ರ ಮೋದಿ ಅವರು ರಾಜಕೀಯ ನಿವೃತ್ತಿ ಪಡೆದುಕೊಳ್ಳುತ್ತಾರೆ ಎಂಬ ಊಹಾಪೋಹಗಳು ಕೇಳಿಬಂದಿದ್ದವು. ಇದೀಗ ಬಿಜೆಪಿ ಚಾಣಕ್ಯ ಎಂದೇ ಖ್ಯಾತರಾದ ಕೇಂದ್ರ ಗೃಹ ಸಚಿವ ಮತ್ತು ಬಿಜೆಪಿ ಮಾಜಿ ರಾಷ್ಟ್ರೀಯ ಅಧ್ಯಕ್ಷ ಅಮಿತ್ ಶಾ ಎಲ್ಲ ಗೊಂದಲಗಳಿಗೆ ತೆರೆ ಎಳೆದಿದ್ದಾರೆ. 2024ರ ಲೋಕಸಭಾ ಚುನಾವಣೆಯಲ್ಲಿಯೂ ನರೇಂದ್ರ ಮೋದಿ ಅವರೇ ಬಿಜೆಪಿಯ ಪ್ರಧಾನಿ ಅಭ್ಯರ್ಥಿ ಎಂದು ಅಮಿತ್ ಶಾ ಘೋಷಿಸಿದ್ದಾರೆ.

ಕಾರ್ಯಕಾರಿ ಸಮಿತಿ ಸಭೆಯಲ್ಲಿ ಬಿಹಾರದಲ್ಲಿ ಜೆಡಿಯು ಜೊತೆಗೆ ಮಾಡಿಕೊಂಡಿರುವ ಮೈತ್ರಿ ಬಗ್ಗೆಯೂ ಚರ್ಚೆ ನಡೆಯಿತು. 2024ರ ಲೋಕಸಭೆ ಮತ್ತು 2025ರ ಬಿಹಾರ ವಿಧಾನಸಭಾ ಚುನಾವಣೆಗಳಲ್ಲಿಯೂ ಈ ಮೈತ್ರಿ ಅಬಾಧಿತವಾಗಿ ಮುಂದುವರಿಯಲಿದೆ. ಈ ಬಗ್ಗೆ ಯಾವುದೇ ಗೊಂದಲಗಳಿಲ್ಲ ಎಂದು ಅವರು ಹೇಳಿದರು. ಕಾರ್ಯಕಾರಿ ಸಮಿತಿ ಸಭೆಯಲ್ಲಿ ಕಾಶ್ಮೀರದ ಮಹಿಳೆಯರು ತಯಾರಿಸಿರುವ ತ್ರಿವರ್ಣ ಧ್ವಜವನ್ನು ಎಲ್ಲರಿಗೂ ವಿತರಿಸಲಾಯಿತು. ಸಂವಿಧಾನದ 370ನೇ ವಿಧಿಯ ರದ್ದತಿಯ ನಂತರ ಕಾಶ್ಮೀರದಲ್ಲಿ ಹಲವು ಬದಲಾವಣೆಗಳು ಆಗಿವೆ. ಈ ಬದಲಾವಣೆಯನ್ನು ಬಿಂಬಿಸಲು ತ್ರಿವರ್ಣ ಧ್ವಜವನ್ನು ಹಂಚಲಾಯಿತು. ಈ ಬಾರಿಯ ಸ್ವಾತಂತ್ರ್ಯ ದಿನಾಚರಣೆಯಂದು ದೇಶದ ಎಲ್ಲ ಮನೆಗಳ ಮೇಲೆ ರಾಷ್ಟ್ರಧ್ವಜ ಹಾರಿಸಲು ಕರೆ ನೀಡಿದ್ದೇವೆ. ಸ್ವಾತಂತ್ರ್ಯದ ನಂತರ ಇದೇ ಮೊದಲ ಬಾರಿಗೆ ದಲಿತರು, ಬುಡಕಟ್ಟು ಜನಾಂಗಕ್ಕೆ ಸೇರಿದವರು ಮತ್ತು ಹಳ್ಳಿಗಳಿಂದ ಬಂದವರಿಗೆ ಸಚಿವ ಸ್ಥಾನ ನೀಡಲಾಗಿದೆ ಎಂದು ಹೇಳಿದರು. ದೇಶಭಕ್ತಿಗೆ ಉತ್ತೇಜನ ನೀಡುವ ಕ್ರಮಗಳನ್ನು ತೆಗೆದುಕೊಳ್ಳುವ ತುರ್ತು ಅಗತ್ಯ ಭಾರತದಲ್ಲಿ ಬಂದಿದೆ. ಆಗಸ್ಟ್ 13ರಿಂದ 15ರ ಅವಧಿಯಲ್ಲಿ ಮೂರು ದಿನ ದೇಶದ ಮೂಲೆಮೂಲೆಗಳಲ್ಲಿ ರಾಷ್ಟ್ರಧ್ವಜ ಹಾರಿಸಬೇಕು. ಬಿಜೆಪಿ ಕಾರ್ಯಕರ್ತರು ಈ ನಿಟ್ಟಿನಲ್ಲಿ ಗಮನ ಹರಿಸಬೇಕು ಎಂದರು.

ಮುಂದಿನ 5 ದಿನ ರಾಜ್ಯದ ಹಲವೆಡೆ ವರ್ಷಧಾರೆ

ಬೆಂಗಳೂರು: ರಾಜ್ಯದಲ್ಲಿ ಮುಂದಿನ 5 ದಿನ ರಾಜ್ಯದ ದಕ್ಷಿಣ, ಉತ್ತರ ಒಳನಾಡಿನಲ್ಲಿ ಭಾರೀ ಮಳೆಯಾಗುವ ಸಂಭವ ಇದೆ. ಕರಾವಳಿ ಭಾಗದಲ್ಲಿ ನಾಳೆ ಯೆಲ್ಲೋ ಅಲರ್ಟ್, 3 ಹಾಗೂ 4ರಂದು ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ಉತ್ತರ ಒಳನಾಡಿನ ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಿಗೆ ನಾಳೆ ಯೆಲ್ಲೋ ಅಲರ್ಟ್, ಕಲಬುರಗಿ, ವಿಜಯಪುರದಲ್ಲಿ ನಾಳೆ, ನಾಡಿದ್ದು ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ಈಗಾಗಲೇ ಬೆಂಗಳೂರು, ಚಿಕ್ಕಬಳ್ಳಾಪುರ, ತುಮಕೂರು, ಮಂಡ್ಯ, ರಾಮನಗರ ಜಿಲ್ಲೆಗಳಿಗೆ ಯೆಲ್ಲೋ ಅಲರ್ಟ್ ಘೋಷಿಸಲಾಗಿದೆ. ನಿನ್ನೆಯೂ ಬೆಂಗಳೂರಿನಲ್ಲಿ ಕೆಲವೆಡೆ ಸಾಧಾರಣ ಮಳೆ ಆಗಿದ್ದು, ಮೊನ್ನೆ ರಾತ್ರಿ ಬರೀ ಒಂದೂವರೆ ಗಂಟೆಯಲ್ಲಿ 66.8 ಮಿಲಿಮೀಟರ್ ಮಳೆ ಆಗಿದೆ. ಬೀದರ್‌ನ ಕಮಲಾನಗರ ತಾಲೂಕಿನಲ್ಲಿ ಮಳೆ ಅಬ್ಬರ ಜೋರಾಗಿದೆ. ಬಸವಕಲ್ಯಾಣ, ಹುಮ್ನಾಬಾದ್, ಭಾಲ್ಕಿ ಸೇರಿ ಹಲವೆಡೆ ಮಳೆ ಆಗಿದೆ. ಇಂದು ಸಹ ಜಿಲ್ಲೆಯಲ್ಲಿ ಭಾರೀ ಮಳೆಯ ಮುನ್ಸೂಚನೆ ನೀಡಲಾಗಿದೆ. ಚಿಕ್ಕಬಳ್ಳಾಪುರದಲ್ಲಿ ಭಾರೀ ಮಳೆಗೆ ಚೇಳೂರು ಬಳಿ ಪಾಪಾಘ್ನಿ ನದಿ ತುಂಬಿ ಹರಿಯುತ್ತಿದೆ. ಬಾಗೇಪಲ್ಲಿ ಬಳಿಯ ಚಿತ್ರಾವತಿ ಜಲಾಶಯ, ಭೋಯಿನಹಳ್ಳಿ ಗ್ರಾಮದ ಲಕ್ಷ್ಮೀ ಸಾಗರ ಕೆರೆ ಕೋಡಿ ಬಿದ್ದಿದೆ. ಇದರಿಂದ ಅಪಾರ ಪ್ರಮಾಣದ ಬೆಳೆ ನಾಶವಾಗಿದೆ. ಟೊಮೊಟೋ, ಹೂಕೋಸು ನೀರು ಪಾಲಾಗಿದೆ. ಕೋಲಾರದ ಅಂತರಗಂಗೆ ಬೆಟ್ಟದಲ್ಲಿ ಪುಟ್ಟ–ಪುಟ್ಟ ಜಲಪಾತಗಳು ಸೃಷ್ಟಿಯಾಗಿವೆ. ದಾವಣಗೆರೆಯ ಚನ್ನಗಿರಿ ಭಾಗದಲ್ಲಿ ಮಳೆ ಆಗ್ತಿದ್ದು, ಗೊಲ್ಲರಹಳ್ಳಿ ಗ್ರಾಮದಲ್ಲಿ ಬಿರುಕು ಬಿಟ್ಟಿದ್ದ ಶಾಲಾ ಕಟ್ಟಡ ಕುಸಿದು ಬಿದ್ದಿದೆ.

ಬಿಸಿ ನೀರು ಬಿದ್ದು ಮಗು ಸಾವು

ಮೈಸೂರು, ಆ. 1 (ಆರ್‌ಕೆ)– ಪಾತ್ರೆಯಲ್ಲಿದ್ದ ಬಿಸಿ ನೀರು ಬಿದ್ದು, ತೀವ್ರ ಸುಟ್ಟ ಗಾಯಗಳಾಗಿದ್ದ 2 ವರ್ಷದ ಹೆಣ್ಣು ಮಗು ಸಾವನ್ನಪ್ಪಿರುವ ದುರಂತ ಮೈಸೂರು ತಾಲೂಕು ಮಾರ್ಬಳ್ಳಿಹುಂಡಿ ಗ್ರಾಮದಲ್ಲಿ ಸಂಭವಿಸಿದೆ. ಗ್ರಾಮದ ಸಿದ್ದಪ್ಪಾಜಿ ಅವರ ಪುತ್ರಿ ಪ್ರಕೃತಿ (2) ಮೃತಪಟ್ಟ ಕಂದಮ್ಮ. ಜುಲೈ 15 ರಂದು ಮನೆಯ ಸ್ನಾನದ ಮನೆಯಲ್ಲಿ ತುಂಬಿದ್ದ ಸುಡು ಬಿಸಿ ನೀರು ಮೈಮೇಲೆ ಬಿದ್ದು ಮಗುವಿನ ಶೇ.30ರಷ್ಟು ದೇಹ ಸುಟ್ಟು ಹೋಗಿತ್ತು. ತಂದೆ ಹೊರಗೆ ಹೋಗಿದ್ದು, ತಾಯಿ ಮನೆಯಲ್ಲಿದ್ದಾಗ ಮಧ್ಯಾಹ್ನದ ವೇಳೆ ಹಾಲ್‌ನಲ್ಲಿ ಆಟವಾಡುತ್ತಿದ್ದ ಪ್ರಕೃತಿ ಪಾತ್ರೆಯಲ್ಲಿ ಸ್ನಾನಕ್ಕೆಂದು ಕಾಯಿಸಿ ಇರಿಸಿದ್ದ ಬಿಸಿ ನೀರನ್ನು ಮೈಮೇಲೆ ಸುರಿದುಕೊಂಡಿದೆ. ಗ್ರಾಮಸ್ಥರ ನೆರವಿನೊಂದಿಗೆ ಕರೆ ತಂದು ಮಗುವನ್ನು ಮೈಸೂರಿನ ಕೆ.ಆರ್. ಆಸ್ಪತ್ರೆಯ ಸುಟ್ಟ ಗಾಯಗಳ ಚಿಕಿತ್ಸಾ ವಿಭಾಗದಲ್ಲಿ ದಾಖಲಿಸಲಾಗಿತ್ತು. ಭಾನುವಾರ ತಡರಾತ್ರಿ ಪ್ರಕೃತಿ ಕೊನೆಯುಸಿರೆಳೆದಿದ್ದಾಳೆ ಎಂದು ಪ್ರಕರಣ ದಾಖಲಿಸಿಕೊಂಡಿರುವ ಜಯಪುರ ಠಾಣೆ ಪೊಲೀಸರು ತಿಳಿಸಿದ್ದಾರೆ. ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಮಗುವಿನ ದೇಹವನ್ನು ಇಂದು ಪೋಷಕರಿಗೆ ಒಪ್ಪಿಸಲಾಯಿತು.


ನಿಧನ



ಎನ್.ಆರ್. ರಾಚಯ್ಯ

ತಿ.ನರಸೀಪುರ, ಆ. 1– ತಾಲೂಕಿನ ನಿಲಸೋಗೆ ಗ್ರಾಮದ ಎನ್.ಆರ್.ರಾಚಯ್ಯ (61) ಶನಿವಾರ ನಿಧನರಾದರು. ಮೃತರು ಗ್ರಾಮದ ದಿವಂಗತ ಯಜಮಾನ್ ಮರಯ್ಯನವರ ಪುತ್ರರಾಗಿದ್ದು, ನಾಲ್ವರು ಸಹೋದರರು ಹಾಗೂ ಮೂವರು ಸಹೋದರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆಯು ಭಾನುವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸೋಮಶೇಖರ ಆರಾಧ್ಯ



ಮೈಸೂರು, ಆ.1–ಪಿರಿಯಾಪಟ್ಟಣ ತಾಲೂಕಿನ ಬೆಕ್ಕರೆ ಗ್ರಾಮದ ನಿವೃತ್ತ ಕಾಫಿ ಬೋರ್ಡ್ ಅಧಿಕಾರಿ ಹಾಗೂ ಮೈಸೂರಿನ ಶ್ರೀರಾಂಪುರ 2ನೇ ಹಂತ, ಬಿಇಎಂಎಲ್ ಬಡಾವಣೆ ನಿವಾಸಿ ಸೋಮಶೇಖರ ಆರಾಧ್ಯ (80) ಸೋಮವಾರ ನಿಧನರಾದರು. ಮೃತರು ಪತ್ನಿ ವಿಶಾಲಾಕ್ಷಿ, ಪುತ್ರಿ ಸುಮಾರಾಣಿ (ಕಾನೂನು ಮಾಪನಶಾಸ್ತ್ರ ವಿಭಾಗದ ಇನ್ಸ್‌ಪೆಕ್ಟರ್), ಪುತ್ರ ಹೇಮಂತ್‌ಕುಮಾರ್ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸೋಮವಾರ ವಿದ್ಯಾರಣ್ಯಪುರಂನ ವೀರಶೈವ ಲಿಂಗಾಯತ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಫಾರೂಕ್ ಪಾಷಾ



ಮೈಸೂರು, ಆ. 1– ಜೆ.ಕೆ. ಟೈರ್ಸ್ ಲಿಮಿಟೆಡ್‌ನ ನಿವೃತ್ತ ನೌಕರ ಹಾಗೂ ಮೈಸೂರಿನ ರಾಜೀವ್‌ನಗರ 1ನೇ ಹಂತದ ನಿವಾಸಿ ಫಾರೂಕ್ ಪಾಷಾ (67) ಭಾನುವಾರ ನಿಧನರಾದರು.

ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ನಮಾಜ್–ಇ–ಜನಾಜಾ ನಡೆದ ಬಳಿಕ ಟಿಪ್ಪು ಸರ್ಕಲ್‌ನಲ್ಲಿರುವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಎಸ್.ಎಂ. ಅರೋಕ್ಯದಾಸ್



ಮೈಸೂರು, ಆ. 1–ಮೈಸೂರಿನ ಲೂರ್ದ್‌ನಗರ ನಿವಾಸಿ ಎಸ್.ಎಂ. ಅರೋಕ್ಯದಾಸ್ (ರಾಜು) (65) ಸೋಮವಾರ ಹೃದಯಾಘಾತದಿಂದ ನಿಧನರಾದರು. ಮೃತರು ಮೂವರು ಪುತ್ರಿಯರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಅಂತ್ಯಕ್ರಿಯೆ ನಾಳೆ (ಆ.2) ಸಂಜೆ 4.30ಕ್ಕೆ ಮಹದೇವಪುರ ರಸ್ತೆಯಲ್ಲಿರುವ ಗಾಂಧಿನಗರದ ಕ್ಯಾಥೋಲಿಕ್ ಸೆಮಿಟ್ರಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಲಚ್ಚಿರ ಪ್ರಕಾಶ್ ಉತ್ತಯ್ಯ ನಿಧನ



ಮೈಸೂರು, ಆ.1– ಮೈಸೂರಿನ ಹೆಬ್ಬಾಳ್ 2ನೇ ಹಂತ (ಮಾದೇಗೌಡ ಸರ್ಕಲ್ ಬಳಿ) ನಿವಾಸಿ ಮಲಚ್ಚಿರ ಪ್ರಕಾಶ್ ಉತ್ತಯ್ಯ(62) ಸೋಮವಾರ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಮಂಗಳವಾರ) ಮಧ್ಯಾಹ್ನ 2 ಗಂಟೆಗೆ ಗೋಕುಲಂನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಾದಕ ವಸ್ತುಗಳಿಂದ ದೂರವಿರುವಂತೆ ವಿದ್ಯಾರ್ಥಿಗಳಿಗೆ ತಜ್ಞರ ಸಲಹೆ

ಯಾವುದೇ ಪ್ರಚೋದನೆಗೆ ಒಳಗಾಗದಂತೆ ಕಿವಿಮಾತು



ಮೈಸೂರು,ಆ.1(ಎಂಟಿವೈ)– ಮಾದಕ ವಸ್ತುಗಳ ಸೇವನೆಗೆ ಯುವ ಜನರನ್ನು ಪ್ರಚೋದಿಸುವ ಎಲ್ಲಾ ಸಂಚು ನಡೆಯುತ್ತಿರುವುದರಿಂದ ವಿದ್ಯಾರ್ಥಿ ಹಾಗೂ ಯುವ ಸಮೂಹ ಎಚ್ಚರದಿಂದ ಇರುವಂತೆ ಮೈಸೂರು ಮೆಡಿಕಲ್ ಕಾಲೇಜಿನ ಮನೋರೋಗ ವಿಭಾಗದ ಮುಖ್ಯಸ್ಥ ಡಾ.ರವೀಶ್ ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಜ ಪದವಿ ಕಾಲೇಜಿನ ಜೂನಿಯರ್ ಬಿಎ ಹಾಲ್‌ನಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕಾಲೇಜಿನ ಎನ್‌ಎಸ್‌ಎಸ್ ಘಟಕದ ಸಂಯುಕ್ತಾಶ್ರಯದಲ್ಲಿ ನಡೆದ ಡಾ.ಮಹಾಂತ ಶಿವಯೋಗಿಗಳ ಜನ್ಮದಿನದ ಹಿನ್ನೆಲೆಯಲ್ಲಿ ವ್ಯಸನ ಮುಕ್ತ ದಿನಾಚರಣೆ ಹಾಗೂ ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮ ಕುರಿತ ವಿಚಾರ ಸಂಕಿರಣದಲ್ಲಿ ಪ್ರಾತ್ಯಕ್ಷಿಕೆ ಮೂಲಕ ಉಪನ್ಯಾಸ ನೀಡಿದ ಅವರು, ಪ್ರಸ್ತುತ ಯುವ ಸಮುದಾಯದಲ್ಲಿ ಶೇ.23.4 ರಷ್ಟು ಮಾದಕ ವ್ಯಸನಿಗಳಾಗಿರುವ ಆತಂಕಕಾರಿ ಅಂಶ ಬೆಳಕಿಗೆ ಬಂದಿದೆ. ಇತ್ತೀಚಿನ ದಿನಗಳಲ್ಲಿ ಮದ್ಯಪಾನ ಮಾಡುವುದು, ವಿವಿಧ ಮಾದಕ ವಸ್ತುಗಳನ್ನು ಸೇವಿಸುವಂತೆ ಪ್ರಚೋದಿಸುವಂತಹ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಿದೆ. ಯುವಕರು ಬಿಯರ್ ಕುಡಿಯದಿದ್ದರೆ, ಸಿಗರೇಟ್ ಸೇದದಿದ್ದರೆ ನೀವು ವ್ಯರ್ಥ ಅನ್ನುವಂತಹ ಮಾತುಗಳನ್ನು ಆಡುವ ಮೂಲಕ ಪ್ರಚೋದನೆ ನೀಡಲಾಗುತ್ತಿದೆ. ಇಂತಹ ಪ್ರಚೋದನೆಯ ಮಾತುಗಳಿಗೆ ಕಿವಿಗೊಡಬೇಡಿ ಎಂದು ಸಲಹೆ ನೀಡಿದರು.

ಇತ್ತೀಚಿನ ದಿನಗಳಲ್ಲಿ ವಿದ್ಯಾರ್ಥಿ ಸಮೂಹ ಹಾಗೂ ಯುವಜನರು ಮೊಬೈಲ್ ಬಳಕೆಗೆ ದಾಸರಾಗಿದ್ದಾರೆ. ಎಲ್ಲಾ ಜಾಲತಾಣಗಳಲ್ಲೂ ಯುವ ಸಮುದಾಯ ಸಕ್ರಿಯವಾಗಿದೆ. ಮಿತಿ ಮೀರಿದ ಮೊಬೈಲ್ ಬಳಕೆಯನ್ನು ನಡವಳಿಕೆಯ ವ್ಯಸನಿಗಳೆನ್ನುತ್ತಾರೆ. ಮೆದುಳಿನ ಹತೋಟಿಯನ್ನು ಬೇರ್ಪಡಿಸುವುದಕ್ಕೆ ವ್ಯಸನ ಎನ್ನುತ್ತಾರೆ. ಈ ಹಿನ್ನೆಲೆಯಲ್ಲಿ ಮಾನಸಿಕ ಆರೋಗ್ಯಕ್ಕೆ ಕುತ್ತು ತರುವಂತಹ ಮದ್ಯಪಾನ, ಧೂಮಪಾನ, ಇನ್ನಿತರೆ ಮಾದಕ ವಸ್ತುಗಳ ಸೇವನೆಯಂತಹ ದುಶ್ಚಟಗಳಿಂದ ದೂರವಿರುವುದಕ್ಕೆ ದೃಢ ಮನಸ್ಸು ಮಾಡಬೇಕು. ಹುಟ್ಟಿದ ದಿನದಿಂದಲೇ ಯಾರೂ ವ್ಯಸನಿಗಳಾಗಿರುವುದಿಲ್ಲ. ಮದ್ಯ ಸೇವನೆಯೂ ಹಂತ ಹಂತವಾಗಿ ದೇಹವನ್ನು ನಾಶ ಮಾಡುತ್ತದೆ. ಅಲ್ಲದೇ ಆಯಸ್ಸನ್ನು ಕಡಿಮೆ ಮಾಡುತ್ತದೆ. ಒಂದು ಸಿಗರೇಟಿನಲ್ಲಿ 3000 ವಿಷಕಾರಕ ಅಂಶಗಳು ಇರುತ್ತವೆ ಎಂದು ತಿಳಿಸಿದರು.

ಇದಕ್ಕೂ ಮುನ್ನ ಕಾರ್ಯಕ್ರಮವನ್ನು ಉದ್ಘಾಟಿಸಿದ ಅಪರ ಜಿಲ್ಲಾಧಿಕಾರಿ ಡಾ.ಬಿ.ಎಸ್.ಮಂಜುನಾಥ್ ಸ್ವಾಮಿ ಮಾತನಾಡಿ, ವಿದ್ಯಾರ್ಥಿ ದೆಸೆಯಲ್ಲಿದ್ದಾಗ ಕೆಲವು ಸಹಪಾಠಿಗಳಿಂದ ವಿದ್ಯಾರ್ಥಿಗಳು ಹಾದಿ ತಪ್ಪುವ ಸನ್ನಿವೇಶಗಳು ಎದುರಾಗುತ್ತವೆ. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಯಾರನ್ನು ಸ್ನೇಹಿತರನ್ನಾಗಿ ಮಾಡಿಕೊಳ್ಳಬೇಕು ಎನ್ನುವುದನ್ನು ನಿರ್ಧರಿಸಬೇಕು. ಓದುವ ಚಟ ಇರುವವರೊಂದಿಗೆ ಉತ್ತಮ ಗೆಳೆತನ ಹೊಂದಬೇಕು. ಆದರೆ ಸಿಗರೇಟ್ ಸೇದುವ, ಮದ್ಯಪಾನ ಮಾಡುವ ಹಾಗೂ ಮಾದಕ ವಸ್ತು ಸೇವನೆ ಮಾಡುವವರ ಗೆಳೆತನವನ್ನು ತಿರಸ್ಕರಿಸಬೇಕು. ಆ ಮೂಲಕ ವಿದ್ಯಾರ್ಥಿಗಳು ದುಶ್ಚಟಗಳಿಗೆ ದಾಸರಾಗದೇ ವಿದ್ಯಾಭ್ಯಾಸದಲ್ಲಿ ಮಗ್ನರಾಗಿ ಉತ್ತಮ ಜೀವನ ರೂಪಿಸಿಕೊಳ್ಳುವತ್ತ ಗಮನ ಹರಿಸಬೇಕು ಎಂದು ಸಲಹೆ ನೀಡಿದರು.

ಸಮಾಜದ ಅಂಕುಡೊಂಕು ತಿದ್ದುವ ನಿಟ್ಟಿನಲ್ಲಿ ಮೊದಲಿನಿಂದಲೂ ಹಲವು ಶರಣರು ಶ್ರಮಿಸಿದ್ದಾರೆ. ಪ್ರಸ್ತುತ ಸಂದರ್ಭದಲ್ಲೂ ಹಲವು ಮಠಾಧೀಶರು ಸಮಾಜವನ್ನು ತಿದ್ದುವ ಕಾಯಕದಲ್ಲಿ ತೊಡಗಿಸಿಕೊಂಡಿದ್ದಾರೆ. ಇಂತಹ ಸಂದರ್ಭದಲ್ಲಿ ಡಾ. ಮಹಾಂತ ಶಿವಯೋಗಿಗಳು ಗ್ರಾಮೀಣ ಪ್ರದೇಶಗಳಿಗೆ ಹೋಗಿ ಜೋಳಿಗೆ ಹಿಡಿದುಕೊಂಡು ಹೋಗಿ ದುಶ್ಚಟವನ್ನು ಜೋಳಿಗೆಗೆ ಒಪ್ಪಿಸುವಂತೆ ಅರಿವು ಮೂಡಿಸುವ ಅಭಿಯಾನ ಆರಂಭಿಸಿದರು. ಮಹಾಂತ ಶರಣರ ಈ ಸಂದೇಶ ಪರಿಣಾಮಕಾರಿಯಾಗಿ ತಲುಪಿತು. ಇದರಿಂದ ಸಾಕಷ್ಟು ಮಂದಿ ತಮ್ಮಲ್ಲಿದ್ದ ದುಶ್ಚಟಗಳನ್ನು ಬಿಟ್ಟು ಮನಃ ಪರಿವರ್ತನೆ ಮಾಡಿಕೊಂಡರು. ದುರ್ಜನರ ಸಹವಾಸ ದುಶ್ಚಟಗಳಿಗೆ ಎಡೆಮಾಡಿಕೊಡುತ್ತದೆ. ಒಳ್ಳೆಯ ಸ್ನೇಹಿತರನ್ನು ಹೊಂದಬೇಕು. ಮನಸ್ಸಿನ ಮೇಲೆ ಹತೋಟಿಯಲ್ಲಿಟ್ಟುಕೊಳ್ಳಬೇಕು. ನಿಮ್ಮ ಭವಿಷ್ಯ ನಿಮ್ಮ ಕೈಯ್ಯಲ್ಲಿದೆ ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಮಹಾರಾಜ ಕಾಲೇಜಿನ ಪ್ರಾಂಶುಪಾಲರಾದ ಡಾ.ಅನಿತಾ ವಿಮಲಾ ಬ್ರಾಗ್ಸ್ ಮಾತನಾಡಿ, ಯಾವುದೇ ವಿಚಾರದಲ್ಲೂ ಮಹಾರಾಜ ಕಾಲೇಜು ವಿಭಿನ್ನವಾಗಿರುತ್ತದೆ. ಕಾಲೇಜಿನಲ್ಲಿ 4,100 ವಿದ್ಯಾರ್ಥಿಗಳು, 500 ಸಿಬ್ಬಂದಿಗಳಿದ್ದಾರೆ. ಆದರೆ, ಇವರಲ್ಲಿ ದುಶ್ಚಟಕ್ಕೆ ಒಳಗಾಗಿರುವವರ ಸಂಖ್ಯೆ ತೀರಾ ಕಡಿಮೆಯಾಗಿದೆ. ಪುರುಷ ಬೋಧಕ ಸಿಬ್ಬಂದಿ ಸಹ ಸಿಗರೇಟ್ ಸೇದುವುದಕ್ಕೆ ಹಿಂದೇಟು ಹಾಕುತ್ತಾರೆ. ಎಲ್ಲಿ ನಾವು ಸಿಗರೇಟು ಸೇದುವುದನ್ನು ವಿದ್ಯಾರ್ಥಿಗಳು ನೋಡಿ ಅನುಕರಣೆ ಮಾಡುತ್ತಾರೆಂಬ ಕಾಳಜಿಯಿಂದ ಬೋಧಕ ಸಿಬ್ಬಂದಿಗಳು ಧೂಮಪಾನ ಮಾಡದಂತಹ ಪರಿವರ್ತನೆಯ ಗುಣ ಮಹಾರಾಜ ಕಾಲೇಜಿನಲ್ಲಿ ಮೂಡಿದೆ. ಆದರೆ ಜಾಹೀರಾತುಗಳಲ್ಲಿ ಮಾದಕ ವಸ್ತುಗಳ ಬಳಕೆ ಸಂಬಂಧ ವರ್ಣರಂಜಿತ ಜಾಹೀರಾತು ಯುವಜನರ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಯುವ ವಯಸ್ಸಿನವರು ಕೆಟ್ಟ ವಿಷಯಗಳಿಗೆ ಆಕರ್ಷಿತರಾಗುವುದು ಹೆಚ್ಚು. ಜಾಹೀರಾತುಗಳಿಂದ ಹೆಚ್ಚು ಪ್ರಭಾವಿತರಾಗುತ್ತೀರಿ. ದುಶ್ಚಟಗಳಿಗೆ ಯುವಜನತೆ ಒಳಗಾಗಬಾರದು ತಾವು ವಿದ್ಯಾವಂತರಾಗಿದ್ದು ಸ್ವ ಇಚ್ಛೆಯಿಂದ ಉತ್ತಮ ಅಭ್ಯಾಸಗಳನ್ನು ರೂಪಿಸಿಕೊಳ್ಳಬೇಕು ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಕಾಲೇಜಿನ ಎನ್‌ಎಸ್‌ಎಸ್ ಘಟಕದ ಮುಖ್ಯಸ್ಥ ಸುರೇಶ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕ ಟಿ.ಕೆ.ಹರೀಶ್, ಜಿಲ್ಲಾ ಸರ್ವೇಕ್ಷಣಾಧಿಕಾರಿ ಡಾ.ಮಹದೇವ ಪ್ರಸಾದ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಮಳೆಯಿಂದ ಹಾನಿಗೀಡಾದ ರಸ್ತೆ, ಸೇತುವೆ ದುರಸ್ತಿಗೆ 50 ಕೋಟಿ ಅನುದಾನಕ್ಕೆ ಮನವಿ

● ಕಾಡಾ ಅಧ್ಯಕ್ಷ ನಿಜಗುಣರಾಜು ಮಾಹಿತಿ ● ಇನ್ನೆರಡು ದಿನದಲ್ಲಿ ಸರ್ಕಾರಕ್ಕೆ ಪ್ರಸ್ತಾವನೆ



ಮೈಸೂರು, ಆ.1(ಎಂಕೆ)– ಮಳೆ ಹಾಗೂ ಪ್ರವಾಹದಿಂದ ಹಾನಿಗೀಡಾಗಿರುವ ಸೇತುವೆಗಳು, ರಸ್ತೆಗಳ ದುರಸ್ತಿ ಕಾಮಗಾರಿಗೆ 50 ಕೋಟಿ ರೂ. ಅನುದಾನ ನೀಡುವಂತೆ ಮುಖ್ಯಮಂತ್ರಿಗಳಿಗೆ ಮನವಿ ಮಾಡಲಾಗುವುದು ಎಂದು ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರದ (ಕಾಡಾ) ಅಧ್ಯಕ್ಷ ಜಿ.ನಿಜಗುಣರಾಜು ತಿಳಿಸಿದರು.

ಮೈಸೂರಿನ ಕಾಡಾ ಕಚೇರಿಯಲ್ಲಿ ಸೋಮವಾರ ಸುದ್ದಿಗೋಷ್ಠಿ ನಡೆಸಿದ ಅವರು, ಪ್ರಾಧಿಕಾರದ ವ್ಯಾಪ್ತಿಗೆ ಮೈಸೂರು ಮತ್ತು ತುಮಕೂರು ವಿಭಾಗ ಹಾಗೂ ಮಂಡ್ಯ ಮತ್ತು ಚನ್ನರಾಯಪಟ್ಟಣ ಉಪ ವಿಭಾಗ ಸೇರಲಿದ್ದು, ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಿ ದುರಸ್ತಿಯಾಗಬೇಕಾದ ಕಾಮಗಾರಿಗಳ ಪಟ್ಟಿ ತಯಾರಿಸಲಾಗುತ್ತಿದೆ. ಇನ್ನೆರಡು ದಿನಗಳಲ್ಲಿ ಕಾಮಗಾರಿಗಳ ಹಾಗೂ ಅಂದಾಜು ವೆಚ್ಚದ ಪಟ್ಟಿ ಸಿದ್ಧಪಡಿಸಿ, ಮುಖ್ಯಮಂತ್ರಿಗಳು ಹಾಗೂ ಜಲಸಂಪನ್ಮೂಲ ಸಚಿವರಿಗೆ ಹೆಚ್ಚಿನ ಅನುದಾನ ಕೋರಿ ಮನವಿ ಮಾಡಲಾಗುವುದು ಎಂದರು.

ಕಡಿಮೆ ಅನುದಾನ: ಕಳೆದ ಎರಡು ವರ್ಷಗಳಿಂದ ಕೊರೊನಾ ಕಾರಣದಿಂದ ಕಡಿಮೆ ಅನುದಾನ ನೀಡಲಾಗಿದೆ. ಬಿಡುಗಡೆಯಾದ ಅನುದಾನಕ್ಕೆ ಅನುಗುಣವಾಗಿ ಕಾಮಗಾರಿಗಳ ಪಟ್ಟಿ ಸಿದ್ಧಪಡಿಸಿ ಸಲ್ಲಿಸಲಾಗಿದೆ. ನೀರಾವರಿ ಇಲಾಖೆಯಲ್ಲಿ ಎಷ್ಟೇ ಕಾಮಗಾರಿಗಳನ್ನು ಕೈಗೊಂಡರೂ ಕಡಿಮೆಯೇ ಎಂದ ಅವರು, ಕಾಡಾ ವ್ಯಾಪ್ತಿಗೆ 7 ಜಿಲ್ಲೆಗಳಿಂದ 19 ಜಲಾಶಯಗಳು ಒಳಪಡುತ್ತವೆ ಎಂದು ತಿಳಿಸಿದರು.

ಈಗ 10 ಕೋಟಿ ರೂ. ಅನುದಾನ ಬಂದಿದ್ದು, ತಾಲೂಕುವಾರು ಕೆಲಸ ಆಗಬೇಕಿದೆ. ಜಲಾನಯನ ಪ್ರದೇಶದಲ್ಲಿ ಹೆಚ್ಚು ಮಳೆ ಆಗಿರುವುದರಿಂದ ತ್ವರಿತಗತಿಯಲ್ಲಿ ಕೆಲಸ ಮಾಡಬೇಕಿದೆ. ರೈತರು ತಿರುಗಾಡುವ ರಸ್ತೆಗಳು, ಎತ್ತಿನಗಾಡಿ ರಸ್ತೆಗಳು ಕಾಡಾ ವ್ಯಾಪ್ತಿಗೆ ಬರುತ್ತವೆ. ನೀರು ಬಳಕೆದಾರರ ಸಂಘದೊಡನೆ ಸಮನ್ವಯ ಸಾಧಿಸುವುದು ಮತ್ತು ನೀರು ಬಿಡುವ ಕುರಿತು ಅಗತ್ಯ ಕ್ರಮ ಕೈಗೊಳ್ಳುತ್ತೇವೆ ಎಂದು ಹೇಳಿದರು.

ಡ್ಯಾಂಗಳಿಗೆ ಭೇಟಿ: ಅಧಿಕಾರ ವಹಿಸಿಕೊಂಡ ಬಳಿಕ ಎರಡ್ಮೂರು ಡ್ಯಾಂಗಳಿಗೆ ಭೇಟಿ ನೀಡಿದ್ದೇನೆ. ಆತ್ಮಸಾಕ್ಷಿಯಾಗಿ ನ್ಯಾಯ ಒದಗಿಸುವ ಕೆಲಸ ಮಾಡುತ್ತೇನೆ. ವಿಧಾನಸಭೆ ಚುನಾವಣೆ ಹತ್ತಿರವಿದ್ದು, ಜನರ ನಿರೀಕ್ಷೆ ಹೆಚ್ಚಿರುತ್ತದೆ. ಆದ್ದರಿಂದ ಶಕ್ತಿ ಮೀರಿ ಕೆಲಸ ಮಾಡುತ್ತೇನೆ. ಕಾಡಾ ಅಧ್ಯಕ್ಷನಾಗಿ ಅಧಿಕಾರವಹಿಸಿಕೊಂಡ ನನಗೆ ಒಂದು ಕನಸಿದೆ. ಅದನ್ನು ನನಸು ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಬಸವಣ್ಣನವರ ಕಾಯಕವೇ ಕೈಲಾಸ ಎಂಬ ಮಾತಿನಂತೆ ಕೆಲಸ ಮಾಡುತ್ತೇನೆ. ಬದುಕಲು ರಾಜಕೀಯಕ್ಕೆ ಬರಬೇಡಿ, ಮತ್ತೊಬ್ಬರ ಬದುಕು ಹಸನು ಮಾಡಲು ಬನ್ನಿ ಎಂಬ ಅಂಬೇಡ್ಕರ್ ಮಾತನ್ನು ಅಳವಡಿಸಿಕೊಂಡು ಕೆಲಸಕ್ಕೆ ಹೆಚ್ಚು ಆದ್ಯತೆ ನೀಡುತ್ತೇನೆ ಎಂದರು.

ದೂರುಗಳು ದಾಖಲು: ಕಾವೇರಿ ನೀರಾವರಿ ನಿಗಮಕ್ಕೆ ಸಂಬಂಧಿಸಿದ ದೂರುಗಳು ಕೂಡ ನಮ್ಮ ಬಳಿ ದಾಖಲಾಗುತ್ತಿದ್ದು, ಅವುಗಳನ್ನು ಸಂಬಂಧಿಸಿದವರಿಗೆ ಕಳುಹಿಸಿಕೊಡುತ್ತಿದ್ದೇವೆ. ಕೆಆರ್‌ಎಸ್ ಸುತ್ತಮುತ್ತ ನಡೆದ ಟ್ರಯಲ್ ಬ್ಲಾಸ್ಟ್ ವಿಚಾರ ಮುಖ್ಯಮಂತ್ರಿ ಹಾಗೂ ಕೇಂದ್ರ ಗೃಹಮಂತ್ರಿಗಳ ಗಮನಕ್ಕೂ ಬಂದಿದ್ದು, ಸೂಕ್ತ ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ತಿಳಿಸಿದರು.




ಮೈಸೂರಿಗೆ ಕಾರ್ಯಕ್ರಮ ನಿಮಿತ್ತ ಆಗಮಿಸಿದ್ದ ಕೇಂದ್ರ ಮಾಜಿ ಸಚಿವ ಡಾ.ಸುಬ್ರಮಣಿಯನ್ ಸ್ವಾಮಿ ಅವರನ್ನು ಕೊಡವ ನ್ಯಾಷನಲ್ ಕೌನ್ಸಿಲ್(ಸಿಎನ್‌ಸಿ) ಅಧ್ಯಕ್ಷ ಎನ್.ಯು.ನಾಚಪ್ಪ ನೇತೃತ್ವದ ಕೊಡವ ನಿಯೋಗ ಭೇಟಿ ಮಾಡಿ, ನವೆಂಬರ್ 26ರಂದು ನಡೆಯುವ 'ಸಂವಿಧಾನ ದಿನ' ಹಾಗೂ ಸಿಎನ್‌ಸಿಯ 32ನೇ 'ಕೊಡವ ರಾಷ್ಟ್ರೀಯ ದಿನ' ಆಚರಣೆಯಲ್ಲಿ ಭಾಗವಹಿಸುವಂತೆ ಮನವಿ ಮಾಡಿತು. ಪ್ರಮುಖರಾದ ಕಲಿಯಂಡ ಪ್ರಕಾಶ್, ಲೆಫ್ಟಿನೆಂಟ್ ಕರ್ನಲ್ ಬಿ.ಎಂ.ಪಾರ್ವತಿ(ನಿವೃತ್ತ), ಪುಲ್ಲೇರ ಸ್ವಾತಿ ಕಾಳಪ್ಪ, ಶ್ರೀಮತಿ ಅಪ್ಪಾರಂಡ ರೀನಾ ಪೂವಣ್ಣ, ಪುಲ್ಲೇರ ಕಾಳಪ್ಪ, ಅರೆಯಡ ಗಿರೀಶ್, ಚಂಬಂಡ ಜನತ್, ಅಪ್ಪರಂಡ್ ಪೂವಣ್ಣ, ಬೇಪಡಿಯಂಡ ದಿನು, ಬೇಪಡಿಯಂಡ ಬಿದ್ದಪ್ಪ ನಿಯೋಗದಲ್ಲಿದ್ದರು. ಸಿಎನ್‌ಸಿಯ ನ್ಯಾಯಸಮ್ಮತ ಬೇಡಿಕೆಗಳನ್ನು ಡಾ.ಸುಬ್ರಮಣಿಯನ್ ಸ್ವಾಮಿ ಬೆಂಬಲಿಸಿ, ಸೂಕ್ತ ಮಾರ್ಗದರ್ಶನ ನೀಡುತ್ತಾ ಬಂದಿದ್ದಾರೆ.

ಪ್ಲಾಸ್ಟಿಕ್ ವಸ್ತು ವಶ; 95 ಸಾವಿರ ದಂಡ ವಸೂಲಿ



ಮೈಸೂರು, ಆ.1(ಎಸ್‌ಬಿಡಿ)– ಮೈಸೂರು ನಗರದಲ್ಲಿ ಪ್ಲಾಸ್ಟಿಕ್ ವಿರುದ್ಧ ಕಾರ್ಯಾಚರಣೆ ಮುಂದುವರೆದಿದ್ದು, ಸೋಮವಾರ ಅಪಾರ ಪ್ರಮಾಣದ ಪ್ಲಾಸ್ಟಿಕ್ ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿದೆ. ನಗರ ಪಾಲಿಕೆ ಹೆಚ್ಚುವರಿ ಉಪ ಆಯುಕ್ತೆ ಎಂ.ಜೆ.ರೂಪಾ ಅವರ ನೇತೃತ್ವದಲ್ಲಿ ಅಧಿಕಾರಿಗಳು ಹಾಗೂ ಸಿಬ್ಬಂದಿ ತಂಡಗಳು ವಾಣಿಜ್ಯ ಮಳಿಗೆಗಳ ಮೇಲೆ ದಾಳಿ ನಡೆಸಿ, 7 ಕ್ವಿಂಟಾಲ್‌ಗೂ ಹೆಚ್ಚು ಪ್ರಮಾಣದ ಪ್ಲಾಸ್ಟಿಕ್ ವಸ್ತು ವಶಪಡಿಸಿಕೊಂಡು, ದಾಸ್ತಾನು ಮಾಡಿದ್ದವರಿಂದ 95,100 ರೂ. ದಂಡ ಸಂಗ್ರಹಿಸಿದ್ದಾರೆ.

ಪಾಲಿಸ್ಟಿರೀನ್, ವಿಸ್ತರಿತ ಪಾಲಿಸ್ಟೀರಿನ್ ಸೇರಿದಂತೆ ಏಕ ಬಳಕೆ ಪ್ಲಾಸ್ಟಿಕ್(ಸಿಂಗಲ್ ಯೂಸ್ ಪ್ಲಾಸ್ಟಿಕ್) ತಯಾರಿಕೆ, ಆಮದು, ಸಂಗ್ರಹಣೆ, ವಿತರಣೆ, ಮಾರಾಟ ಮತ್ತು ಬಳಕೆಯನ್ನು ಜು.1ರಿಂದ ಜಾರಿಗೆ ಬರುವಂತೆ ನಿಷೇಧಿಸಲಾಗಿದ್ದು, ಮೈಸೂರು ನಗರ ಪಾಲಿಕೆ ವ್ಯಾಪ್ತಿಯಲ್ಲಿ ಜು.18ರಿಂದ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಪ್ರಯತ್ನ ನಡೆದಿದೆ. ಅಂದಿನಿಂದ ನಿರಂತರ ಕಾರ್ಯಾಚರಣೆ ನಡೆಸುತ್ತಿರುವ ಪಾಲಿಕೆ ತಂಡ, ಇಲ್ಲಿಯವರೆಗೆ ಅಪಾರ ಪ್ರಮಾಣದ ವಿವಿಧ ರೀತಿಯ ಪ್ಲಾಸ್ಟಿಕ್ ವಸ್ತುಗಳನ್ನು ವಶಕ್ಕೆ ಪಡೆದು, ಒಟ್ಟು 11.17 ಲಕ್ಷ ರೂ. ದಂಡ ಹಾಕಲಾಗಿದೆ.



61ನೇ ವರ್ಷದ ಹುಟ್ಟುಹಬ್ಬ ಆಚರಿಸಿಕೊಂಡ ಕೆಪಿಸಿಸಿ ಕಾರ್ಯಾಧ್ಯಕ್ಷರೂ ಆದ ಮಾಜಿ ಸಂಸದ ಆರ್.ಧ್ರುವನಾರಾಯಣ ಅವರನ್ನು ಕಾಂಗ್ರೆಸ್ ಮುಖಂಡ ಹಿನಕಲ್ ಪ್ರಕಾಶ್, ಜಿಲ್ಲಾ ಭಗೀರಥ ಉಪ್ಪಾರ ಸಂಘದ ಅಧ್ಯಕ್ಷ ಎಸ್.ಯೋಗೀಶ, ಕಾರ್ಯಾಧ್ಯಕ್ಷ ಮಹದೇವ, ನಾಗರಾಜು, ಮಾಡ್ರಳ್ಳಿ ಸಿದ್ದಪ್ಪ ಇನ್ನಿತರರು ಅಭಿನಂದಿಸಿ, ಶುಭಾಶಯ ಕೋರಿದರು.



ಪೊಲೀಸ್ ಸೇವೆಯಿಂದ ನಿವೃತ್ತಿಯಾದ ಡಿವೈಎಸ್ಪಿ ಜಿ.ಎನ್.ಮೋಹನ್ ಅವರನ್ನು ಆದಿಚುಂಚನಗಿರಿ ಮಹಾ ಸಂಸ್ಥಾನದ ಮೈಸೂರು ಶಾಖಾ ಮಠದ ವತಿಯಿಂದ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿ, ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ಪ್ರಧಾನ ಕಾರ್ಯದರ್ಶಿ ಚೇತನ್, ನಿರ್ದೇಶಕರಾದ ಒಂಟಿಕೊಪ್ಪಲ್ ಗುರುರಾಜ್, ವಿನೋದ್ ಉಪಸ್ಥಿತರಿದ್ದರು.

ವಿಜಯನಗರ 3ನೇ ಹಂತದ ಎಫ್ ಬ್ಲಾಕ್ ನಿವಾಸಿಗಳ ಸಮಸ್ಯೆ ಶೀಘ್ರ ಪರಿಹಾರ

● ಮುಡಾದಿಂದ ಚರಂಡಿ ಕಾಮಗಾರಿ ಪ್ರಾರಂಭ ● ದುರ್ವಾಸನೆ, ಸೊಳ್ಳೆ ಕಾಟದಿಂದ ಪಾರು



ಮೈಸೂರು, ಆ.1(ಎಸ್‌ಬಿಡಿ)– ಮೈಸೂರಿನ ವಿಜಯನಗರ 3ನೇ ಹಂತ, 'ಎಫ್' ಬ್ಲಾಕ್‌ನಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಈ ಮೂಲಕ ಬಹುವರ್ಷದ ಚರಂಡಿ ಸಮಸ್ಯೆಗೂ ಶಾಶ್ವತ ಪರಿಹಾರ ಸಿಕ್ಕಿದಂತಾಗಿದೆ.

ಹಿನಕಲ್ ಫ್ಲೈ ಓವರ್ ಬಳಿ ವಿಜಯನಗರ 3ನೇ ಹಂತ 'ಎಫ್' ಬ್ಲಾಕ್‌ನ ಆಶ್ರಮ ರಸ್ತೆಯಲ್ಲಿ ಕಸ ರಾಶಿ ರಾಶಿ ಬಿದ್ದಿತ್ತು. ಇಲ್ಲಿನ ತಗ್ಗು ಪ್ರದೇಶದಲ್ಲಿ ಚರಂಡಿಯೂ ಇಲ್ಲದ ಕಾರಣ ಮಳೆ ಬಂದಾಗಲೆಲ್ಲಾ ಕೆರೆಯಂತಾಗುತ್ತಿತ್ತು. ಕಸ ಕೊಳೆತು ಸುತ್ತಮುತ್ತಲ ಪ್ರದೇಶ ಗಬ್ಬೆದ್ದು ನಾರುತ್ತಿತ್ತು. ಸೊಳ್ಳೆ ಕಾಟ ವಿಪರೀತವಾಗಿ ರೋಗ ಹರಡುವ ಭೀತಿ ನಿರ್ಮಾಣವಾಗಿತ್ತು. ಜೋರು ಮಳೆಯಾದರೆ ಮನೆಗಳಿಗೆ ನೀರು ನುಗ್ಗುವ ದುಸ್ಥಿತಿ ಎದುರಾಗಿತ್ತು.

ಈ ಬಗ್ಗೆ ಹಲವು ಬಾರಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ದೂರು ನೀಡಿದರೂ ಪ್ರಯೋಜನವಾಗಿಲ್ಲ ಎಂದು ನಿವಾಸಿಗಳು ಬೇಸರ ವ್ಯಕ್ತಪಡಿಸಿದ್ದರು. 'ಎಫ್' ಬ್ಲಾಕ್‌ನ ಸಮಸ್ಯೆಯ ಗಂಭೀರತೆ ಬಗ್ಗೆ 'ಮೈಸೂರು ಮಿತ್ರ' ಮೇ26ರ ಸಂಚಿಕೆಯಲ್ಲಿ 'ವಿಜಯನಗರ 3ನೇ ಹಂತದ ಎಫ್–ಬ್ಲಾಕ್‌ನಲ್ಲಿ ಕಸದ ರಾಶಿ, ಮಳೆ ಬಂದರೆ ದೊಡ್ಡ ಕೆರೆಯಂತೆ ನಿಲ್ಲುವ ಯುಜಿಡಿ ನೀರು: ದುರಸ್ತಿಗೆ ನಿವಾಸಿಗಳ ಒತ್ತಾಯ' ಶೀರ್ಷಿಕೆಯಡಿ ಸಚಿತ್ರ ವರದಿ ಪ್ರಕಟಿಸಿತ್ತು.

ಸದ್ಯ ತಡವಾಗಿಯಾದರೂ ಮುಡಾ ಎಚ್ಚೆತ್ತುಕೊಂಡಿದ್ದು, ಕಸದ ರಾಶಿಯನ್ನು ತೆರವುಗೊಳಿಸಿ ತಗ್ಗು ಪ್ರದೇಶದಲ್ಲಿ ಹೊಸದಾಗಿ ಚರಂಡಿ ನಿರ್ಮಾಣ ಮಾಡುವ ಕಾಮಗಾರಿ ಕೈಗೆತ್ತಿಕೊಂಡಿದ್ದಾರೆ. ಮುಡಾ ಎಇಇ ಕೆ.ಆರ್.ಮಹೇಶ್ ಸ್ಥಳದಲ್ಲಿದ್ದು ವೈಜ್ಞಾನಿಕವಾಗಿ ಚರಂಡಿ ನಿರ್ಮಿಸುವ ನಿಟ್ಟಿನಲ್ಲಿ ಸೂಕ್ತ ಮಾರ್ಗದರ್ಶನ ನೀಡಿದ್ದಾರೆ. ಈ ವೇಳೆ ಎಇ ಹರಿಶಂಕರ್, ಬಿ.ಎನ್.ಮೋಹನ್ ಕುಮಾರ್ ಸೇರಿದಂತೆ ಸ್ಥಳೀಯ ಮುಖಂಡ ಉಪಸ್ಥಿತರಿದ್ದರು.

ಈ ಸಂಬಂಧ ಎಇಇ ಕೆ.ಆರ್.ಮಹೇಶ್ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯಿಸಿ, ವಿಜಯನಗರ 3ನೇ ಹಂತ ಎಫ್–ಬ್ಲಾಕ್‌ನಲ್ಲಿ ಚರಂಡಿ ಸಂಪೂರ್ಣ ಮುಚ್ಚಿ ಹೋಗಿತ್ತು. ಬಹಳ ವರ್ಷಗಳಿಂದ ಶಿಲ್ಟ್ ತೆಗೆಯದ ಕಾರಣ ಚರಂಡಿಯೇ ಕಾಣದಂತಾಗಿತ್ತು. ಪರಿಣಾಮ ನೀರು ಹರಿವು ಸಾಧ್ಯವಾಗದೆ ತಗ್ಗು ಪ್ರದೇಶದಲ್ಲಿ ನಿಲ್ಲುತ್ತಿತ್ತು. ಇದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆಯಾಗಿತ್ತು. ಸದ್ಯ 'ಒಂದೇ ಬಾರಿ ಕ್ರಮ(ಒನ್ ಟೈಂ ಮೆಷರ್)' ಕಾರ್ಯಕ್ರಮದ ಭಾಗವಾಗಿ ಎಫ್–ಬ್ಲಾಕ್‌ನ ಎಲ್ಲಾ ರಸ್ತೆಗಳ ಅಭಿವೃದ್ಧಿ, ಯುಜಿಡಿ, ಹೊಸದಾಗಿ ಸುಮಾರು 200 ಮೀಟರ್ ಚರಂಡಿ ನಿರ್ಮಾಣ, ಕಿರು ಸೇತುವೆ ಸೇರಿ ಸುಮಾರು 3.45 ಕೋಟಿ ರೂ. ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ಅಲ್ಲದೆ ವಿಜಯನಗರ 3ನೇ ಹಂತದ 'ಎ' ಬ್ಲಾಕ್‌ನಿಂದ 'ಜಿ' ಬ್ಲಾಕ್‌ವರೆಗೂ ರಸ್ತೆ ಅಭಿವೃದ್ಧಿ ಸೇರಿದಂತೆ ಹಲವು ಕಾಮಗಾರಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಕಾಳೆ ತಿಮ್ಮನಹಳ್ಳಿಯಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟನೆ

200 ಸಹಕಾರ ಸಂಘದ ಸ್ಥಾಪನೆ ಗುರಿ: ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ



ಪಿರಿಯಾಪಟ್ಟಣ, ಆ.1– ತಾಲೂಕಿನಲ್ಲಿ ಈಗಾಗಲೇ 186 ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು, ಮುಂದಿನ ದಿನಗಳಲ್ಲಿ 200 ಸಹಕಾರ ಸಂಘದ ಸ್ಥಾಪನೆ ಗುರಿ ಹೊಂದಿದ್ದೇನೆ ಎಂದು ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ತಿಳಿಸಿದರು.

ತಾಲೂಕಿನ ಕಾಳೆ ತಿಮ್ಮನಹಳ್ಳಿಯಲ್ಲಿ ನೂತನ ಹಾಲು ಉತ್ಪಾದಕರ ಸಹಕಾರ ಸಂಘ ಉದ್ಘಾಟಿಸಿ ಮಾತನಾಡಿದ ಅವರು, ಈಗಾಗಲೇ ಮೈಮುಲ್ ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಹಾಲಿಗೆ 29 ರೂ. ನೀಡುತ್ತಿದ್ದು, ಪ್ರತಿವರ್ಷ ಒಕ್ಕೂಟಕ್ಕೆ ಅಂದಾಜು 29 ಕೋಟಿ ನಷ್ಟವಾಗುತ್ತಿದೆ. ನನ್ನ ಅವಧಿಯಲ್ಲಿ ನಷ್ಟದ ಪ್ರಮಾಣ ಕಡಿಮೆಯಾಗಿದ್ದು, ಮುಂದಿನ ದಿನಗಳಲ್ಲಿ ಒಕ್ಕೂಟದ ಆದಾಯ ಗಣನೀಯವಾಗಿ ಹೆಚ್ಚಿಸುವಲ್ಲಿ ನಾನು ಪ್ರಯತ್ನಿಸುತ್ತಿದ್ದೇನೆ ಎಂದರು.

ರೈತರು ಸಂಘಕ್ಕೆ ಗುಣಮಟ್ಟದ ಹಾಲನ್ನು ಪೂರೈಕೆ ಮಾಡುವುದರಿಂದ ನಿಮ್ಮ ಆರ್ಥಿಕ ಮಟ್ಟ ಹೆಚ್ಚುವ ಜೊತೆಗೆ ಒಕ್ಕೂಟದ ಆರ್ಥಿಕ ವ್ಯವಸ್ಥೆ ಸುಧಾರಣೆಯಾಗುತ್ತದೆ. ಈಗಾಗಲೇ ತಾಲೂಕಿನ ಎಲ್ಲಾ ಸಹಕಾರ ಸಂಘಗಳಲ್ಲಿ ಕಂಪ್ಯೂಟರ್ ಬಳಕೆಗೆ ಒಕ್ಕೂಟದಿಂದ ಸಹಕಾರ ನೀಡುತ್ತಿದ್ದು, ಮುಂದಿನ ವರ್ಷದಿಂದ ನಿಮ್ಮ ಸಂಘಕ್ಕೂ ಒಕ್ಕೂಟದಿಂದ ಎಲ್ಲಾ ರೀತಿಯ ಆರ್ಥಿಕ ಸಹಾಯ ನೀಡುವುದಾಗಿ ಭರವಸೆ ನೀಡಿದರು.

ಈ ಹಿಂದೆ ಒಕ್ಕೂಟ ಪ್ರತಿಯೊಬ್ಬ ರೈತನಿಗೆ ನೀಡುತ್ತಿದ್ದ 30 ಸಾವಿರ ರೂ.ಗಳ ವಿಮಾ ಯೋಜನೆಯನ್ನು ಈಗ 1 ಲಕ್ಷಕ್ಕೆ ಏರಿಕೆ ಮಾಡಲಾಗಿದೆ. ಹಸುಗಳ ವಿಮೆ ಮಾಡಿಸಲು 50 ರಷ್ಟು ಹಣವನ್ನು ರೈತರು ಭರಿಸಿದರೆ, ಉಳಿಕೆ 50 ರಷ್ಟನ್ನು ಒಕ್ಕೂಟ ಕಟ್ಟಿ ಕೊಡುತ್ತದೆ. ಇದನ್ನು 3 ವರ್ಷಕ್ಕೆ ವಿಸ್ತರಿಸಿರುವುದಾಗಿ ತಿಳಿಸಿದರು.

ಒಕ್ಕೂಟದಿಂದ ಹುಲ್ಲು ಕಟಾವು ಮಾಡುವ ಯಂತ್ರ, ಮ್ಯಾಟ್ ಸೇರಿದಂತೆ ಹಲವು ಸೌಲಭ್ಯ ದೊರೆಯುತ್ತಿದ್ದು, ರೈತರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು. ತಾಲೂಕಿನ ಎರಡೂವರೆ ಸಾವಿರ ರೈತರಿಗೆ ಹಸು ವಿತರಣೆ ಮಾಡುವ ಯೋಜನೆ ಮುಂದಿದ್ದು, ತಾಲೂಕಿನ ಪಂಚವಳ್ಳಿ ಗ್ರಾಮದ ಬಳಿ 12.5 ಎಕರೆ ಪ್ರದೇಶದಲ್ಲಿ 100 ಕೋಟಿ ರೂ. ವೆಚ್ಚದಲ್ಲಿ ಫೀಡ್ಸ್ ಫ್ಯಾಕ್ಟರಿ ಯೋಜನೆ ಸದ್ಯದಲ್ಲೇ ಲೋಕಾರ್ಪಣೆಯಾಗಲಿದೆ ಎಂದರು.

ಸಮಾರಂಭದಲ್ಲಿ ಕಾಳೆ ತಿಮ್ಮನಹಳ್ಳಿ ಹಾಲು ಸಹಕಾರ ಸಂಘದ ಅಧ್ಯಕ್ಷ ಬಾಲಕೃಷ್ಣ, ಕಾರ್ಯದರ್ಶಿ ದೇವಿಪ್ರಸಾದ್, ಮೈಮುಲ್ ನಿರ್ದೇಶಕ ಎಚ್.ಡಿ. ರಾಜೇಂದ್ರ, ಮುತ್ತೂರು ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಶಿವಾಜಿ, ಮುಖಂಡರಾದ ನಂದೀಶ್, ಜಗದೀಶ್, ಚೆಂಗಪ್ಪ, ಸತೀಶ್, ಗಿರೀಶ್, ಅಸ್ಲಾಂ ಪಾಷಾ ಸೇರಿದಂತೆ ಗ್ರಾಮದ ಮುಖಂಡರಿದ್ದರು.

ರೋಟರಿ ಅಧ್ಯಕ್ಷರಾಗಿ ಸಿ.ವೈ.ಗಣೇಶ್ ಲಾರ್ಡ್ ಪದಗ್ರಹಣ



ಹೆಚ್.ಡಿ.ಕೋಟೆ, ಆ.1– 2022–23ನೇ ಸಾಲಿನ ರೋಟರಿ ಅಧ್ಯಕ್ಷರಾಗಿ ಸಿ.ವೈ ಗಣೇಶ್ ಲಾರ್ಡ್ ಪದಗ್ರಹಣ ಮಾಡಿದರು.

ಪಟ್ಟಣದ ಖಾಸಗಿ ಫಾರಂ ಹೌಸ್‌ನಲ್ಲಿ ಏರ್ಪಡಿಸಿದ್ದ ಪದಗ್ರಹಣ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ರೋಟರಿ ಸಂಸ್ಥೆ ಮೂಲಕ ತಾಲೂಕಿನಲ್ಲಿ ಸಮಾಜ ಸೇವೆ ಮಾಡಲು ಅವಕಾಶ ದೊರಕಿದೆ. ಕಳೆದ 6 ವರ್ಷಗಳಿಂದ ರೋಟರಿ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದೇನೆ. ಮುಂದಿನ ದಿನಗಳಲ್ಲಿ ಎಲ್ಲರ ಸಹಕಾರದೊಂದಿಗೆ ಆರೋಗ್ಯ, ಶಿಕ್ಷಣ, ಪರಿಸರ, ಪೋಲಿಯೋ ಸೇರಿದಂತೆ ಅನೇಕ ಕಾರ್ಯಕ್ರಮ ಮಾಡುವುದಾಗಿ ತಿಳಿಸಿದರು.

ಪದಗ್ರಹಣ ಅಧಿಕಾರಿ ರೋಟರಿಯೆನ್ ಹೆಚ್.ಆರ್.ಕೇಶವ್ ಮಾತನಾಡಿ, ಸಮಾಜ ಸೇವೆ ಮಾಡಲು ತಾಲೂಕಿನಲ್ಲಿ ವಿಫಲ ಅವಕಾಶ ಇದೆ. ಪ್ರತಿಯೊಬ್ಬರೂ ಸಮಾಜ ಸೇವೆ ಮಾಡಬೇಕು. ಸೇವೆ ಮಾಡುವುದರಿಂದ ಮನಸ್ಸಿಗೆ ನೆಮ್ಮದಿ ಮತ್ತು ತೃಪ್ತಿ ಸಿಗುತ್ತದೆ ಎಂದರು.

ವೈದ್ಯರ ದಿನಾಚರಣೆ ಅಂಗವಾಗಿ ಡಾ. ಸೋಮಣ್ಣ, ಡಾ.ಸಹನಾ, ಡಾ.ಜಯಂತ್ ಅವರನ್ನು ಹಾಗೂ ಪತ್ರಿಕಾ ದಿನಾಚರಣೆ ಅಂಗವಾಗಿ ಪತ್ರಕರ್ತ ಬೀಚನಹಳ್ಳಿ ಮಂಜು ಅವರನ್ನು ಸನ್ಮಾನಿಸಲಾಯಿತು.

ಇದೇ ವೇಳೆ ರೋಟರಿ ಸಂಸ್ಥೆಗೆ 10 ಮಂದಿ ಸದಸ್ಯರು ಸೇರ್ಪಡೆಗೊಂಡರು. ಕಾರ್ಯಕ್ರಮದಲ್ಲಿ ಮಾಜಿ ಸಹಾಯಕ ಗವರ್ನರ್ ರೊ.ರಾಜಶೇಖರ ಮೂರ್ತಿ, ಸಹಾಯಕ ಗವರ್ನರ್ ರೊ.ವಾಸುದೇವನ್, ಮಾಜಿ ಅಧ್ಯಕ್ಷ ಕೆ.ಎಂ.ಮಹೇಶ್, ಕಾರ್ಯದರ್ಶಿ ಎಸ್.ಎನ್.ನಿರಂಜನ್, ಖಜಾಂಚಿ ಜಿ.ನಾರಾಯಣ್ ಲಾಲ್, ವಲಯ ಸೇವಾ ನಿರ್ದೇಶಕ ಬಿ.ಎನ್.ಶಿವಣ್ಣ, ಸಮುದಾಯ ಸೇವಾ ನಿರ್ದೇಶಕ ಡಾ. ಜಯಂತ್, ಅಂತಾರಾಷ್ಟ್ರೀಯ ಸೇವಾ ನಿರ್ದೇಶಕ ಬಿ.ಜಿ.ಗಂಗಾಧರ್, ಯುವ ನಿರ್ದೇಶಕ ದೀಪು ಅರಸ್ ಆಯ್ಕೆಯಾದರು. ಕವಿತ ಲಾಡ್, ಸುಮಲತಾ, ರೊ.ಡಾ.ಕೆ. ಮುರುಗೇಶ್, ರೊ.ಆರ್ಮುಗಂ, ರೊ.ಸತೀಶ್ ಸುರಭಿ, ರೊ.ಜಿ. ಜಿ.ರವಿ, ರೊ.ಸಚಿನ್ ಪ್ರಸಾದ್, ರೊ.ಬಸವರಾಜು, ವಿಷ್ಣು ಪ್ರಿಯ, ರೊ.ಎನ್.ಎಸ್.ಕೃಷ್ಣ ಸ್ವಾಮಿ ಇದ್ದರು.

ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣ

ಆರೋಪಿಗಳಿಗೆ ಗಲ್ಲು ಶಿಕ್ಷೆ ವಿಧಿಸಲು ಒತ್ತಾಯ



ತಿ.ನರಸೀಪುರ, ಆ.1– ಬಿಜೆಪಿ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಹತ್ಯೆ ಆರೋಪಿಗಳಿಗೆ ಗಲ್ಲು ಶಿಕ್ಷೆ ವಿಧಿಸುವಂತೆ ಪುರಸಭಾ ಸದಸ್ಯ ಅರ್ಜುನ್ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಪದೇ ಪದೆ ಬಿಜೆಪಿ ಕಾರ್ಯಕರ್ತರ ಮೇಲೆ ಅದರಲ್ಲೂ ಹಿಂದೂಗಳ ಮೇಲೆ ಹಲ್ಲೆ, ಹತ್ಯೆ ನಡೆಯುತ್ತಿರುವುದು ಸೂಕ್ಷ್ಮವಾದ ವಿಚಾರ. ಪ್ರವೀಣ್ ನೆಟ್ಟಾರು ಹತ್ಯೆ ಮೇಲ್ನೋಟಕ್ಕೆ ಮಾಂಸದ ಅಂಗಡಿ ವಿಷಯಕ್ಕೆ ಸಂಬಂಧಿಸಿದಂತೆ ಕಂಡು ಬಂದರೂ, ಹಿಂದೂಗಳು ಮಾಂಸದಂಗಡಿ ನಡೆಸಬಾರದೆನ್ನುವ ಹುನ್ನಾರ ಇಲ್ಲಿ ಸ್ಪಷ್ಟವಾಗಿದೆ. ಪ್ರತಿ ಬಾರಿ ಹಿಂದೂ ಕಾರ್ಯಕರ್ತರ ಹತ್ಯೆಯಾದಾಗ ರಾಜ್ಯ ಸರ್ಕಾರ ಮತ್ತು ಪೊಲೀಸರು ಹತ್ಯೆಗೊಳಗಾದ ಕುಟುಂಬದವರಿಗೆ ನ್ಯಾಯ ದೊರಕಿಸಿ ಕೊಡುವ ಭರವಸೆ ನೀಡುತ್ತಾರೆ. ಆದರೆ ಅದು ಬರೀ ಹೇಳಿಕೆಯಾಗೇ ಉಳಿಯುತ್ತಿದೆ. ಹೀಗಾಗಿ ಪ್ರವೀಣ್ ನೆಟ್ಟಾರು ಹಂತಕರಿಗೆ ಗಲ್ಲು ಶಿಕ್ಷೆ ವಿಧಿಸಿ ಪ್ರವೀಣ್ ಕುಟುಂಬಕ್ಕೆ ನ್ಯಾಯ ದೊರಕಿಸಿಕೊಡುವಂತೆ ಒತ್ತಾಯಿಸಿದ್ದಾರೆ.

ಸಾರ್ವಜನಿಕರಿಂದ ಆಕ್ಷೇಪಣೆ ಸ್ವೀಕಾರ

ಮೈಸೂರು, ಆ.1– ನಂಜನಗೂಡು ನಗರಸಭೆ ಕಾರ್ಯಾಲಯದ ವತಿಯಿಂದ ನಗರಸಭಾ ವ್ಯಾಪ್ತಿಯಲ್ಲಿನ ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನದ ಪಕ್ಕ ಸರ್ವೆ–12ರ ಬದಲಾಗಿ ಕೆಂಡಗಣ್ಣಸ್ವಾಮಿ ಗದ್ದುಗೆ ಬಳಿ ಬಸವ ಸ್ಮಾರಕ ಹಾಗೂ ಉದ್ಯಾನವನ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ಸಾರ್ವಜನಿಕರಲ್ಲಿ ತಂಟೆ–ತಕರಾರು ಹಾಗೂ ಆಕ್ಷೇಪಣೆಗಳಿದ್ದಲ್ಲಿ ಪ್ರಕಟಣೆ ಹೊರಡಿಸಿದ 30 ದಿನಗಳೊಳಗೆ ಲಿಖಿತವಾಗಿ ದಾಖಲೆಗಳೊಂದಿಗೆ ಈ ಕಚೇರಿಗೆ ಸಲ್ಲಿಸಬಹುದು.

ಶ್ರೀಮಹದೇಶ್ವರಸ್ವಾಮಿ ದೇವಾಲಯದ ಮೂಲ ಸೌಕರ್ಯಕ್ಕೆ ಒತ್ತು: ಅಪ್ಪಣ್ಣ




ಸರಗೂರು, ಆ.1– ಕಂದೇಗಾಲದ ಮಹದೇಶ್ವರಸ್ವಾಮಿ ದೇವಾಲಯದ ಮೂಲ ಸೌಕರ್ಯಕ್ಕೆ ಸ್ಪಂದಿಸುವುದಾಗಿ ಬಿಜೆಪಿ ಮುಖಂಡ ಎಂ.ಅಪ್ಪಣ್ಣ ತಿಳಿಸಿದರು.


ತಾಲೂಕಿನ ಕಂದೇಗಾಲ ಶ್ರೀಮಹದೇಶ್ವರ ದೇವಸ್ಥಾನದಲ್ಲಿ ಅಮಾವಾಸ್ಯೆ ಪೂಜೆ ಹಾಗೂ ಅನ್ನದಾಸೋಹ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹಿಂದೂ ದೇವಸ್ಥಾನಗಳು ಸದಾ ಜಾಗೃತ ಸ್ಥಾನಗಳು ಹಿಂದೂ ಧರ್ಮದ ಶಕ್ತಿ ಕೇಂದ್ರಗಳು. ಅಮಾವಾಸ್ಯೆ ಪೂಜೆ ಹಾಗೂ ಅನ್ನದಾಸೋಹ ಸೇವೆ ಮಾಡಲು ಅವಕಾಶ ನೀಡಿದ ದೇವಸ್ಥಾನದ ಅಡಳಿತ ಮಂಡಳಿಗೆ ಅಭಿನಂದಿಸುತ್ತೇನೆ. ಮುಂದೆಯೂ ದೇವಾಲಯದ ಸೇವಾ ಕಾರ್ಯಗಳಿಗೆ ಸ್ಪಂದಿಸುವುದಾಗಿ ತಿಳಿಸಿದರು.

ಈ ವೇಳೆ ಜಿಪಂ ಮಾಜಿ ಸದಸ್ಯರಾದ ಲಕ್ಷ್ಮಣ, ಪಪಂ ಅಧ್ಯಕ್ಷೆ ರಾಧಿಕಾ, ಬಿಜೆಪಿ ಮುಖಂಡರಾದ ಶಂಕರೇಗೌಡ್ರು, ಎಂ.ಪಿ. ಮಂಜುನಾಥ್, ಗುರುಸ್ವಾಮಿ, ಸುನಂದರಾಜ್, ಮಂಜುಳ, ಜಯಲಕ್ಷ್ಮಿ, ಸ್ವಾಮಿ, ವಿವೇಕಾ ಚನ್ನಪ್ಪ, ದೀಪು, ಸೇರಿದಂತೆ ಇನ್ನಿತರರಿದ್ದರು. ಇದಕ್ಕೂ ಮುನ್ನಾ ಶ್ರೀಮಹದೇಶ್ವರಸ್ವಾಮಿಗೆ ಹೋಮ, ಹವನ, ಅಭಿಷೇಕ, ನಡೆಸಿ ದೇವರಿಗೆ ವಿವಿಧ ಹೂಗಳಿಂದ ಅಲಂಕರಿಸಿ, ವಿಶೇಷ ಪೂಜಾ ಕೈಂಕರ್ಯ ನೆರವೇರಿಸಿ ಪ್ರಸಾದ ವಿನಿಯೋಗ ಮಾಡಲಾಯಿತು.

ವರುಣನ ಆರ್ಭಟ: ಹೊಸಹೊಳಲಿನಲ್ಲಿ ಮನೆಗಳು ಕುಸಿತ

15 ಮನೆಗಳು ಶಿಥಿಲ: ಆತಂಕದಲ್ಲಿ ನಿವಾಸಿಗಳು





ಹಂಪಾಪುರ, ಆ.1– ಕಳೆದ ಕೆಲ ದಿನಗಳಿಂದ ನಿರಂತರವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಹೆಚ್.ಡಿ.ಕೋಟೆ ತಾಲೂಕಿನ ಹೊಸಹೊಳಲು ಗ್ರಾಮದಲ್ಲಿ 3 ಮನೆಗಳು ಕುಸಿದಿದೆ. ಅಲ್ಲದೇ 15 ಮನೆಗಳು ಶಿಥಿಲಗೊಂಡಿದ್ದು, ನಿವಾಸಿಗಳು ಆತಂಕದಲ್ಲಿ ಕಾಲ ಕಳೆಯುವಂತಾಗಿದೆ.

ಗ್ರಾಮದ ನಾಗರಾಜು, ಭೈರೇಗೌಡ, ಗೀತಾ, ಪುಟ್ಟರಾಜೇಗೌಡ, ರಮೇಶ್, ಶ್ರೀನಿವಾಸ, ಸಿಂಗೇಗೌಡ ಅವರಿಗೆ ಸೇರಿದ 3 ಹಂಚಿನ ಮನೆಗಳು ಕುಸಿದಿದ್ದು, ದಿನಬಳಕೆಯ ವಸ್ತುಗಳು ಸೇರಿದಂತೆ ಬೆಲೆಬಾಳುವ ವಸ್ತುಗಳು ನಾಶವಾಗಿ ಲಕ್ಷಾಂತರ ರೂ. ನಷ್ಟವಾಗಿದೆ. ಅಲ್ಲದೆ ಗ್ರಾಮದಲ್ಲಿ 15ಕ್ಕೂ ಹೆಚ್ಚು ಮನೆಗಳು ಕುಸಿದು ಬೀಳುವ ಹಂತದಲ್ಲಿದೆ.

ಸತತ ಮಳೆಯಿಂದಾಗಿ ಕಬಿನಿ ಮತ್ತು ತಾರಕ ಜಲಾಶಯಗಳು ಭರ್ತಿಯಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ಮಳೆ ಬೀಳುತ್ತಿರುವ ಹಿನ್ನೆಲೆಯಲ್ಲಿ ಮನೆಗಳ ಗೋಡೆಗಳು ಶೀತಕ್ಕೆ ಒಳಗಾಗಿ 15ಕ್ಕೂ ಹೆಚ್ಚು ಮನೆಗಳು ಯಾವುದೇ ಕ್ಷಣದಲ್ಲೂ ಕುಸಿದು ಬೀಳುವ ಹಂತದಲ್ಲಿವೆ. ಕೆಲ ಮನೆಗಳಲ್ಲಿ ನೆಲದಿಂದ ನೀರು ಉಕ್ಕುತ್ತಿದ್ದು, ಗುಂಡಿ ಬಿದ್ದಿದೆ. ಇದರಿಂದ ನಿವಾಸಿಗಳು ಆತಂಕಕ್ಕೀಡಾಗಿದ್ದು, ಸಂತ್ರಸ್ತ ಕುಟುಂಬಗಳು ಸೂರಿಗಾಗಿ ಪರದಾಡುವಂತಾಗಿದೆ. ಅಲ್ಲದೆ ಕಾಡುಪ್ರಾಣಿಗಳು ಹಾಗೂ ವಿಷ ಜಂತುಗಳ ಹಾವಳಿಯಿಂದ ಜನತೆ ತತ್ತರಿಸಿದ್ದು, ಸಂಬಂಧಪಟ್ಟ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳು ಸೂಕ್ತ ಪರಿಹಾರ ದೊರಕಿಸಿಕೊಡುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಶಾಸಕರಿಂದ ಭರವಸೆ: ಮಳೆ ಅವಾಂತರ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಶಾಸಕ ಅನಿಲ್ ಚಿಕ್ಕಮಾದು, ಸಂತ್ರಸ್ತ ಕುಟುಂಬಗಳಿಗೆ ನೂತನ ಮನೆ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗುವುದು. ಯಾರೂ ಯಾವುದೇ ಕಾರಣಕ್ಕೂ ಧೃತಿಗೆಡಬಾರದು. ಏನೇ ಸಮಸ್ಯೆಗಳಿದ್ದರೂ ತಮ್ಮ ಗಮನಕ್ಕೆ ತಂದೆ ಬಗೆಹರಿಸಲು ಪ್ರಯತ್ನಿಸಲಾಗುವುದು ಎಂದು ಭರವಸೆ ನೀಡಿದ್ದಾರೆ.

ಅಧಿಕಾರಿಗಳ ಭೇಟಿ: ವಿಷಯ ತಿಳಿದು ಹೊಸಹೊಳಲು ಗ್ರಾಪಂ ಅಧ್ಯಕ್ಷೆ ಯಶೋದ, ಪಿಡಿಓ ರಮೇಶ್ ಶಿರಾ, ಗ್ರಾಮಲೆಕ್ಕಿಗ ಗೌಸ್ ಮನೆ ಹಾನಿಗೀಡಾಗಿರುವ ಸ್ಥಳಕ್ಕೆ ತೆರಳಿ ಪರಿಶೀಲಿಸಿದರು. ಅಲ್ಲದೆ ಇಲ್ಲಿನ ಸಂಪೂರ್ಣ ವರದಿಯನ್ನು ತಹಸೀಲ್ದಾರ್ ಮೂಲಕ ಸರ್ಕಾರಕ್ಕೆ ತಲುಪಿಸಿ, ಸಂಕಷ್ಟದಲ್ಲಿರುವ ಕುಟುಂಬಗಳನ್ನು ಗ್ರಾಮದ ಡೈರಿ ಎದುರಿನ ಗ್ರಾಪಂಗೆ ಸೇರಿದ 1.5 ಎಕರೆ ಖಾಲಿ ನಿವೇಶಕ್ಕೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಮಾಹಿತಿ ನೀಡಿದ್ದಾರೆ. ಅಲ್ಲದೆ ಕಬಿನಿ ಜಲಾಶಯದ ಅಧಿಕಾರಿಗಳಾದ ಜನಾರ್ಧನ್, ರಮೇಶ್‌ಬಾಬು ಸಹ ಗ್ರಾಮಕ್ಕೆ ಭೇಟಿ ನೀಡಿ ಪರಿಶೀಲಿಸುವುದಾಗಿ ತಿಳಿಸಿದ್ದಾರೆ.

ಸರ್ಕಾರಿ ಆಸ್ತಿ ಅಕ್ರಮ ಖಾತೆ ಆರೋಪ

ಮೂಲ ಖಾತೆದಾರರಿಂದ ನಿಯಮಾನುಸಾರ ಖರೀದಿ: ಸ್ಪಷ್ಟನೆ



ತಿ.ನರಸೀಪುರ, ಆ.1– ಸರ್ಕಾರಿ ಆಸ್ತಿಯನ್ನು ಅಕ್ರಮವಾಗಿ ಖಾತೆ ಮಾಡಿಸಿಕೊಂಡು ಕಟ್ಟಡ ನಿರ್ಮಿಸುತ್ತಿದ್ದಾರೆ ಎಂದು ಆರೋಪಿಸಿರುವ ಪುರಸಭಾ ಸದಸ್ಯ ಎಸ್.ಕೆ.ಕಿರಣ್ ಆರೋಪ ಆಧಾರ ರಹಿತ. ನಿವೇಶನವನ್ನು ಮೂಲ ಖಾತೆದಾರರಿಂದ ನಿಯಮಾನುಸಾರ ಶುದ್ಧ ಕ್ರಯಕ್ಕೆ ಖರೀದಿಸಿರುವುದಾಗಿ ಪುರಸಭಾ ಸದಸ್ಯ ಟಿ.ಎಂ.ನಂಜುಂಡಸ್ವಾಮಿ ಸ್ಪಷ್ಟಪಡಿಸಿದರು.

ಪುರಸಭಾ ಸದಸ್ಯ ಎಸ್.ಕೆ.ಕಿರಣ್ ಇತ್ತೀಚೆಗೆ ಸುದ್ದಿಗೋಷ್ಠಿಯಲ್ಲಿ ಪುರಸಭಾ ವ್ಯಾಪ್ತಿಯ ಇಂದಿರಾ ಕಾಲೋನಿ ಖಾತೆ ನಂಬರ್ 718 ರ ಆಸ್ತಿ ಸರ್ಕಾರದ್ದಾಗಿದ್ದು, ಇದನ್ನು ಸದಸ್ಯ ಟಿ.ಎಂ.ನಂಜುಂಡಸ್ವಾಮಿ ತನ್ನ ಹೆಸರಿಗೆ ಖಾತೆ ಮಾಡಿಸಿಕೊಂಡು ಅಕ್ರಮವಾಗಿ ಕಟ್ಟಡ ನಿರ್ಮಿಸುತ್ತಿದ್ದಾರೆ ಎಂದು ಆರೋಪಿಸಿದ್ದರು.

ಈ ಹಿನ್ನೆಲೆಯಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಮ್ಮ ಮೇಲಿನ ಆರೋಪಕ್ಕೆ ಸ್ಪಷ್ಟನೆ ನೀಡಿದ ನಂಜುಂಡಸ್ವಾಮಿ, ವಿವಾದಾತ್ಮಕ ಆಸ್ತಿ ಮಹದೇವ ಬಿನ್ ಲೇಟ್ ಮಾದೇಗೌಡ ಅವರ ಪಿತ್ರಾರ್ಜಿತ ಆಸ್ತಿಯಾಗಿದ್ದು, 1991ರಲ್ಲಿ ಪಂಚಾಯಿತಿ ವಿಭಾಗ ಪತ್ರದ ಮೂಲಕ ಮಹದೇವು ಅವರ ಭಾಗಕ್ಕೆ ಬಂದಿದೆ. ಭೈರಾಪುರ ಗ್ರಾಪಂನಲ್ಲಿ ಕಂದಾಯ ಕಟ್ಟಿ ಅವರು ಖಾತೆ ಮಾಡಿಸಿಕೊಂಡಿದ್ದಾರೆ. ಭೈರಾಪುರ ಪಂಚಾಯಿತಿ ತಿ.ನರಸೀಪುರ ಪುರಸಭೆಗೆ ವಿಲೀನಗೊಂಡ ನಂತರ ಪುರಸಭೆಯಲ್ಲಿ ನಿಯಮಾನುಸಾರ ಕಂದಾಯ ಕಟ್ಟಿ ಕೆಎಂಎಫ್ 24 ಪಡೆದುಕೊಂಡಿದ್ದಾರೆ.

ಆನಂತರ ನಾನು ಹಾಗೂ ಕೆ.ಎಸ್. ಹೇಮಂತ್ ಕುಮಾರ್ 2020ರಲ್ಲಿ ಮಹದೇವ ಹಾಗೂ ತಾಯಮ್ಮ ಕೋಂ ಮಹದೇವ ಅವರಿಂದ ನಿಯಮಾನುಸಾರ ಶುದ್ಧ ಕ್ರಯಕ್ಕೆ ಖರೀದಿಸಿ, ಸದರಿ ನಿವೇಶನಕ್ಕೆ ಕಂದಾಯ ಹಾಗೂ ಬದಲಾವಣೆ ಶುಲ್ಕ ಕಟ್ಟಿ ನಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡು ವಾಣಿಜ್ಯ ಉದ್ದೇಶಕ್ಕೆ ಕಟ್ಟಡ ಕಟ್ಟಲು ಲೈಸೆನ್ಸ್ ಪಡೆದು ಕಟ್ಟಡ ನಿರ್ಮಿಸಿರುತ್ತೇವೆ. ಆದರೆ ಸದಸ್ಯ ಕಿರಣ್ ಹೇಳಿರುವಂತೆ ಯಾವುದೇ ಸ್ವತ್ತನ್ನು ನಾವು ಅಕ್ರಮವಾಗಿ ಸೃಷ್ಟಿಸಿಲ್ಲ. ಆದರೂ ವಿನಾಕಾರಣ ನನ್ನ ರಾಜಕೀಯ ಏಳಿಗೆ ಸಹಿಸದ ಕಿರಣ್ ಕೆಲವರ ಜೊತೆ ಸೇರಿ ನನ್ನ ತೇಜೋವಧೆ ಮಾಡಿ ರಾಜಕೀಯ ಶಕ್ತಿ ಕುಗ್ಗಿಸಲು ಪ್ರಯತ್ನಿಸುತ್ತಿದ್ದಾರೆ ಎಂದು ಕಿಡಿಕಾರಿದರು.

ವಿನಾಕಾರಣ ಇಲ್ಲಸಲ್ಲದ ಆಧಾರ ರಹಿತ ಆರೋಪದಲ್ಲಿ ನಿರತರಾಗಿರುವ ಎಸ್.ಕೆ.ಕಿರಣ್ ಅವರಿಗೆ ಈಗಾಗಲೇ ತಿಳುವಳಿಕೆ ನೋಟಿಸ್ ನೀಡಲಾಗಿದ್ದು, ಅವರ ವಿರುದ್ಧ ನ್ಯಾಯಾಲಯದಲ್ಲಿ ಮಾನನಷ್ಟ ಮೊಕದ್ದಮೆ ದಾಖಲಿಸುತ್ತೇನೆ ಎಂದು ನಂಜುಂಡಸ್ವಾಮಿ ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಹೇಮಂತ್ ಕುಮಾರ್ ಇದ್ದರು.



ನಂಜನಗೂಡು ತಾಲೂಕು ದೊಡ್ಡ ಕವಲಂದೆ ಠಾಣೆಯ ಸಹಾಯಕ ಉಪ ನಿರೀಕ್ಷಕ ಹುದ್ದೆಯಿಂದ ಕೃಷ್ಣರಾಜನಗರ ಠಾಣೆಯ ಉಪನಿರೀಕ್ಷಕರಾಗಿ ಪದೋನ್ನತಿಯೊಂದಿಗೆ ವರ್ಗಾವಣೆಗೊಂಡ ಸ್ವಾಮಿನಾಯಕ ಅವರನ್ನು ಆತ್ಮೀಯವಾಗಿ ಬೀಳ್ಕೊಡಲಾಯಿತು. ಕವಲಂದೆ ಅಂಚೆ ಪಾಲಕ ಮಂಜುನಾಥ, ಅಂಚೆ ಸಹಾಯಕ ಹರೀಶ್ ಕುಮಾರ್, ಮಣಿಕಂಠ ಸ್ವಾಮಿ, ವೆಂಕಟೇಶ್ ಮತ್ತಿತರರು ಹಾಜರಿದ್ದರು.

ಚಿರತೆ ದಾಳಿ: ರೈತನಿಗೆ ಗಾಯ

ಹೆಚ್.ಡಿ.ಕೋಟೆ, ಆ.1– ಚಿರತೆ ದಾಳಿಗೆ ರೈತರೊಬ್ಬರು ಗಾಯಗೊಂಡಿರುವ ಘಟನೆ ಭಾನುವಾರ ತಾಲೂಕಿನ ಮೇಟಿಕುಪ್ಪೆ ಗ್ರಾಮದಲ್ಲಿ ನಡೆದಿದೆ.

ಗ್ರಾಮದ ರೈತ ಸೋಮರಾಜು ಗಾಯಗೊಂಡವರು. ಇವರು ತಮ್ಮ ಜಮೀನಿನಲ್ಲಿ ಕೆಲಸ ಮುಗಿಸಿಕೊಂಡು ಸಂಜೆ ಮನೆಗೆ ಬರುತ್ತಿದ್ದ ವೇಳೆ ಚಿರತೆ ಏಕಾಏಕಿ ದಾಳಿ ಮಾಡಿದೆ. ಈ ವೇಳೆ ಸೋಮರಾಜು ಅವರ ಚೀರಾಟದಿಂದ ಅಕ್ಕಪಕ್ಕದ ಜಮೀನಿನ ರೈತರು ಸ್ಥಳಕ್ಕಾಗಮಿಸಿ ಚಿರತೆ ಓಡಿಸಿದ್ದಾರೆ. ಬಳಿಕ ಮೇಟಿಕುಪ್ಪೆ ಆರ್‌ಎಫ್‌ಓ ಹರ್ಷಿತ್‌ಗೆ ಕರೆ ಮಾಡಿ ವಿಷಯ ತಿಳಿಸಿದರು. ನಂತರ ಸ್ಥಳಕ್ಕಾಗಮಿಸಿದ ಹರ್ಷಿತ್ ಹಾಗೂ ಸಿಬ್ಬಂದಿ ಪರಿಶೀಲನೆ ನಡೆಸಿ, ತಮ್ಮ ವಾಹನದಲ್ಲಿ ಗಾಯಾಳು ಸೋಮರಾಜು ಅವರನ್ನು ಹೆಚ್.ಡಿ.ಕೋಟೆ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.

ಮುಂಬರುವ ದಿನಗಳಲ್ಲಿ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ

ಹುಣಸೂರು ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಸಿ.ವಿ.ರವಿ



ಹನಗೋಡು, ಆ.1– ಮುಂಬರುವ ದಿನಗಳಲ್ಲಿ ಸಾರ್ವಜನಿಕ ಸ್ಥಳಗಳಲ್ಲೇ ಸಭೆಗಳು ನಡೆಯಲಿದ್ದು, ಯಾವುದೇ ಸಮಸ್ಯೆಗಳಿದ್ದರೂ ಅವುಗಳನ್ನು ಸ್ಥಳದಲ್ಲೇ ಬಗೆಹರಿಸಲಾಗುವುದು ಎಂದು ಹುಣಸೂರು ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಸಿ.ವಿ.ರವಿ ತಿಳಿಸಿದರು.

ಹನಗೋಡು ಗ್ರಾಪಂ ಆವರಣದಲ್ಲಿ ನಡೆದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅವರು, ಪೊಲೀಸರು ಸಾರ್ವಜನಿಕರ ಸಮ್ಮುಖದಲ್ಲೇ ಸಮಸ್ಯೆ ಆಲಿಸಲಿದ್ದಾರೆ. ಇದರಿಂದ ಸಾರ್ವಜನಿಕರಿಗೆ ಪೊಲೀಸರ ಬಗ್ಗೆ ಇರುವ ಭಯದ ವಾತಾವರಣ ಹೋಗಲಾಡಿಸಿ ಪೊಲೀಸ್ ಇಲಾಖೆಯನ್ನು ಮತ್ತಷ್ಟು ಜನಸ್ನೇಹಿಯನ್ನಾಗಿಸಲು ಈ ವಿನೂತನ ಕ್ರಮ ಕೈಗೊಳ್ಳಲಾಗಿದೆ. ಅಪರಾಧಗಳನ್ನು ತಡೆಯಲು ಹಾಗೂ ಸಾರ್ವಜನಿಕರಲ್ಲಿ ಪೊಲೀಸರ ಬಗ್ಗೆ ವಿಶ್ವಾಸ ಮೂಡಿಸುವ ಉದ್ದೇಶದಿಂದ ಈ ಜನಸ್ನೇಹಿ ಪೊಲೀಸ್ ಸಭೆಯನ್ನು ತಿಂಗಳಿಗೊಮ್ಮೆ ಠಾಣಾ ವ್ಯಾಪ್ತಿಯ ವಿವಿಧೆಡೆ ನಡೆಸಲಾಗುವುದು ಎಂದರು.

ಪರಿಶೀಲನೆ: ಠಾಣಾ ವ್ಯಾಪ್ತಿಯ ಪ್ರತಿಯೊಂದು ಹೋಟೆಲ್, ಲಾಡ್ಜ್, ಪ್ರವಾಸಿ ಮಂದಿರ ಸೇರಿದಂತೆ ವಿದೇಶ ಮತ್ತು ನೆರೆ ರಾಜ್ಯಗಳಿಂದ ಜನರು ಬಂದು ನೆಲೆಸಿರುವ ಬಾಡಿಗೆ ಮನೆಗಳಿಗೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸುವರು. ಅನುಮಾನಾಸ್ಪದ ವ್ಯಕ್ತಿಗಳು ಕಂಡು ಬಂದಲ್ಲಿ ಅಂತಹವರ ಬಗ್ಗೆ ಮಾಹಿತಿ ನೀಡಿ ಎಂದರು.

ಖದೀಮರ ಮೇಲೆ ನಿಗಾ: ಸಾರ್ವಜನಿಕ ಸ್ಥಳಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಮೂಲಕ ಅಪರಾಧ ಕೃತ್ಯಕ್ಕೆ ಹೊಂಚು ಹಾಕುವ ಖದೀಮರ ಮೇಲೆ ನಿಗಾ ಇರಿಸಲಾಗುವುದು. ಠಾಣಾ ವ್ಯಾಪ್ತಿಯ ಪ್ರಮುಖ ವೃತ್ತಗಳು, ಸೂಕ್ಷ್ಮ ಪ್ರದೇಶಗಳಲ್ಲಿ ಸಿಬ್ಬಂದಿಯನ್ನು ಕರ್ತವ್ಯಕ್ಕೆ ನಿಯೋಜಿಸಲಾಗುವುದು. ಅಪರಾಧ ತಡೆಯಲು ಸಾರ್ವಜನಿಕರು ಸಹಕರಿಸಬೇಕು ಇನ್ಸ್‌ಪೆಕ್ಟರ್ ಸಿ.ವಿ.ರವಿ ಎಂದು ಮನವಿ ಮಾಡಿದರು.

ಕಿರಂಗೂರು ಸ್ವಾಮಿ ಮತ್ತು ಇಮ್ತಿಯಾಜ್ ಮಾತನಾಡಿ, ಕೆಲ ಕಿಡಿಗೇಡಿಗಳು ಇಲ್ಲಿನ ಕಾಲೇಜು ಬಳಿ ಕಿರಿಕಿರಿ ಉಂಟು ಮಾಡುತ್ತಿದ್ದಾರೆ. ಅಂತವರಿಗೆ ಸರಿಯಾದ ಬುದ್ಧಿ ಕಲಿಸಬೇಕು. ಜೂಜು ದಂಧೆ ತಡೆಗಟ್ಟಬೇಕು ಎಂದು ಒತ್ತಾಯಿಸಿದರು.

ಸಭೆಯಲ್ಲಿ ಗ್ರಾಪಂ ಅಧ್ಯಕ್ಷ ಬೋರೇಗೌಡ, ಪಿಡಿಓ ಪ್ರಶಾಂತ್, ಸದಸ್ಯರಾದ ಶಿವಣ್ಣ, ಸಂತೋಷ್, ಜಯಲಕ್ಷ್ಮಿ, ಸಂಗೀತ, ನೂರ್ ಜಾಹನ್, ಮಾಜಿ ಪ್ರಧಾನ ಪ್ರಾಣೇಶ ಶೆಟ್ಟಿ, ತಾಪಂ ಮಾಜಿ ಸದಸ್ಯ ಕೆ.ಗಣಪತಿ, ಸುರೇಶ್, ಪೊಲೀಸ್ ಮುಖ್ಯ ಪೇದೆ ನಹೀಂ ಪಾಷ, ಹೊಂಬೇಗೌಡ ಮತ್ತಿತರರಿದ್ದರು. ಇದೇ ವೇಳೆ ಪೊಲೀಸ್ ಇಲಾಖೆಯಿಂದ ಹನಗೋಡು ಕಾಲೇಜಿಗೆ ದೂರು ಪೆಟ್ಟಿಗೆ ನೀಡಲಾಯಿತು.

ಹುಲಿ ದಾಳಿಗೆ ಬಲಿಯಾದ ರೈತ ಕುಟುಂಬಕ್ಕೆ ಸಹಾಯಧನ



ನಂಜನಗೂಡು ತಾಲೂಕಿನ ಹಾದನೂರು ಒಡೆಯನಪುರ ಗ್ರಾಮದಲ್ಲಿ ಭಾನುವಾರ ಹುಲಿ ದಾಳಿಯಿಂದ ಸಾವನ್ನಪ್ಪಿದ ರೈತ ಪುಟ್ಟಸ್ವಾಮಿಗೌಡ ಅವರ ಕುಟುಂಬಕ್ಕೆ ಶಾಸಕ ಬಿ.ಹರ್ಷವರ್ಧನ್ ನೀಡಿದ 10 ಸಾವಿರ ರೂ.ಗಳ ವೈಯಕ್ತಿಕ ಧನಸಹಾಯವನ್ನು ಬಿಜೆಪಿ ಕಾರ್ಯಕರ್ತರು ವಿತರಿಸಿದರು. ಈ ವೇಳೆ ತಾಪಂ ಮಾಜಿ ಅಧ್ಯಕ್ಷ ಬಿ.ಎಸ್.ಮಹದೇವಪ್ಪ, ಹುರ ಗ್ರಾಪಂ ಅಧ್ಯಕ್ಷ ಚಂದ್ರು, ಮುಖಂಡ ರಂಗಸ್ವಾಮಿ ಹಾಜರಿದ್ದರು.

ಎಂ.ರಾಮಶೆಟ್ಟಿ ನಿಧನ



ಸರಗೂರು, ಆ.1– ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕು ಪತ್ರಕರ್ತರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಆರ್. ನಾಗರಾಮ್ ಅವರ ತಂದೆ ಎಂ.ರಾಮಶೆಟ್ಟಿ (82) ಸೋಮವಾರ ಬೆಳಗ್ಗೆ ನಿಧನರಾದರು. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸಂಜೆ ಪಟ್ಟಣದ ತೊಗಟವೀರ ಸಮಾಜದ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಮೃತರ ನಿಧನಕ್ಕೆ ಶಾಸಕ ಅನಿಲ್ ಚಿಕ್ಕಮಾದು, ಜಿಲ್ಲಾ ಪತ್ರಕರ್ತರ ಸಂಘ, ತಾಲೂಕು ಪತ್ರಕರ್ತರ ಸಂಘ, ಛಾಯಾಗ್ರಾಹಕ ಸಂಘ ಪಟ್ಟಣದ ವರ್ತಕರ ಸಂಘದ ಸದಸ್ಯರು ಹಾಗೂ ವಿವಿಧ ಪಕ್ಷಗಳ ಮುಖಂಡರು ಸಂತಾಪ ಸೂಚಿಸಿದ್ದಾರೆ.

ಕೆಂಡಗಣ್ಣಸ್ವಾಮಿ



ಹೆಚ್.ಡಿ.ಕೋಟೆ, ಆ.1– ತಾಲೂಕಿನ ಬೀಚನಹಳ್ಳಿ ಗ್ರಾಮದ ನಿವಾಸಿ ನಾಗಮ್ಮ ಅವರ ಪುತ್ರ ಕೆಂಡಗಣ್ಣಸ್ವಾಮಿ(28) ಸೋಮವಾರ ಪಟ್ಟಣದ ಹೌಸಿಂಗ್ ಬೋರ್ಡ್ ನಿವಾಸದಲ್ಲಿ ನಿಧನರಾದರು.

ಮೃತರು, ತಾಯಿ, ತಂಗಿ ಕಾವ್ಯ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ತಾಲೂಕಿನ ಹಿರೇಹಳ್ಳಿ ಗ್ರಾಮದ ಜಮೀನಿನಲ್ಲಿ ಸಂಜೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಪರಿಶಿಷ್ಟ ವರ್ಗಗಳಿಗೆ ನಿಗಮ, ಮಂಡಳಿಗಳಲ್ಲಿ ಸ್ಥಾನಮಾನಕ್ಕೆ ಆಗ್ರಹ

ಮೈಸೂರು, ಆ.1(ಆರ್‌ಕೆಬಿ)– ಕೇಂದ್ರ ಹಾಗೂ ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಪಕ್ಷದಲ್ಲಿನ ಪರಿಶಿಷ್ಟ ವರ್ಗಕ್ಕೆ ಸೇರಿದವರಿಗೆ ಯಾವುದೇ ಸ್ಥಾನಮಾನ ನೀಡದೇ ಇರುವುದು ಬೇಸರದ ಸಂಗತಿಯಾಗಿದೆ. ಹೀಗಾಗಿ ಬಿಜೆಪಿ ಪರಿಶಿಷ್ಟ ಜಾತಿ ಮೋರ್ಚಾ ನಗರ ಪ್ರಧಾನ ಕಾರ್ಯದರ್ಶಿ ಎಂ.ನರಸಿಂಹಮೂರ್ತಿ ಅವರನ್ನು ಯಾವುದಾದರೊಂದು ನಿಗಮ ಮಂಡಳಿ ಅಧ್ಯಕ್ಷರನ್ನಾಗಿ ನೇಮಕ ಮಾಡಬೇಕೆಂದು ರಾಷ್ಟ್ರಕ್ರಾಂತಿ ಫೌಂಡೇಷನ್ ಸೇವಾದಳ ಆಗ್ರಹಿಸಿದೆ.

ಅಧ್ಯಕ್ಷ ಜಿ.ಎಂ.ಮಹದೇವ ಮೈಸೂರು ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಳೆದ 3 ದಶಕಗಳಿಂದ ಪಕ್ಷ ಸಂಘಟನೆಯಲ್ಲಿ ತೊಡಗಿಸಿಕೊಂಡಿರುವ ಎಂ.ನರಸಿಂಹಮೂರ್ತಿ ಅವರಿಗೆ ಯಾವುದಾದರೊಂದು ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ನೀಡಿದಲ್ಲಿ ಮುಂದಿನ ಚುನಾವಣೆ ವೇಳೆ ಪರಿಶಿಷ್ಟ ಜಾತಿಯ ಮತದಾರರನ್ನು ಪಕ್ಷದತ್ತ ಸೆಳೆಯಲು ಸಹಕಾರಿಯಾಗುತ್ತದೆ. ಹೀಗಾಗಿ ಎರಡನೇ ಬಾರಿ ನಿಗಮ ಮಂಡಳಿಗಳಿಗೆ ನೇಮಕ ಸಂದರ್ಭದಲ್ಲಿ ಇವರಿಗೆ ಸೂಕ್ತ ಸ್ಥಾನಮಾನ ನೀಡಬೇಕೆಂದು ಅವರು ಪಕ್ಷದ ವರಿಷ್ಠರನ್ನು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ದಾಸನಕೊಪ್ಪಲು ಮಹೇಶ್, ಚೋರನಹಳ್ಳಿ ಬೊಮ್ಮ, ಜವರಪ್ಪ ಉಪಸ್ಥಿತರಿದ್ದರು.

ವಾಣಿಜ್ಯ ಬಳಕೆ ಸಿಲಿಂಡರ್ ಬೆಲೆ 36 ರೂ. ಇಳಿಕೆ

ನವದೆಹಲಿ: ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು ಸೋಮವಾರ 36 ರೂ. ಇಳಿಕೆ ಮಾಡಲಾಗಿದೆ. ಇದರೊಂದಿಗೆ ವಾಣಿಜ್ಯ ಬಳಕೆಯ 19 ಕೆ.ಜಿ. ಎಲ್‌ಪಿಜಿ ಸಿಲಿಂಡರ್ ದರ 2012.50ಕ್ಕೆ ಬದಲಾಗಿ 1,976 ರೂ. ಆಗಿದೆ. ಸ್ಥಳೀಯ ಮಾರಾಟ ತೆರಿಗೆಗೆ ಅನುಗುಣವಾಗಿ ರಾಜ್ಯದಿಂದ ರಾಜ್ಯಕ್ಕೆ ಬೆಲೆಯಲ್ಲಿ ವ್ಯತ್ಯಾಸ ಆಗಲಿದೆ. ಪರಿಷ್ಕೃತ ದರ ಇಂದಿನಿಂದಲೇ ಜಾರಿಯಾಗಲಿದೆ. ಗೃಹ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆ ಆಗಿಲ್ಲ. ಜುಲೈ 1ರಂದು ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು 198 ರೂ. ಕಡಿತ ಮಾಡಿದ್ದವು. ಅದಕ್ಕೂ ಮೊದಲು ಜೂನ್ 1ರಂದು 135 ರೂ. ದರ ಇಳಿಕೆ ಮಾಡಲಾಗಿತ್ತು.